ಕರ್ನಾಟಕ ನಾಟಕ ಅಕಾಡೆಮಿ

# ಚಿಕ್ಕಮಗಳೂರು

## ಜಿಲ್ಲಾ ರಂಗಮಾಹಿತಿ



ಜಿಲ್ಲಾ ರಂಗಮಾಹಿತಿ ಮಾಲಿಕೆ

# ಚಿಕ್ಕಮಗಳೂರು
# ಜಿಲ್ಲಾ ರಂಗ ಮಾಹಿತಿ

ಬಿ.ಎಸ್. ಜ್ವಾಲನಪ್ಪ

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨
ದೂರವಾಣಿ : ೦೮೦ – ೨೨೨೩ ೭೪೮೪

**Chickkamagaluru Jilla Ranga Mahiti**
District Theatre information written by
**B.N. Jwalanappa**
Published by **B. Manjunatha Aradha,** Registrar,
Karnataka Nataka Academy, Kannada Bhavana,
J.C. Road, Bengaluru-560002 Phone : 080-22237484

| | | |
|---|---|---|
| ಹಕ್ಕುಗಳು | : | ಕರ್ನಾಟಕ ನಾಟಕ ಅಕಾಡೆಮಿ |
| ಮೊದಲ ಮುದ್ರಣ | : | ೨೦೧೬ |
| ಪ್ರತಿಗಳು | : | ೧,೦೦೦ |
| ಪುಟಗಳು | : | xii x 62 |
| ಬೆಲೆ | : | ರೂ. ೬೦/- |

**ಪ್ರಕಾಶಕರು**
**ಬಿ. ಮಂಜುನಾಥ ಆರಾಧ್ಯ,** ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦೦೦೨
ದೂರವಾಣಿ : ೦೮೦ - ೨೨೨೩೭೪೮೪

ಮುಖಪುಟ ವಿನ್ಯಾಸ :
**ಕೃಷ್ಣ ರಾಯಚೂರು**

ಮುದ್ರಣ :
**ಸುಹಾಸ್ ಗ್ರಾಫಿಕ್ಸ್**
ಬೆಂಗಳೂರು
ಮೊ. : ೯೮೪೫೩ ೫೫೫೦೯

# ಅಧ್ಯಕ್ಷರ ನುಡಿ

ಕರ್ನಾಟಕ ನಾಟಕ ಅಕಾಡೆಮಿ ಮೂರು ವರ್ಷದ ನಮ್ಮ ಅವಧಿಯ ಮುಕ್ತಾಯದ ಹಂತಕ್ಕೆ ಬಂದಿದ್ದೇವೆ. ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಬಾಗಲಕೋಟೆ ಜಿಲ್ಲೆ ಇಳಕಲ್‌ನಲ್ಲಿ 30 ದಿನಗಳ ವೃತ್ತಿರಂಗಭೂಮಿ ತರಬೇತಿ ಶಿಬಿರ, ಮುಂಬಯಿ, ದೆಹಲಿ ಹಾಗೂ ಕೇರಳದ ತ್ರಿಶೂರಿನಲ್ಲಿ ಹೊರರಾಜ್ಯ ನಾಟಕೋತ್ಸವ, ಕಾಸರಗೋಡಿನಲ್ಲಿ ಗಡಿನಾಡು ಬಹುಭಾಷಾ ನಾಟಕೋತ್ಸವ ಮತ್ತು ಮೈಂದರ್ಗಿಯಲ್ಲಿ ಗಡಿನಾಡ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮಗಳನ್ನು ಕಳೆದ ಮೂರು ವರ್ಷಕಾಲ ಹಮ್ಮಿಕೊಂಡಿದ್ದೆವು.

ವಿಜಯಪುರದಲ್ಲಿ 2015 ಸೆ.24 ರಿಂದ 30 ರ ವರೆಗೆ ನಡೆದರಾಜ್ಯ ವೃತ್ತಿರಂಗ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್. ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ. ಆಲ್ದಾಳ ಅವರಿಗೆ ಕಲಬುರಗಿಯಲ್ಲಿ, ಹಿರಿಯ ನಟಕಂಚಿಕೇರಿ ಶಿವಣ್ಣ ಅವರಿಗೆ ದಾವಣಗೆರೆಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿಜಿಲ್ಲೆಯ ಶೇಷಗಿರಿಯಲ್ಲಿ 21 ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಹಾಗೂ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಏಳು ದಿನಗಳ ಕಾಲ ನಡೆದ ವೃತ್ತಿರಂಗಭೂಮಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕಯೋಜನೆಯಡಿ 30 ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ಏರ್ಪಡಿಸಿದ್ದೇವೆ. ವಿಶೇಷ ಘಟಕ ಯೋಜನೆಯಡಿ ಐದು ಕಲಾವಿದರ ಮತ್ತು ಗಿರಿಜನ ಯೋಜನೆಯಲ್ಲಿ ಇಬ್ಬರು ಕಲಾವಿದರ ಸಾಕ್ಷ್ಯಚಿತ್ರ ನಿರ್ಮಾಣ ಮಾಡಲಾಗಿದೆ. 12 ವೃತ್ತಿ ನಾಟಕ ಕಂಪನಿಗಳ ಸಾಕ್ಷ್ಯಚಿತ್ರ ನಿರ್ಮಿಸಲಾಗುತ್ತಿದೆ. ಫೆಲೋಶಿಪ್

ಯೋಜನೆ ಮುಂದುವರಿದಿದೆ. ಸರಿಸುಮಾರು 20 ವರ್ಷಗಳಿಂದ ಸ್ಥಗಿತಗೊಂಡಿದ್ದ ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ. ನಾಟಕ ರಚನಾ ಶಿಬಿರದಲ್ಲಿ ಆಯ್ಕೆಯಾದ ಏಳು ನಾಟಕಗಳ ಸಂಕಲನವನ್ನು ಹೊರತರಲಾಗುವುದು.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪ್ರಥಮ ಹಂತದಲ್ಲಿ ಜಿಲ್ಲಾ ರಂಗಮಾಹಿತಿ ಮಾಲಿಕೆ ಮತ್ತು ರಂಗಸಂಪನ್ನರು ಮಾಲಿಕೆಯ 18 ಪುಸ್ತಕಗಳು ಬಿಡುಗಡೆಯಾಗಿವೆ. ಎರಡನೇ ಹಂತದಲ್ಲಿ 15 ಪುಸ್ತಕಗಳು ಬಿಡುಗಡೆಯಾಗುತ್ತಿವೆ. ಶತಮಾನದ ಶಕಪುರುಷ ಏಣಗಿ ಬಾಳಪ್ಪ, ರಂಗಭೂಮಿ ಮತ್ತು ಮಹಿಳೆ ಪುಸ್ತಕಗಳನ್ನು ಹೊರತರಲಾಗಿದೆ. 1959 ರಿಂದ 2016 ರ ವರೆಗಿನ ನಾಟಕ ಅಕಾಡೆಮಿಯ ಎಲ್ಲಾ ಪ್ರಶಸ್ತಿ ಪುರಸ್ಕೃತರ ಪರಿಚಯದ ಪುಸ್ತಕವನ್ನು ಹೊರತರಲು ಕ್ರಮವಹಿಸಲಾಗುತ್ತಿದೆ. ಈ ಎಲ್ಲಾ ಕನಸು ಸಾಕಾರಗೊಳ್ಳಲು ಶ್ರಮಿಸಿದ ಪ್ರಕಟಣಾ ಸಮಿತಿ ಸದಸ್ಯರು/ ನಾಟಕ ಅಕಾಡೆಮಿ ಸದಸ್ಯರು ಹಾಗೂ ಜಿಲ್ಲಾ ರಂಗಮಾಹಿತಿ ಮಾಲಿಕೆಯಡಿ ಸರಿಸುಮಾರು 25 ಮತ್ತು ರಂಗಸಂಪನ್ನರು ಮಾಲಿಕೆಯಡಿ 15 ಕಲಾವಿದರ ಪುಸ್ತಕಗಳನ್ನು ಬರೆದುಕೊಟ್ಟವೆಲ್ಲಾ ಲೇಖಕರಿಗೆ, ಪುಸ್ತಕವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ಸುಹಾಸ್ ಗ್ರಾಫಿಕ್ಸ್, ಮುರಳೀಧರವರಿಗೂ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ. ಮಂಜುನಾಥ ಆರಾಧ್ಯ ಹಾಗೂ ಅಕಾಡೆಮಿಯ ಎಲ್ಲ ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳು.

– ಎಲ್.ಬಿ. ಶೇಖ (ಮಾಸ್ತರ)<br>
ಅಧ್ಯಕ್ಷರು<br>
ಕರ್ನಾಟಕ ನಾಟಕ ಅಕಾಡೆಮಿ

# ಇದು ಆರಂಭ

ಒಂದೊಂದು ಜಿಲ್ಲೆಗಳ ರಂಗಮಾಹಿತಿ ಪ್ರತ್ಯೇಕವಾಗಿ ಪುಸ್ತಕ ರೂಪದಲ್ಲಿ ಲಭ್ಯವಿರಬೇಕು ಎನ್ನುವುದು ನಾಟಕ ಅಕಾಡೆಮಿಯ ಬಹುದಿನದ ಕನಸು. ಇದು ಗುರುತರ ಕೆಲಸ. ಬಿ.ವಿ. ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಇದಕ್ಕೆ ಚಾಲನೆ ನೀಡಲಾಯಿತು. ಅಕಾಡೆಮಿ ಸದಸ್ಯರಿಗೆ ಇದರ ಹೊಣೆ ಹೊರಿಸಿ ಜಿಲ್ಲೆಯ ಮಟ್ಟದಲ್ಲಿ ಮಾಹಿತಿ ಸಂಗ್ರಹಿಸುವ ಹತ್ತಾರು ರಂಗಕರ್ಮಿಗಳ ಸಂಪಾದಕೀಯ ಸಮಿತಿ ರಚಿಸಲಾಯಿತು. ಹಾಗೂ ಹೀಗೂ 5–6 ಜಿಲ್ಲೆಗಳ ರಂಗಮಾಹಿತಿಯೂ ಸಿದ್ಧಗೊಂಡಿತು. ಆದರೆ ಪುಸ್ತಕಗಳು ಹೊರಬರಲಿಲ್ಲ. ಜಿಲ್ಲೆಯ ಮಟ್ಟದಲ್ಲಿ ಹೆಚ್ಚಿನ ಜನರನ್ನು ಈ ಕೆಲಸಕ್ಕಾಗಿ ತೊಡಗಿಸುವುದು ಕಷ್ಟಕರ. ನಮ್ಮ ಮಿತಿಯಲ್ಲಿ ಅಪ್ರಾಯೋಗಿಕ ಎನಿಸಿತು. ಅಂತೆಯೇ ಒಂದು ಜಿಲ್ಲೆಯ ರಂಗಮಾಹಿತಿ ಸಂಗ್ರಹಿಸಿ ಬರೆಯುವ ಕೆಲಸವನ್ನು ಒಬ್ಬರಿಗೇ ವಹಿಸಿ ಕಾರ್ಯಪ್ರವೃತ್ತರಾದೆವು. ಅದಕ್ಕಾಗಿ 'ಜಿಲ್ಲಾರಂಗಮಾಹಿತಿ' ಮಾಲಿಕೆ ಯೋಜನೆ ರೂಪಿಸಲಾಯಿತು. ಅದು ಫಲ ನೀಡಿತು. ಇಪ್ಪತ್ತಕ್ಕೂ ಅಧಿಕ ಜಿಲ್ಲೆಗಳ ರಂಗಮಾಹಿತಿ ಪುಸ್ತಕಗಳು ಈಗ ಹೊರಬಂದವು.

ಜಿಲ್ಲೆಯ ರಂಗಭೂಮಿ ಸಂಕ್ಷಿಪ್ತ ಇತಿಹಾಸ; ಹವ್ಯಾಸಿ, ವೃತ್ತಿತಂಡಗಳು, ನಟ ನಟಿ, ನಿರ್ದೇಶಕ, ನೇಪಥ್ಯ ಕಲಾವಿದರ ಸಂಕ್ಷಿಪ್ತ ಪರಿಚಯ; ರಂಗಮಂದಿರ – ಹೀಗೆ 13 ವಿಷಯಗಳ ಪಟ್ಟಿಮಾಡಿ ಲೇಖಕರಿಗೆ ಕಳಿಸಿಕೊಟ್ಟಿದ್ದೆವು. ರಂಗಲೇಖಕರು ವಿರಳವಾಗಿರುವುದರಿಂದ ಕೆಲವು ಜಿಲ್ಲೆಗಳಲ್ಲಿ ಕಲಾವಿದರಿಗೇ ಬರಹದ ಕೆಲಸ ನೀಡಲಾಗಿತ್ತು. ಒಬ್ಬರು ಕಲಾವಿದರ ಮೂಲಕ, ಮತ್ತೊಬ್ಬರು ನಾಟಕಕಾರರ ಮೂಲಕ, ಮತ್ತೆ ಕೆಲವರು ರಂಗತಂಡಗಳ ಕ್ರಿಯಾಶೀಲತೆ ಮೂಲಕ ಜಿಲ್ಲೆಯ ರಂಗಮಾಹಿತಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಮಗ್ರ ಎಂದು ಭಾವಿಸಬಾರದು. ಜಿಲ್ಲೆಯ ಕುರಿತು ಒಂದು ಪಕ್ಷಿನೋಟ ಇದು. ಒಂದು ಜಿಲ್ಲೆಯ ಕೆಲವಷ್ಟು ಮಾಹಿತಿಯನ್ನು ಈ ಪುಸ್ತಕಗಳು ಒಳಗೊಂಡಿವೆ. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

**ರಂಗತಂಡ, ಕಲಾವಿದರ ಸ್ಥೂಲ ಪರಿಚಯ**

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಕ್ರಿಯವಾಗಿರುವ ಹವ್ಯಾಸಿ ರಂಗತಂಡ, ಕಲಾವಿದರ ಸ್ಥೂಲ ಪರಿಚಯದ ಕೃತಿ ಇದಾಗಿದೆ. ರಾಜ್ಯದ ಬೇರೆ ಭಾಗದಲ್ಲಿ ಹೆಸರು ಮಾಡಿರುವ ಜಿಲ್ಲೆಯ ಸಂಜಾತರನ್ನು ಜ್ವಾಲನಪ್ಪ ನೆನಪಿಸಿಕೊಂಡಿದ್ದಾರೆ. ಬರವಣಿಗೆಯಲ್ಲಿ ಖಚಿತತೆ ಇದೆ. ಜಿಲ್ಲೆಯ ರಂಗಇತಿಹಾಸ ರಚನೆಗೆ ಪೀಠಿಕೆಯಂತಿದೆ.

ನಟ, ನಿರ್ದೇಶಕ ಬಿ.ಎನ್. ಜ್ವಾಲನಪ್ಪ ಅವರು ಜಿಲ್ಲೆಯ ರಂಗಚಟುವಟಿಕೆಯಲ್ಲಿ ಸಕ್ರಿಯರಾಗಿರುವವರು. 'ರಂಗವೇಷ' ಎಂಬ ಕೈಬರಹದ ಪತ್ರಿಕೆ ಹೊರತಂದ ಸಾಹಸಿ. ಸೂತ್ರಧಾರ, ರಂಗತೋರಣ, ಈ ಮಾಸ ನಾಟಕ ಹಾಗೂ ನಾಡಿನ ಜನಪ್ರಿಯ ಪತ್ರಿಕೆಗಳಲ್ಲಿ ಬರೆಯುತ್ತ ಬಂದಿರುವ ಜ್ವಾಲನಪ್ಪ ಅವರಿಗೆ ಬರಹದ ಕಸಬುದಾರಿಕೆ ಒಗ್ಗಿದೆ. ವಿಸ್ತೃತ ಅಧ್ಯಯನಕ್ಕೆ ಇಲ್ಲಿನ ಬರಹಗಳು ಪೂರಕವಾಗಿವೆ.

**– ಗುಡಿಹಳ್ಳಿ ನಾಗರಾಜ**
ಪ್ರಕಟಣಾ ಸಮಿತಿ ಪರವಾಗಿ

ಪ್ರಕಟಣಾ ಸಮಿತಿ ಸದಸ್ಯರು
**ಎಂ.ಎಸ್. ಗುಣಶೀಲನ್**
**ಎಸ್.ಕೆ. ಕೊನೆಸಾಗರ**
**ಮುದ್ದಣ್ಣ ರಟ್ಟೇಹಳ್ಳಿ**

# ಅಕಾಡೆಮಿ ಅಧ್ಯಕ್ಷರು ಮತ್ತು ಸದಸ್ಯರ ಪಟ್ಟಿ

ಶ್ರೀ ಎಲ್.ಬಿ. ಶೇಖ (ಮಾಸ್ತರ)
ಅಧ್ಯಕ್ಷರು,
ಕರ್ನಾಟಕ ನಾಟಕ ಅಕಾಡೆಮಿ, ವಿಜಯಪುರ

**ಸದಸ್ಯರು, ಕರ್ನಾಟಕ ನಾಟಕ ಅಕಾಡೆಮಿ**

ಶ್ರೀ ಪಿ. ತಿಪ್ಪೇಸ್ವಾಮಿ, ಚಳ್ಳಕೆರೆ
ಶ್ರೀ ರಾಜಪ್ಪ ಕಿರಗಸೂರು, ಮೈಸೂರು
ಶ್ರೀ ಎಸ್.ಕೆ. ಕೊನೆಸಾಗರ, ಹುನಗುಂದ
ಶ್ರೀ ಎಂ.ಎಸ್. ಗುಣಶೀಲನ್, ಬೆಂಗಳೂರು
ಶ್ರೀಮತಿ ಕಲ್ಪನಾ ನಾಗನಾಥ್, ಬೆಂಗಳೂರು
ಶ್ರೀ ಮುದ್ದಣ್ಣ ರಟ್ಟೆಹಳ್ಳಿ, ಹಾವೇರಿ
ಶ್ರೀಮತಿ ಅನ್ನಪೂರ್ಣ ಸಾಗರ, ಶಿವಮೊಗ್ಗ
ಶ್ರೀ ಎಚ್.ಷಡಾಕ್ಷರಪ್ಪ ಹೊಸಮನಿ, ಹರಪನಹಳ್ಳಿ
ಶ್ರೀ ಕೆ. ಜಗುಚಂದ್ರ, ಧಾರವಾಡ
ಶ್ರೀ ಉಮೇಶ ಸಾಲಿಯಾನ, ಕಾಸರಗೋಡು
ಶ್ರೀ ಹಾಲ್ಕುರಿಕೆ ಶಿವಶಂಕರ್, ಕೊಪ್ಪಳ
ಶ್ರೀ ವಿ.ಎನ್. ಅಕ್ಕಿ, ರಾಯಚೂರು
ಶ್ರೀ ಬಿ.ಎಂ. ರಾಮಚಂದ್ರ, ಮೈಸೂರು
ಶ್ರೀ ಎನ್.ಕೆ. ರಾಮಕೃಷ್ಣ, ಬೆಂಗಳೂರು
ಶ್ರೀಮತಿ ಎ. ವರಲಕ್ಷ್ಮಿ, ಬಳ್ಳಾರಿ

**ಕೋಪ್ಟ್ ಆದ ಸಹಸದಸ್ಯರು**
ಶ್ರೀ ಗುಡಿಹಳ್ಳಿ ನಾಗರಾಜ, ಬೆಂಗಳೂರು
ಡಾ. ಶ್ರೀಪಾದ ಭಟ್, ಶಿರಸಿ
ಶ್ರೀ ಎಲ್.ಎಚ್. ರಂಗನಾಥಪ್ಪ, ಶಿರಾ

ರಿಜಿಸ್ಟ್ರಾರ್:
**ಬಿ. ಮಂಜುನಾಥ ಆರಾಧ್ಯ**

ಯೋಜನಾ ಸಹಾಯಕರು:
**ಕೆ. ರೇವಣ್ಣ**

ಕಚೇರಿ ಸಿಬ್ಬಂದಿ:
**ಸೌಭಾಗ್ಯಲಕ್ಷ್ಮೀ, ಎಂ. ಭೋಜಣ್ಣ, ಸುಶೀಲಮ್ಮ**

# ಪ್ರವೇಶದ ಮುನ್ನ

ನಾಟಕ ಅಕಾಡೆಮಿಯ ಒಂದು ಮಹತ್ತರವಾದ ಯೋಜನೆಯಾದ 'ಜಿಲ್ಲಾ ರಂಗ ಮಾಹಿತಿ' ಮಾಲಿಕೆಯಡಿಯಲ್ಲಿ, ಚಿಕ್ಕಮಗಳೂರು ಜಿಲ್ಲೆ ಕುರಿತಂತೆ ಕೈಪಿಡಿ ಸಿದ್ಧಪಡಿಸಬೇಕೆಂದು, ಅಕಾಡೆಮಿಯ ಪತ್ರ ನನಗೆ ಬಂದಾಗ ಕೊಂಚ ಅಚ್ಚರಿ ಮತ್ತು ತುಸು ಸಂಕೋಚವಾಯಿತು. ಬೃಹತ್ ಮತ್ತು ಅಸಾಧಾರಣ ಕೆಲಸವಾದ ಇದು ನನ್ನಿಂದ ಸಾಧ್ಯವಾದೀತೆ? ಎಂಬ ಅಳುಕು ಒಂದು ಕ್ಷಣ ನನ್ನನ್ನು ಕಾಡಿತು. ಸಮಕಾಲೀನ ಸ್ಥಿತ್ಯಂತರಗಳನ್ನು, ತಲ್ಲಣಗಳನ್ನು ಕುತೂಹಲ ಮತ್ತು ಎಚ್ಚರಿಕೆಯಿಂದ ನಿರಂತರವಾಗಿ ಗಮನಿಸುವ ಮನಸ್ಸುಗಳಿಗೆ ಭೂತಕಾಲದ ಆಗು-ಹೋಗುಗಳನ್ನು ದಾಖಲಿಸುವುದು ಒಂದು ಸವಾಲಿನ ಕೆಲಸ. ಹೀಗಾಗಿ ರಂಗಭೂಮಿಯ ದಾಖಲಾತಿಯಲ್ಲಿ ರಂಗ ಕಲಾವಿದನ ಬದುಕಿನ ಯಾವ ಅಂಶಗಳನ್ನು ಕ್ರೋಢೀಕರಿಸಬೇಕೆಂಬ ಚಡಪಡಿಕೆ ನನ್ನಲ್ಲಿ ಉಂಟುಮಾಡಿತು. ಸಂಪೂರ್ಣತೆ ಎಂಬುವುದು ಯಾವುದೇ ರಂಗದಲ್ಲೂ ಇಲ್ಲ. ವಿಶೇಷವಾಗಿ ರಂಗಚಟುವಟಿಕೆ ಸದಾ ಚಾಲನೆಯಲ್ಲಿ ಇರುವಂತಹ ಪ್ರಕ್ರಿಯೆಯಲ್ಲ.

ಒಂದು ಕಾಲದಲ್ಲಿ ಪ್ರೇಕ್ಷಕರ ಮನೆ-ಮನದ ಮಾತಾಗಿದ್ದ ಜಿಲ್ಲೆಯ ರಂಗ ತಂಡಗಳು ಇಂದು ನೇಪಥ್ಯ ಸೇರಿವೆ. ಮತ್ತೆ ಕೆಲವು ಸಂಘಟನೆಗಳು ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಿಂದ ದಕ್ಕುವ ಅನುದಾನಕ್ಕಾಗಿ ಹುಟ್ಟಿಕೊಂಡ ಸಂಸ್ಥೆಗಳು; ಮತ್ತೆ ಕೆಲವು ಸುತ್ತಮುತ್ತಲಿನ ಜಾತ್ರೆ, ಹಬ್ಬ-ಉತ್ಸವಗಳು, ಸರ್ಕಾರಿ ಕಾರ್ಯಕ್ರಮಗಳಿಗಾಗಿ ನಾಟಕ ಪ್ರದರ್ಶಿಸುವ ತಂಡಗಳು. ಹೀಗಾಗಿ ಒಂದು ಜಿಲ್ಲೆಯ ಸಮಗ್ರ ಮಾಹಿತಿಯನ್ನು ಒಂದು ಬೊಗಸೆಯಲ್ಲಿ ಸಂಗ್ರಹಿಸಿ, ಅನಾವರಣಗೊಳಿಸುವುದು ಬಹಳ ಕಷ್ಟದ ಕೆಲಸ. ಆದರೆ ಅಕಾಡೆಮಿ ಇಂತಹ ಅನನ್ಯವಾದ ಕೆಲಸವನ್ನು ನಿರ್ವಹಿಸುತ್ತಿರುವಾಗ ನನ್ನದೂ ಒಂದಿಷ್ಟು ಜವಾಬ್ದಾರಿ ಇದೆ ಅನಿಸಿತು. ಈ ದಿಸೆಯಲ್ಲಿ ನನ್ನ ಇತಿಮಿತಿಯಲ್ಲಿ ಜಿಲ್ಲೆಯ ರಂಗಭೂಮಿ ಚಟುವಟಿಕೆಯ ಬಗ್ಗೆ ಒಂದಿಷ್ಟು ಲಭ್ಯವಾದ ಮಾಹಿತಿಯನ್ನು ನಿಮ್ಮ ಮುಂದಿಡಲು ಯತ್ನಿಸಿದ್ದೇನೆ.

ನನ್ನ ವ್ಯಾಸಂಗದ ದಿನಗಳಿಂದಲೂ ರಂಗದ ಬಗ್ಗೆ ಆಸಕ್ತಿ ಬೆಳೆಸಿಕೊಂಡು ನಾಟಕ, ವಿಮರ್ಶೆ, ಅಭಿನಯ, ಶಿಬಿರದ ಆಯೋಜನೆ ಮತ್ತು ಪ್ರಬಂಧ ಮಂಡನೆಯ ಮೂಲಕ ಆಗಾಗ್ಗೆ ನಾನು ದಾಖಲಿಸಿಕೊಂಡಿದ್ದ ಮಾಹಿತಿ ಈ ಹೊತ್ತು ನನ್ನ ನೆರವಿಗೆ ಬಂದಿದೆ. ನಾಡಿನ ಅನೇಕ ರಂಗಭೂಮಿ ಪತ್ರಿಕೆಗಳಾದ ರಂಗತೋರಣ, ಈ ಮಾಸ ನಾಟಕ ಪತ್ರಿಕೆ, ಸೂತ್ರಧಾರ; ಜಿಲ್ಲೆಯ ದಿನಪತ್ರಿಕೆಗಳಾದ ಜನಮಿತ್ರ, ಹೊಸದಿಗಂತ, ಮನುಜಮತ; ರಾಜ್ಯ

ಪತ್ರಿಕೆಗಳಾದ ಸಂಯುಕ್ತ ಕರ್ನಾಟಕ, ವಿಜಯಕರ್ನಾಟಕ ಇತ್ಯಾದಿ ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದ ನನ್ನ ವಿಮರ್ಶಾ ಲೇಖನಗಳು ಕೈಪಿಡಿಯನ್ನು ರಚಿಸುವಲ್ಲಿ ಸಹಾಯವಾಗಿದೆ.

ಕಲಾವಿದರು, ಸಂಸ್ಥೆಗಳ ಮುಖ್ಯಸ್ಥರನ್ನು ವೈಯಕ್ತಿಕವಾಗಿ ಭೇಟಿ ಮಾಡಿ, ದೂರವಾಣಿ ಮೂಲಕ ಸಂಪರ್ಕಿಸಿ ಮಾಹಿತಿಗಳ ಪತ್ತೆ ಹಚ್ಚಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಹಾಗೆ ನೋಡಿದರೆ ಅನ್ಯ ಜಿಲ್ಲೆಗಳಿಗೆ ಹೋಲಿಸಿದರೆ ರಂಗ ಚಟುವಟಿಕೆಯಲ್ಲಿ ಇನ್ನೂ ಪ್ರಬುದ್ಧತೆಯನ್ನು ಕಾಣದ ಚಿಕ್ಕಮಗಳೂರಿನ ರಂಗ ಮಾಹಿತಿಯಲ್ಲಿ ಅನೇಕ ರಂಗ ತಂಡ, ನಟರ ಕುರಿತಾದ ಮಾಹಿತಿ ನನ್ನಿಂದ ಮರೆಯಾಗಿದ್ದಲ್ಲಿ ದಯಮಾಡಿ ಕ್ಷಮೆ ಇರಲಿ.

ನನ್ನ ಈ ಅತೀ ಸಣ್ಣ ಕೆಲಸ ಸಂಪೂರ್ಣ ಪರಿಪೂರ್ಣತೆ–ಖಚಿತತೆಯಿಂದ ಕೂಡಿದೆ ಎಂಬ ಭ್ರಮೆಯಾಗಲೀ, ಅಹಂಕಾರವಾಗಲೀ ನನಗಿಲ್ಲ. ರಂಗಭೂಮಿಯ ವಿಶಾಲವಾದ ಹೆಮ್ಮರದಲ್ಲಿನ ಒಂದು ಚಿಕ್ಕ ಬೇರಾಗಿರುವ ನನ್ನ ಈ ಪ್ರಯತ್ನಕ್ಕೆ ಪ್ರೀತಿಯಿಂದ ಸಹಕಾರ ನೀಡಿರುವ ನಾಟಕ ಅಕಾಡೆಮಿಗೆ ನಾನು ಅಭಾರಿಯಾಗಿದ್ದೇನೆ. ಈ ಸಂದರ್ಭದಲ್ಲಿ ಮಾಹಿತಿ ಸಂಗ್ರಹಿಸಲು ನನ್ನೊಡನೆ ಅಭಿಮಾನದಿಂದಸಹಕರಿಸಿರುವ ರಂಗಮಿತ್ರರಾದ ಕಲ್ಕಟ್ಟೆ ನಾಗರಾಜರಾವ್, ರವೀಶ್‌ಬಸಪ್ಪ, ಪ್ರಭುಸೂರಿ, ಬೀಕನಹಳ್ಳಿಬಸವರಾಜ್, ಅಜ್ಜಂಪುರ ವೆಂಕಟೇಶ್, ಅಪೂರ್ವ, ಎಂ.ವೈ. ಮಹಾಂತೇಶ್ ಹಾಗೂ ಸುಂದರವಾಗಿ ಅಕ್ಷರ ಜೋಡಣೆ ಮಾಡಿರುವ ಶ್ರೀನಿಧಿ ಗ್ರಾಫಿಕ್ಸ್‌ನ ಶ್ರೀಮತಿ ಕಾಂಚನಾರವರನ್ನು ವಿಶ್ವಾಸದಿಂದ ನೆನಪಿಸಿಕೊಳ್ಳುತ್ತೇನೆ.

**ಬಿ.ಎನ್. ಜ್ವಾಲನಪ್ಪ**

# ಪರಿವಿಡಿ


| | |
|---|---|
| ಚಿಕ್ಕಮಗಳೂರು ಜಿಲ್ಲೆಯ ಹವ್ಯಾಸಿ ರಂಗ ತಂಡಗಳು | 1 |
| ಜಿಲ್ಲೆಯ ಮಕ್ಕಳ ರಂಗಭೂಮಿ | 16 |
| ಚಿಕ್ಕಮಗಳೂರು ಜಿಲ್ಲೆಯ ಹವ್ಯಾಸಿ ಕಲಾವಿದರು ಮತ್ತು ತಂತ್ರಜ್ಞರು | 19 |
| ಚಿಕ್ಕಮಗಳೂರು ಜಿಲ್ಲೆಯ ಪ್ರಮುಖ ರಂಗಮಂದಿರಗಳು | 38 |
| ಚಿತ್ರ ಸಂಪುಟ | 44 |

# ಚಿಕ್ಕಮಗಳೂರು ಜಿಲ್ಲೆಯ ಹವ್ಯಾಸಿ ರಂಗ ತಂಡಗಳು

ಸೃಜನಶೀಲ ಕಲೆಗಳ ವಿವಿಧ ಪ್ರಕಾರಗಳಲ್ಲಿ ಸಮ್ಮಿಶ್ರ ಮತ್ತು ತುಂಬಾ ಸಂಕೀರ್ಣ ಕಲೆಯಾದ ನಾಟಕ ಒಂದು ಅತ್ಯಂತ ವಿಶಿಷ್ಟವಾದ ಮತ್ತು ಪರಿಣಾಮಕಾರಿ ದೃಶ್ಯಮಾಧ್ಯಮವಾಗಿದೆ. ರಂಗಭೂಮಿ ನಿರಂತರವಾಗಿ ಅಸ್ತಿತ್ವದಲ್ಲಿರುವಂತಹ ಚಲನಶೀಲ ಕ್ರಿಯೆ. ಅಂತೆಯೇ ಈ ಕಲೆ ಅನುಕರಣೆ, ವಿಡಂಬನೆ, ಸ್ವಂತಿಕೆ, ಅಳವಡಿಸುವಿಕೆ, ವ್ಯಂಗ್ಯ, ಹಾಸ್ಯ, ವೈಚಾರಿಕತೆ ಇತ್ಯಾದಿ ವಿವಿಧ ಮಜಲು–ಮಗ್ಗಲುಗಳಿಂದ ಆವಿಷ್ಕಾರಗೊಂಡಿದ್ದು ಸಹೃದಯ ಪ್ರೇಕ್ಷಕರನ್ನು ಸುಲಭವಾಗಿ ತಲುಪುವಂತಹ ಕಲೆಯಾಗಿದೆ. ಅಲ್ಲದೆ ಇಲ್ಲಿ ಸಹಜತೆ ಹೆಚ್ಚು. **'ಒಡಲಾಳ'** ಖ್ಯಾತಿಯ ಚಲನಚಿತ್ರ ನಟಿ ಉಮಾಶ್ರೀ ಅಭಿಪ್ರಾಯಿಸಿರುವಂತೆ ನೈಜ ಅಭಿವ್ಯಕ್ತಿ ಅನ್ನುವಂತಹದ್ದು Theatreಗೆ ಸಂಬಂಧಪಟ್ಟಿದೆಯೇ ಹೊರತು Filmಗೆ ಅಲ್ಲ. ಹಾಗೂ ಅರಿಸ್ಟಾಟಲನ ಪ್ರಸಿದ್ಧವಾದ ಹೇಳಿಕೆಯಂತೆ **'ನಾಟಕ'** ಎನ್ನುವುದು **'ಒಂದು ಕ್ರಿಯೆಯ ಅನುಕರಣ'**. ಸಂಸ್ಕೃತದ 'ನಾಟಕವಾದರೂ', **'ನೃತ್'** ಧಾತುವಿನಿಂದ ರೂಪತಾಳಿದೆ. ಅದರ ಮೂಲ ಅರ್ಥ 'ಕುಣಿತ'. ಕುಣಿತವೂ ಒಂದು ಬಗೆಯ ಅನುಕರಣವೇ. ಇದರ ಇತಿಹಾಸ ತುಂಬಾ ಸುದೀರ್ಘ ಮತ್ತು ವ್ಯಾಪ್ತಿ–ಹರವು ವಿಶಾಲ. ಇದು ಕಂಡ ಕಾಲ–ದೇಶ ಹಲವಾರು. ಹೀಗಾಗಿಯೇ ನಾಟಕ ತನ್ನ ಮೂಲ ಸ್ವರೂಪಗಳಲ್ಲಿ ವ್ಯಾಖ್ಯೆ – ವಿವರಣೆಗಳಲ್ಲಿ ಕಾಲದಿಂದ ಕಾಲಕ್ಕೆ ಅನೇಕ ಸ್ಥಿತ್ಯಂತರಗಳನ್ನು ಕಂಡಿದೆ. ಒಂದು ಅತ್ಯಂತ ಸಂಕೀರ್ಣ ಕಲೆಯಾದ ನಾಟಕ ಮತ್ತು ಅದರ ವಿಸ್ತಾರವಾದ ಚಟುವಟಿಕೆಯಲ್ಲಿ ಸಂಕೀರ್ಣತೆ ಹರಳು ಗಟ್ಟಿನಿಂತಿದೆ. ನಟನ ನಾಟಕ, ನಾಟಕಕಾರನ ನಾಟಕ, ನಿರ್ದೇಶಕನ ನಾಟಕವಾಗಿ ರೂಪಾಂತರಗೊಳ್ಳುವ ಮೂಲಕ ಇದು ಸ್ಪಷ್ಟವಾಗಿದೆ.

**"ಜಾನ್‌ಡಿಟ್ರಿಚ್"** ಎಂಬ ಪಾಶ್ಚಾತ್ಯ ರಂಗತಜ್ಞನ ಪ್ರಕಾರ ನಾಟಕ ಒಂದು ಕಥೆ. ಅದು ಸಂಭಾಷಣೆಯ ರೂಪದಲ್ಲಿರುತ್ತದೆ. ಮಾನವನ ಅಂತರಂಗದ ಭಾವನೆಗಳ ಹೊಯ್ದಾಟಕ್ಕೆ ಸಂಬಂಧಿಸಿರುತ್ತದೆ. ಅಂತಹ ಮಾನಸಿಕ ತುಮುಲಗಳು ಮಾತು ಮತ್ತು ಅಭಿನಯದ ಮೂಲಕ ಅಭಿವ್ಯಕ್ತವಾಗುತ್ತದೆ. ಹೀಗೆ ಎಲ್ಲವನ್ನೂ ತನ್ನಲ್ಲಿ ಹಿಡಿದಿಟ್ಟುಕೊಂಡ ನಾಟಕ ಹಾಗೂ ಇದರ ಸಂಪೂರ್ಣ ಚಟುವಟಿಕೆಗಳ ಸ್ವರೂಪವಾಗಿರುವ ರಂಗಭೂಮಿ ಜಿಲ್ಲೆಯಲ್ಲಿ ಹುಲುಸಾಗಿಯೇ ಬೆಳೆದಿದೆ ಎಂದೇಳಬಹುದು. ಇಂತಹ ವೈವಿಧ್ಯಮಯವಾದ ರಂಗಭೂಮಿ ಪರಂಪರೆಯನ್ನು ಕಾಫಿಯ ಪರಿಮಳ, ಏಲಕ್ಕಿಯ ಘಮಘಮವನ್ನು ಆಸ್ವಾದಿಸುವಷ್ಟೇ ಸ್ವಾಭಾವಿಕ ವಾಗಿ

ಚಿಕ್ಕಮಗಳೂರಿನ ಜನ ಅನೇಕ ವರ್ಷಗಳಿಂದ ಪೋಷಿಸಿಕೊಂಡು ಬಂದಿದ್ದಾರೆ. ಈ ಜಿಲ್ಲೆಯಲ್ಲಿ ವೃತ್ತಿ ರಂಗಭೂಮಿ ಅಸ್ತಿತ್ವತದಲ್ಲಿ ಇದ್ದ ಬಗ್ಗೆ ಎಲ್ಲೂ ದಾಖಿಲಾತಿ ಇಲ್ಲ.

19ನೇ ಶತಮಾನದ ಮಧ್ಯಂತರದಲ್ಲಿ ತರೀಕೆರೆ ತಾಲ್ಲೂಕಿನ ಹುಣಸೇಘಟ್ಟದ ಹೆಚ್.ಎಸ್. ಮರುಳಯ್ಯ ಮತ್ತು ಸಂಗಡಿಗರು ಒಗ್ಗೂಡಿ ಕಟ್ಟಿ ಬೆಳೆಸಿದ ಸಿದ್ಧೇಶ್ವರ ಕೃಪಾಪೋಷಿತ ನಾಟಕ ಮಂಡಳಿ, ಬಸವೇಶ್ವರ ಕೃಪಾ ಪೋಷಿತ ನಾಟಕ ಮಂಡಳಿ ಮತ್ತು ಮಲ್ಲೇಶ್ವರ ಕೃಪಾ ಪೋಷಿತ ನಾಟಕ ಮಂಡಳಿ ರಂಗಭೂಮಿ ಇತಿಹಾಸದಲ್ಲಿ ದಾಖಲಾಗಿರುವಂತೆ ಜಿಲ್ಲೆಯಲ್ಲಿನ ತುಂಬಾ ಹಳೆಯ ಸಂಸ್ಥೆ ಗಳಾಗಿವೆ. ಚಿಕ್ಕಮಗಳೂರು ತಾಲ್ಲೂಕಿನ ಅಂಬಳೆಯ ವೀರಲಿಂಗೇಶ್ವರ, ಅತ್ತಿಕೆರೆಯ ರೇಣುಕಸಿದ್ಧೇಶ್ವರ ಸಂಗೀತ ನಾಟಕ ಮಂಡಳಿಗಳು 60–70 ರ ದಶಕಗಳಲ್ಲಿ ರಂಗಚಟುವಟಿಕೆಗಳಿಗೆ ತಮ್ಮದೇ ಆದ ಅನುಪಮ ಕಾಣಿಕೆಯನ್ನು ಸಲ್ಲಿಸಿವೆ. ವಿಶೇಷವಾಗಿ ತರೀಕೆರೆಯ ಕೆ. ತಿಮ್ಮಣ್ಣ, ಅಜ್ಜಂಪುರದ ಸತ್ಯನಾರಾಯಣ ಶೆಟ್ಟಿ ಮತ್ತು ಪ್ರಸಿದ್ಧ ಹಾರ್ಮೋನಿಯಂ ವಾದಕರಾದ ಬಗ್ಗವಳ್ಳಿಯ ದೊಡ್ಡರಂಗಪ್ಪನವರು ನಾಟಕ ರಂಗದಲ್ಲಿ ಪ್ರಾತಃಸ್ಮರಣೀಯರಾಗಿದ್ದಾರೆ.

## ಕಲಾ ಸೇವಾ ಸಂಘ, ಚಿಕ್ಕಮಗಳೂರು (1944)

ಜಿಲ್ಲಾ ಕೇಂದ್ರವಾದ ಚಿಕ್ಕಮಗಳೂರಿನಲ್ಲಿ 1944 ರಲ್ಲಿ ಅಸ್ತಿತ್ವಕ್ಕೆ ಬಂದ ಕಲಾ ಸೇವಾ ಸಂಘ ಜಿಲ್ಲೆಯ ಅತ್ಯಂತ ಹಿರಿಯ ಸಂಸ್ಥೆಯಾಗಿದೆ. ಕಲಾಸೇವಾ ಸಂಘದ ಆಶ್ರಯದಲ್ಲಿ ಏಳು ದಶಕದ ಹಿಂದೆಯೇ ಗುಮಾಸ್ತರಾಗಿದ್ದ ಟಿ. ಎಸ್. ಕಿಲ್ಲೇದಾರ್ ರಚಿಸಿದ್ದ ಚಕ್ರವ್ಯೂಹ ನಾಟಕಕ್ಕೆ ರಾಜ್ಯ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಲಭಿಸಿತ್ತು. ಈ ನಾಟಕದಲ್ಲಿ ಎ. ಬಿ. ಜಯರಾಂರವರು ಬಾಲನಟನಾಗಿ ಅಭಿನಯಿಸಿದ್ದರು. ಸಕ್ರೇಪಟ್ಟಣದ ಸುಬ್ಬಣ್ಣ ಎಂಬುವವರು ಮಾಸ್ಟರ್ ಹಿರಿಯಣ್ಣನವರ ನಾಟಕಗಳಿಗೆ ತಬಲವಾದಕರಾಗಿದ್ದರು. 1935ರಲ್ಲಿದ್ದ ಕರ್ನಾಟಕ ನಾಟಕ ಸಭಾ ಸಂಘ ಕ್ರಮೇಣ ಕಲಾಸೇವಾ ಸಂಘವಾಗಿ ರೂಪಾಂತರ ಗೊಂಡಿತು. ಬಿ.ವಿ. ರಾಮರಾವ್, ಬಿ.ಕೇಶವಮೂರ್ತಿ, ಬಿ. ಎಂ. ಜನಾರ್ಧನಯ್ಯ, ಹೆಚ್. ಕೆ. ಶ್ರೀಕಂಠಯ್ಯ, ವಿ.ಪದ್ಮನಾಭ್, ಸಿ.ವಿ. ಬಾದರಾಯಣ, ಕೆ. ರಾಮಸ್ವಾಮಿ, ಬಿ. ರಾಮಚಂದ್ರರಾವ್, ಪಿ.ಎಸ್. ಲಕ್ಷ್ಮೀನರಸಿಂಹಯ್ಯ, ಸಿ. ಪಿ. ಪರಮೇಶ್ವರಪ್ಪ ಸಂಸ್ಥೆಯ ರೂವಾರಿಗಳು. 1996ರಲ್ಲಿ ಕಲಾ ಸೇವಾ ಸಂಘ ತನ್ನ ಸುವರ್ಣ ಮಹೋತ್ಸವವನ್ನು ನೀನಾಸಂ ಸ್ಥಾಪಕ ಮತ್ತು ರಾಮನ್ ಮ್ಯಾಗ್‌ಸೆಸೆ ಪ್ರಶಸ್ತಿ ವಿಜೇತ ಹಿರಿಯ ರಂಗಕರ್ಮಿ ಕೆ. ವಿ. ಸುಬ್ಬಣ್ಣನವರ ಉಪಸ್ಥಿತಿಯಲ್ಲಿ ಸಂಭ್ರಮದಿಂದ ಆಚರಿಸಿತು. ಈ ಸಂದರ್ಭದಲ್ಲಿ ರಾಜ್ಯಮಟ್ಟದ ನಾಟಕಸ್ಪರ್ಧೆಯನ್ನು ಆಯೋಜಿಸಿ ರಾಜ್ಯದ ಅನೇಕ ಕಲಾವಿದರನ್ನು ಪ್ರೋತ್ಸಾಹಿಸಿತು. ಅಂದಿನಿಂದ ಇಂದಿನವರೆಗೆ ಕಲಾ ಸೇವಾ ಸಂಘದ ಸಾಧನೆ ಒಂದು ಯಶೋಗಾಥೆಯಾಗಿದೆ. ಸುಮಾರು 500 ಪುರಸ್ಕಾರಗಳನ್ನು ತನ್ನ ಮಡಿಲಿಗೆ ಹಾಕಿಕೊಂಡಿದೆ. ಸಂಘದ ಆರಂಭದ ನಾಟಕ ಭಕ್ತ ತುಕಾರಾಂ. ಒಂದು ಕಾಲದಲ್ಲಿ ನಾಟಕಕ್ಕೆ ಬೇಕಾದ ಉಡುಗೆ ತೊಡುಗೆ ಮತ್ತು ರಂಗಸಲಕರಣೆಗಳನ್ನು ಬೇಲೂರು ಸಮೀಪದ ಕರಗಡದಿಂದ ತರಿಸಬೇಕಾಗಿತ್ತು. ಅಥವಾ ಹಿರೇಗೌಜದ ವಾಹಬ್‌ಸಾಹೇಬರಿಂದ ಬಾಡಿಗೆಗೆ ಪಡೆಯಬೇಕಾಗಿತ್ತು. ಇದನ್ನು ಮನಗಂಡ ಅಂದಿನ ಶಾಸಕರಾಗಿದ್ದ ದಿ॥ ಎ.ಎಂ.

ಬಸವೇಗೌಡರು ಕಲಾಸೇವಾ ಸಂಘಕ್ಕೆ ಲೆಗ್ ಹಾರ್ಮೋನಿಯಂ ಕೊಡಿಸಿದರು. ಇದೇ ರೀತಿ ಬಾಳೆಹಳ್ಳಿ ರಂಗೇಗೌಡ, ಹುಳಿಕೆರೆ ದೇವೇಗೌಡ, ಎಂ. ಕೆ. ಅಶ್ವತ್ಥನಾರಾಯಣಶೆಟ್ಟಿ, ಎಂ. ಕೆ. ಶ್ರೀನಿವಾಸಶೆಟ್ಟಿ, ಎಂ. ಜೆ. ಪಟ್ಟಾಭಿರಾಮಶೆಟ್ಟಿ, ಮುಂತಾದವರು ನಾಟಕಕ್ಕೆ ಬೇಕಾದ ಪರದೆ, ವೇಷಭೂಷಣ, ವಾದ್ಯೋಪಕರಣಗಳನ್ನು ಮತ್ತು ಬೆಂಚುಗಳನ್ನು ಒದಗಿಸಿದರು. 1962ರಿಂದ ಸಂಘವು 9 ಬಾರಿ ರಾಜ್ಯಮಟ್ಟದ ನಾಟಕ ಸ್ಪರ್ಧೆಯನ್ನು ನಡೆಸಿಕೊಂಡು ಬಂದಿದೆ. ತ.ರಾ.ಸು.ರವರ ಜ್ವಾಲಾ, ಸಮಾಜದ್ರೋಹಿ, ದೇವದಾಸಿ, ಎಚ್ಚಮನಾಯಕ, ದೇವಿ ಮಂಡೋದರಿ, ಜಲಗಾರ, ಮಹಾರಾತ್ರಿ, ತೆರೆದ ಹೃದಯ ಮತ್ತು ಯಮಲೋಕದಲ್ಲಿ ಮಾನವ ನಾಟಕಗಳು ಕಲಾ ಸೇವಾ ಸಂಘದ ಕೊಡುಗೆ ಗಳಾಗಿವೆ. ಇವುಗಳಲ್ಲಿ ಚಕ್ರವ್ಯೂಹ, ಜ್ವಾಲ ಮತ್ತು ಸಮಾಜದ್ರೋಹಿ ನಾಟಕಗಳು ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನಗಳನ್ನು ಸತತವಾಗಿ 3 ವರ್ಷಗಳ ಕಾಲ ಪಡೆದವು. 1971ರಲ್ಲಿ ಸಂಘದ ರಜತ ಮಹೋತ್ಸವ ಸಂದರ್ಭದಲ್ಲಿ 'ಚೋಮನ ದುಡಿ' ಖ್ಯಾತಿಯ ವಾಸುದೇವರಾವ್ ಅವರನ್ನು ಗೌರವಿಸಿತು. ಸಂಘದ ಅನೇಕ ಕಲಾವಿದರಲ್ಲಿ ಪ್ರಮುಖರಾದ ಸಿ.ಪಿ.ಪರಮೇಶ್ವರಪ್ಪ, ಡಿಂಪಲ್ ಮಂಜುನಾಥ್, ರಾಮ ಚಂದ್ರರಾವ್, ಎ.ಬಿ. ಜಯರಾಂ, ಹೆಚ್. ಎಸ್. ರವೀಂದ್ರ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಎಚ್. ಎಸ್. ರಾಮಣ್ಣ, ಜವರಯ್ಯ, ನಂದಕುಮಾರ್ ಮುಂತಾದವರು ಸಂಘದ ಬೆಳವಣಿಗೆಗೆ ಅನುಪಮ ಕೊಡುಗೆ ನೀಡಿದ್ದಾರೆ. ನಗರದ ಕೊಡುಗೈ ದಾನಿಗಳಾದ ಎಸ್.ಎ. ವಾಸುದೇವಮೂರ್ತಿ, ಕೆ. ಮೋಹನ್, ಡಾ॥ ಜೆ.ಪಿ. ಕೃಷ್ಣೇಗೌಡ, ಎಂ. ಆರ್. ಸಣ್ಣಸಿದ್ದೇಗೌಡ, ಹೆಚ್. ಡಿ. ರಾಮೇಗೌಡ ಮತ್ತು ಸೈಯ್ಯದ್ ಮುನೀರ್ ಅಹಮದ್‌ರವರ ಉದಾರ ನೆರವಿನಿಂದ ಕಲಾ ಸೇವಾ ಸಂಘ ಇಂದು ಸಕಲ ಸೌಲಭ್ಯವನ್ನು ಹೊಂದಿರುವ ಸಣ್ಣ 'ರೆಪರ್ಟರಿ' ಯಂತಿದೆ. 1996ರಲ್ಲಿ ಕಲಾ ಸೇವಾ ಸಂಘದ ಕೀರ್ತಿ ಇಡೀ ನಾಡಿಗೆ ಪಸರಿಸಿತು. ಕಲಾ ಸೇವಾ ಸಂಘದ ಗೌರವ ಕಾರ್ಯದರ್ಶಿಯಾಗಿ ಮತ್ತು ರಂಗಭೂಮಿಯ ಶ್ರೇಷ್ಠ ನಟರಾಗಿ ಹೆಸರು ಮಾಡಿದ್ದ ದಿ॥ ಸಿ.ಪಿ. ಪರಮೇಶ್ವರಪ್ಪ ನವರಿಗೆ ನಾಟಕ ಅಕಾಡೆಮಿ 1996ರ ಸಾಲಿನ ಪ್ರಶಸ್ತಿ ನೀಡಿ ಗೌರವಿಸಿತು. ಇಂದು 150ಕ್ಕೂ ಹೆಚ್ಚು ಸದಸ್ಯರನ್ನು ಹೊಂದಿರುವ ಕಲಾ ಸೇವಾ ಸಂಘ ರಂಗಭೂಮಿಯಲ್ಲಿ ಹೊಸ ಶಕೆಯನ್ನು ಆರಂಭಿಸಿತೆಂದೇ ಹೇಳಬಹುದು. ಕಲಾ ಸೇವಾ ಸಂಘ ಇತ್ತೀಚಿನ ವರ್ಷಗಳಲ್ಲಿ ರಾಜ್ಯದ ಅನೇಕ ಪ್ರಸಿದ್ಧ ತಂಡಗಳ ಕರೆಸಿ ನಾಟಕಗಳನ್ನು ಪ್ರದರ್ಶಿಸುತ್ತಿದೆ. ಶಿವಸಂಚಾರದ ತಿರುಗಾಟದ ನಾಟಕಗಳು ಇವುಗಳಲ್ಲಿ ಬಹಳ ಮುಖ್ಯವಾಗಿವೆ. 2008ರಲ್ಲಿ ಕುವೆಂಪು ನಾಟಕೋತ್ಸವದ ಅಂಗವಾಗಿ ವೈ.ಡಿ.ಬಾದಾಮಿ ನಿರ್ದೇಶನದಲ್ಲಿ ಶಿವಕುಮಾರ ಕಲಾಸಂಘ ಸಾಣೆಹಳ್ಳಿ ತಂಡದಿಂದ **ಜಲಗಾರ,** ಬೆಂಗಳೂರಿನ ಕಲಾಗಂಗೋತ್ರಿಯವರಿಂದ ಬಿ. ವಿ. ರಾಜಾರಾಂ ನಿರ್ದೇಶನದಲ್ಲಿ **ಸ್ಮಶಾನ ಕುರುಕ್ಷೇತ್ರ,** ಇಕ್ಬಾಲ್‌ಅಹ್ಮದ್ ನಿರ್ದೇಶನದಲ್ಲಿ ಲಕ್ಷ್ಮಣ್ ಅವರ ರಂಗಕಹಳೆ ತಂಡದಿಂದ **ಬೊಮ್ಮನಹಳ್ಳಿ ಕಿಂದರ ಜೋಗಿ,** ಸಹ್ಯಾದ್ರಿ ರಂಗತರಂಗ ಶಿವಮೊಗ್ಗದಿಂದ ಕಾಂತೇಶ ಮಂಡಲಗಿ ನಿರ್ದೇಶನದಲ್ಲಿ **ಕಾನೀನ** ನಾಟಕವನ್ನು ಆಯೋಜಿಸಲಾಗಿತ್ತು. 2012ರಲ್ಲಿ ಚಿತ್ರದುರ್ಗದ ಜಮುರಾ ಕಲಾಲೋಕ ಮತ್ತು ಸಾಣೇಹಳ್ಳಿಯ ಶಿವಸಂಚಾರ ನಾಟಕ ತಂಡದಿಂದ 5 ನಾಟಕಗಳ ಪ್ರದರ್ಶನ ನಡೆಸಲಾಯಿತು. ಇದೇ

ವರ್ಷದಲ್ಲಿ ಕರ್ನಾಟಕ ನಾಟಕ ಅಕಾಡಮಿ, ರಂಗಾಯಣ ಶಿವಮೊಗ್ಗ ಹಾಗೂ ಮಿತ್ರವೃಂದದ ಸಂಯುಕ್ತ ಆಶ್ರಯದಲ್ಲಿ 3 ದಿನಗಳ ಜಿಲ್ಲಾ ಮಟ್ಟದ ನಾಟಕೋತ್ಸವವನ್ನು ಏರ್ಪಡಿಸಲಾಗಿತ್ತು. 2013ನೇ ಸಾಲಿನಲ್ಲಿ ಮೂರು ದಿನಗಳ ಕಾಲ ಸಾಣೇಹಳ್ಳಿಯ ಶಿವಸಂಚಾರ ತಂಡದಿಂದ 3 ನಾಟಕಗಳನ್ನು ಪ್ರದರ್ಶಿಸಲಾಯಿತು. ಬಿ.ಸಿ. ಜಯರಾಂ, ಕವಿತ, ಭಾಗ್ಯ, ಸೌಮ್ಯ, ನಂದಕುಮಾರ್, ಜಾರ್ಜ್ ಚಕ್ರವರ್ತಿ, ಜವರಯ್ಯ, ಎಸ್. ಆಲೇಶ್, ಎಂ.ವೈ. ಮಹಾಂತೇಶ್, ಕೆ.ಎ. ಶ್ರೀನಿವಾಸ್ ಕಲಾಸೇವಾ ಸಂಘದ ಪ್ರಮುಖ ನಟರು.

## ರಂಗಶ್ರೀ, ಚಿಕ್ಕಮಗಳೂರು.

ಚಿಕ್ಕಮಗಳೂರಿನಲ್ಲಿ ಹೊಸ ಅಲೆಯ ಮತ್ತು ಪ್ರಾಯೋಗಿಕ ನಾಟಕಗಳಿಗೆ ಸೂಕ್ತ ವೇದಿಕೆಯನ್ನು ಕಲ್ಪಿಸಿಕೊಟ್ಟದ್ದು ರಂಗಶ್ರೀ ಸಂಸ್ಥೆ. ಕಲೆಯನ್ನು ಕಲೆಯನ್ನಾಗಿ ನೋಡದೆ ಅದರ ಒಳಹೊಕ್ಕು ಅನ್ವೇಷಕ ದೃಷ್ಟಿಯಿಂದ ನಾಟಕಗಳ ನೋಡುವ ಪರಂಪರೆಯನ್ನು ರಂಗಶ್ರೀ ಬೆಳೆಸಿತು. ಅಂತೆಯೇ ಸ್ವಯಂ ಪ್ರೇರಣೆಯಿಂದ ರಂಗಾಸಕ್ತರು ಪ್ರದರ್ಶನಕ್ಕೆ ಹಣ ನೀಡಿ ನಾಟಕವನ್ನು ನೋಡುವಂತಹ ಉತ್ತಮ ಸಂಸ್ಕೃತಿಯನ್ನು ಈ ಸಂಸ್ಥೆ ಹುಟ್ಟಿಹಾಕಿತು. ಇಲ್ಲಿಯ ಡಿ.ಸಿ.ಸಿ. ಬ್ಯಾಂಕಿನ ಉದ್ಯೋಗಿಯಾಗಿದ್ದ ಸತ್ಯಸಂಧ, ರಂಗಭೂಮಿ ಮತ್ತು ಚಲನಚಿತ್ರ ನಟ ಎ. ಬಿ. ಜಯರಾಂ, ಹೆಸರಾಂತ ಬೆಳಕು ತಜ್ಞ ಎಂ. ಯಶವಂತ್, ಹಿರೇಗೌಡ, ಅಮರನಾಥ್, ವಿ. ಎನ್. ಇಟ್ಟಣಗಿ, ಬಸವರಾಜರ್ ಅತ್ತಾಡಕರ್, ಕಿಂಗ್‌ಸತ್ಯ, ರಾಂದಾಸ್ ಅವರುಗಳ ಪರಿಶ್ರಮದ ಫಲವಾಗಿ 1975ರ ಮೇ ತಿಂಗಳಿನಲ್ಲಿ ರಂಗಶ್ರೀ ಅಸ್ತಿತ್ವಕ್ಕೆ ಬಂತು. ಕಳೆದ 40 ವರ್ಷಗಳಲ್ಲಿ ರಂಗಶ್ರೀ ಬಾದಲ್ ಸರ್ಕಾರರ **ಬಾಕಿ ಇತಿಹಾಸ, ಏವಂಇಂದ್ರಜಿತ್, ಜೂಲಿಯಸ್ ಸೀಸರ್** ಮುಂತಾದ ಅನುವಾದಿತ ಕೃತಿಗಳನ್ನು ಹಾಗೂ **ತುಘಲಕ್, ಕೊಡೆಗಳು, ಗಿಳಿಯು ಪಂಜರದೊಳಿಲ್ಲ, ಅಪರಾಧಂಗಳ ಕ್ಷಮಿಸೋ, ವೇಲಿಯಂಟ್, ಸದ್ದುವಿಚಾರಣೆ, ಉತ್ತಮ ಪ್ರಭುತ್ವ ಲೊಳಲೊಟ್ಟೆ, ಘಾಸಿರಾಂ ಕೋತ್ವಾಲ (ಪ್ರಾಯೋಜಿತ), ಅನ್ವೇಷಣೆ,** ಇತ್ಯಾದಿ ಅನೇಕ ಸ್ವತಂತ್ರ ಕೃತಿಗಳನ್ನು ರಂಗಶ್ರೀ ಪ್ರದರ್ಶಿಸಿದೆ. 3 ಬಾರಿ ರಂಗ ತರಬೇತಿ ನಡೆಸಿ ಕ್ರಮವಾಗಿ ಮತಾಂತರ, ಈಡಿಪಸ್ ಮತ್ತು ಶಾಂಡಿಲ್ಯ ಪ್ರಹಸನವನ್ನು ಪ್ರಸ್ತುತಪಡಿಸಿದೆ. ನೀನಾಸಂನ ನಿರ್ದೇಶಕ ಕೆ. ಜಿ. ಕೃಷ್ಣಮೂರ್ತಿ ಮತ್ತು ಸುಶೀಲರವರಿಂದ **ಬೆಟ್ಟಕ್ಕೆ ಚಳಿಯಾದರೆ** ನಾಟಕವನ್ನು ಮಕ್ಕಳ ರಂಗ ತರಬೇತಿ ಶಿಬಿರಕ್ಕಾಗಿ ಆಯೋಜಿಸಲಾಗಿತ್ತು. 1995ರಲ್ಲಿ ಶಾಂಡಿಲ್ಯ ಪ್ರಹಸನಕ್ಕಾಗಿ ಕೃಷ್ಣಮೂರ್ತಿ ಕವತಾರ್ (ಸಾಯುವವನೇ ಚಿರಂಜೀವಿ – ಏಕವ್ಯಕ್ತಿ ಪ್ರದರ್ಶನ ಖ್ಯಾತಿ) ನಡೆಸಿಕೊಟ್ಟ ತರಬೇತಿ ಶಿಬಿರ ಅನಿರೀಕ್ಷಿತವಾಗಿ ಮತ್ತೊಂದಿಷ್ಟು ರಂಗಭೂಮಿಯ ಆರೋಗ್ಯಕರ ಬೆಳವಣಿಗೆಗೆ ಸ್ಫೂರ್ತಿ ನೀಡಿತು. ರಂಗಶ್ರೀ ಸಂಸ್ಥೆಯಲ್ಲಿ ಸತ್ಯಸಂಧ, ಎ. ಬಿ. ಜಯರಾಂ, ಎಂ. ಯಶವಂತ್, ಅಮರನಾಥ್, ರಘುಪತಿ, ಮಂಜಯ್ಯ, ರಾಮಗೋಪಾಲ, ಹಿಟ್ಟಣಗಿ ಮತ್ತು ಶ್ರೀಮತಿ ಹಿಟ್ಟಣಗಿ, ನಾಗೇಶ, ವಾಗೀಶ, ರವಿಕೂದುವಳ್ಳಿ, ಕೂದುವಳ್ಳಿ ಮಂಜಯ್ಯ, ಎಂ.ಎನ್. ಷಡಕ್ಷರಿ, ರಘುಪತಿ, ರಾಮದಾಸಪ್ರಭು, ವಿವಿಯನ್‌ವಾಜ್, ಶ್ರೀಧರಮೂರ್ತಿ, ಮಾಧವರಾವ್, ರಾಣಿರಾವ್, ಸರ್ವಮಂಗಳ, ಸಂಧ್ಯಾ, ನ್ಯಾನ್ಸಿ ನರೋನ್ಹ ಮುಂತಾದವರು ಪ್ರಮುಖ ನಟರಾಗಿ ಗುರುತಿಸಿಕೊಂಡಿದ್ದರು. ಶಿವರಾಂ, ವಾಸುದೇವಮೂರ್ತಿ, ಈರೇಗೌಡ,

ಮಂಜುನಾಥ, ಜಯಕೀರ್ತಿ, ಜಗದೀಶ್, ಭಾಸ್ಕರಾಚಾರ್ ಮುಂತಾದವರು ರಂಗಶ್ರೀಯ ನೇಪಥ್ಯದಲ್ಲಿ ದುಡಿಯುತ್ತಿದ್ದ ರಂಗಕರ್ಮಿಗಳಾಗಿದ್ದರು. ಎಂ. ಯಶವಂತ್‌ರವರು ಬೆಳಕು ಸಂಯೋಜನೆಯಲ್ಲಿ ಹೆಸರು ಮಾಡಿದವರು.

ಜಿಲ್ಲೆಯಲ್ಲಿ ಆಗಿಂದಾಗ್ಗೆ ನಡೆಯುತ್ತಿದ್ದ ರಂಗಚಟುವಟಿಕೆ ಮತ್ತು ಶಿಬಿರಗಳ ಬಗ್ಗೆ ರಂಗತೋರಣ, ಸೂತ್ರಧಾರ ಮತ್ತು ಈ ಮಾಸ ನಾಟಕ ಪತ್ರಿಕೆಗಳಿಗೆ ವಿಮಾರ್ಶಾತ್ಮಕ ಲೇಖನ ಬರೆಯುತ್ತಿದ್ದ ಬಿ. ಎನ್. ಜ್ವಾಲನಪ್ಪ, ಎಂ. ಯಶವಂತ್, ನಾಟಕ ಅಕಾಡೆಮಿಯ ಸದಸ್ಯ ಎಂ. ಜೆ. ದೀಪಕ್, ಮಂಜುನಾಥ ಕಾಮತ್ ಮತ್ತು ಕಿಂಗ್ ಸತ್ಯರ ಸಹಕಾರದೊಂದಿಗೆ ಜಿಲ್ಲೆಯಲ್ಲಿ ಹೊಸ ರಂಗ ಪತ್ರಿಕೆಯನ್ನು **'ರಂಗವೇಷ'** ತ್ರೈಮಾಸಿಕ ಹೊರ ತರಲಾಯಿತು. ಜಿಲ್ಲೆಯ ಮತ್ತು ರಾಜ್ಯದ ಅನೇಕ ಭಾಗಗಳ ನಾಟಕಗಳ ಕುರಿತಾದ ವರದಿ, ವಿಮರ್ಶೆ, ವ್ಯಕ್ತಿ ಪರಿಚಯದೊಂದಿಗೆ ಪತ್ರಿಕೆಯು ಎಲ್ಲರ ಮೆಚ್ಚುಗೆಗಳಿಸಿತ್ತು. ಜಿಲ್ಲೆಯ ಸುಪ್ರಸಿದ್ಧ ಕಲಾವಿದರಾದ ದಿ॥ ಚಿ. ನಾ. ನಾಗರಾಜ್ ಮತ್ತು ದಿ॥ ಕೆ. ಪ್ರಕಾಶ್‌ಚೌಧರಿಯವರ ಆಕರ್ಷಕವಾದ ಕಲೆ, ವ್ಯಂಗ್ಯ ಚಿತ್ರಗಳೊಂದಿಗೆ ಕೈಬರಹದಲ್ಲಿಯೇ ಪ್ರಕಟಗೊಂಡು ನಾಡಿನಾದ್ಯಂತ ನೂರಾರು ಮಂದಿ ಚಂದಾದಾರರ ಗಮನ ಸೆಳೆದಿದ್ದ ರಂಗವೇಷ 7 ಸಂಚಿಕೆಯನ್ನು ಪ್ರಕಟಿಸಿ ದಿಢೀರನೇ ಸೇರಿತು.

## ಶಿಲ್ಪಶ್ರೀ, ಚಿಕ್ಕಮಗಳೂರು.

1983ರಲ್ಲಿ ಕೆ.ಎ. ಶ್ರೀನಿವಾಸ್, ಎಸ್. ಆಲೇಶ್, ಸಿ.ಕೆ. ಭಾರತೀಶ್, ಸಿ.ಕೆ. ಪ್ರಸಾದ್, ಬಿ.ಆರ್. ಶ್ರೀನಿವಾಸಮೂರ್ತಿ ಮುಂತಾದ ರಂಗ ಕಲಾವಿದರ ಪ್ರಯತ್ನದಿಂದ ಅಸ್ತಿತ್ವಕ್ಕೆ ಬಂದ ಈ ಸಂಸ್ಥೆ ಕಂಬಾರರ **'ಹರಕೆಯ ಕುರಿ'**, **'ಸುಳಿಯಲ್ಲಿ ಸಿಕ್ಕವರು'**, **'36 ಅಲ್ಲ 63'**, ಬಿ.ಜಿ. ನಾರಾಯಣ ಪ್ರಸಾದ್ ನಿರ್ದೇಶನದಲ್ಲಿ **'ಮಂತ್ರದ ಕಾಯಿ'**, **'ವಿಷಜ್ವಾಲೆ'** ಹೀಗೆ ಹತ್ತು-ಹಲವಾರು ನಾಟಕಗಳನ್ನು ಪ್ರದರ್ಶಿಸಿದೆ.

## ಛಾಯಾ ಕಲಾವಿದರು, ಚಿಕ್ಕಮಗಳೂರು.

ಅಂದಾನಪ್ಪ, ಉರಾಳ್, ಪ್ರತಾಪ, ರಮೇಶ್ ಮುಂತಾದ ರಂಗಾಸಕ್ತರು ಕಟ್ಟಿ ಬೆಳೆಸಿದ ಸಂಸ್ಥೆಯಾದ ಛಾಯಾ ಕಲಾವಿದರು ಸುಮಾರು 2 ದಶಕಗಳ ಕಾಲ ರಂಗಭೂಮಿ ಚಟುವಟಿಕೆಯಲ್ಲಿ ಕ್ರಿಯಾಶೀಲವಾಗಿತ್ತು. **ಎಚ್ಚಮ್ಮನಾಯ್ಕ, ರಕ್ತಾಕ್ಷಿ, ರಣಪ್ರಚಂಡ, ಪಂಚಭೂತ** ಇನ್ನೂ ಮುಂತಾದ ಅನೇಕ ಐತಿಹಾಸಿಕ ಮತ್ತು ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸಿದ್ದಾರೆ.

## ಮಿತ್ರವೃಂದ, ಚಿಕ್ಕಮಗಳೂರು.

ಮಂಡ್ಯದ ಜಿಲ್ಲಾ ವಿವಾಧಿಕಾರಿ ಮತ್ತು ನಟ ಕೆ.ಎ. ಶ್ರೀನಿವಾಸ್ ಮತ್ತು ಎಸ್. ಆಲೇಶ್ ನೇತೃತ್ವದಲ್ಲಿ 2007ರಲ್ಲಿ ಅಸ್ಥಿತ್ವಕ್ಕೆ ಬಂದ ಮಿತ್ರವೃಂದದ ಆಶ್ರಯದಲ್ಲಿ ಹಾಸನದ ರಂಗಸಿರಿ, ಭದ್ರಾವತಿಯ ವಿಕಸಂ, ಮಂಡ್ಯದ ಜನದನಿ ಸಾಂಸ್ಕೃತಿಕ ಟ್ರಸ್ಟ್‌ವತಿಯಿಂದ

ರಥಮುಸುಲ, ಮೌನಕೋಗಿಲೆ, ಕುಲಂ ಕುಲ ಮಲ್ತು ನಾಟಕಗಳು ಪ್ರದರ್ಶನಗೊಂಡವು. 2015ರಲ್ಲಿ ರಾಜ್ಯ ನಾಟಕ ಅಕಾಡೆಮಿ ಆಶ್ರಯದಲ್ಲಿ ವಿಶ್ವ ರಂಗಭೂಮಿ ದಿನಾಚರಣೆಯನ್ನು **'ಕಟ್ಟೆ ಪುರಾಣ'** ಖ್ಯಾತಿಯ ಅಂಕಣಕಾರ ಮತ್ತು ನಾಟಕಕಾರ ಬಿ.ಚಂದ್ರೇಗೌಡರ ಉಪಸ್ಥಿತಿಯಲ್ಲಿ ಅರ್ಥಪೂರ್ಣವಾಗಿ ಆಚರಿಸಿತು.

## ಕಲಾಕೂಟ, ಚಿಕ್ಕಮಗಳೂರು.

1980ರಲ್ಲಿ ಅಸ್ತಿತ್ವಕ್ಕೆ ಬಂದ ಕಲಾಕೂಟ ಸುಮಾರು 1 ದಶಕಗಳ ಕಾಲ ಚಿಕ್ಕಮಗಳೂರಿನ ರಂಗ ಚಟುವಟಿಕೆಯಲ್ಲಿ ಸಕ್ರಿಯವಾಗಿತ್ತು. **ಕುರಿದೊಡ್ಡಿ ಕುರುಕ್ಷೇತ್ರ**, ಶ್ರೀರಂಗರ **'ಏನ ಬೇಡಲಿ ನಿನ್ನ ಬಳಿಗೆ ಬಂದು'**, ಎಸ್.ಜಿ. ಶಿವಶಂಕರರ **'ದಾರಿ ಯಾವುದಯ್ಯ ಮುಂದೆ'**, ಟಿ.ಎನ್.ಸೀತಾರಾಮ್‌ರವರ **'ನಮ್ಮೊಳಗೊಬ್ಬ ನಾಜೂಕಯ್ಯ'**, ರಾಮಚಂದ್ರ ದೇವರವರ **'ಕುದುರೆ ಬಂತು ಕುದುರೆ'** ಮುಂತಾದ ಅನೇಕ ಪ್ರಯೋಗಶೀಲ ನಾಟಕಗಳನ್ನು ಪ್ರದರ್ಶಿಸಿ ರಂಗ ಚಳುವಳಿಕೆ ಗಮನಾರ್ಹವಾದ ಕೊಡುಗೆ ನೀಡಿವೆ.

## ಕ್ಯಾತನಬೀಡು ಪ್ರತಿಷ್ಠಾನ, ಚಿಕ್ಕಮಗಳೂರು.

ಕಳೆದ 5 ವರ್ಷಗಳಿಂದ ಸುದ್ದಿಯಲ್ಲಿರುವ ಕ್ಯಾತನಬೀಡು ಚಿಕ್ಕಮಗಳೂರು ಸಮೀಪದ ಗ್ರಾಮವಾಗಿದ್ದು, ಪ್ರತಿಷ್ಠಾನ ರೈತಾಪಿ ಜನರಲ್ಲಿ ರಂಗಭೂಮಿಯ ಬಗ್ಗೆ ಒಲವು, ಆಸಕ್ತಿ ಬೆಳೆಸುವುದರಲ್ಲಿ ಗಮನಾರ್ಹ ಸಾಧನೆ ಮಾಡಿದೆ. ಶಿವ ಸಂಚಾರ ನಾಟಕಗಳ ಪ್ರದರ್ಶನ, ನಾಡಿನ ಖ್ಯಾತ ರಂಗಕರ್ಮಿಗಳಿಂದ ಚರ್ಚೆ, ಸಂವಾದ, ಬೀದಿ ನಾಟಕಗಳ ಪ್ರಯೋಗದಿಂದ ಮನೆಮಾತಾಗಿದೆ.

## ಚಟ್ನಿಹಳ್ಳಿ ಪ್ರತಿಷ್ಠಾನ, ಕಡೂರು ತಾಲ್ಲೂಕು.

ಕಡೂರು ಸಮೀಪದ ಚಟ್ನಿಹಳ್ಳಿ ಒಂದು ಸಣ್ಣ ಗ್ರಾಮವಾದರೂ ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ಅನನ್ಯ ಚಟುವಟಿಕೆಗಳ ಆಯೋಜನೆಯ ಮೂಲಕ ನಾಡಿನಾದ್ಯಂತ ಹೆಸರು ಮಾಡಿದೆ. ನಿರಂತರವಾಗಿ ಪ್ರತಿಷ್ಠಾನ ನಡೆಸಿಕೊಂಡು ಬಂದಿರುವ ಶಿವಸಂಚಾರ ನಾಟಕ ತಂಡ ಮತ್ತು ರಾಜ್ಯದ ಇತರೆ ಖ್ಯಾತ ರಂಗತಂಡಗಳ ನಾಟಕಗಳನ್ನು ಸಂಯೋಜಿಸುವುದರ ಮೂಲಕ ಜಿಲ್ಲೆಯ ರಂಗಭೂಮಿ ಬೆಳವಣಿಗೆಗೆ ತನ್ನದೇ ಆದ ವಿಶಿಷ್ಟ ಕಾಣಿಕೆಯನ್ನು ನೀಡಿದೆ.

## ಅರಿವು ವೇದಿಕೆ, ಚಿಕ್ಕಮಗಳೂರು.

1986ರಲ್ಲಿ ಸಾಹಿತ್ಯ ಚಟುವಟಿಕೆಗಾಗಿಯೇ ಅಸ್ತಿತ್ವಕ್ಕೆ ಬಂದ ಅರಿವು ವೇದಿಕೆ ರಂಗಚಟುವಟಿಕೆಯ ಬೆಳವಣಿಗೆಗೂ ಗಮನ ನೀಡಿದ್ದನ್ನು ಇಂದು ನೆನಪಿಸಿಕೊಳ್ಳಬೇಕಿದೆ. 1988ರಲ್ಲಿ ದಿ॥ ಬಿ.ವಿ. ವೈಕುಂಠರಾಜುರವರು ಅಕಾಡಮಿ ಅಧ್ಯಕ್ಷರಾಗಿದ್ದಾಗ **'ಕನ್ನಡ ರಂಗಭೂಮಿ ಎಂಭತ್ತರ ಒಲವುಗಳು'** ಕುರಿತು ವಿಚಾರಣೆ ಸಂಕಿರಣ ಮತ್ತು 45 ದಿನಗಳ ರಂಗ ತರಬೇತಿ

ಶಿಬಿರವನ್ನು ಆಯೋಜಿಸಿತ್ತು. ಈ ವಿಚಾರ ಸಂಕಿರಣದಲ್ಲಿ ಸೂತ್ರಧಾರ ರಾಮಯ್ಯ, ಎ.ಜಿ. ವಿಶ್ವಮೂರ್ತಿ ಮುಂತಾದವರು ಪ್ರಬಂಧಗಳನ್ನು ಮಂಡಿಸಿದ್ದರು. ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ಪದವೀಧರೆ ಸುಮತಿ ದಿ॥ ಕೆ.ವಿ. ಸುಬ್ಬಣ್ಣ ವಿರಚಿತ **'ಸಾಹೇಬರು ಬರುತ್ತಾರೆ'** ನಾಟಕವನ್ನು ಶಿಬಿರಕ್ಕಾಗಿ ನಿರ್ದೇಶಿಸಿದ್ದರು. ಸುಮಾರು 25 ಮಂದಿ ಕಲಾವಿದರು ಭಾಗವಹಿಸಿದ್ದ ಮತ್ತೊಂದು ಶಿಬಿರವನ್ನು ಚಿಂದೋಡಿಲೀಲಾರವರು ಆಕಾಡಮಿ ಅಧ್ಯಕ್ಷರಾಗಿದ್ದಾಗ **ರಂಗವಸಂತ ಉತ್ಸವಕ್ಕಾಗಿ** ಅರಿವು ವೇದಿಕೆ ಸಿದ್ದಪಡಿಸಿತ್ತು. ಕವಿ ಹೆಚ್.ಎಸ್.ಶಿವಪ್ರಕಾಶ್‌ರ **ಮಾರನಾಯಕವನ್ನು** ಸಮುದಾಯದ ಶಶಿಧರಭಾರಿಘಾಟ್ ನಿರ್ದೇಶಿಸಿದ್ದರು. ಮೈಸೂರು, ಬೆಂಗಳೂರಿನಲ್ಲಿ ಸಂಪೂರ್ಣ ಯಶಸ್ಸಿನೊಂದಿಗೆ ಪ್ರದರ್ಶನಗೊಂಡ ಮಾರನಾಯಕ ನಾಟಕ ದೆಹಲಿಗೂ ಕೂಡ ಆಯ್ಕೆಯಾಯಿತು. ಅಂದಿನ ಅಧ್ಯಕ್ಷರಾಗಿದ್ದ ಡಾ. ಕೆ. ಮರುಳಸಿದ್ಧಪ್ಪನವರ ಕಾಲದಲ್ಲಿ ನಾಟಕ ಅಕಾಡೆಮಿಯ ಇತಿಹಾಸದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಚಿಕ್ಕಮಗಳೂರಿಗೆ ಅಕಾಡೆಮಿ ಸದಸ್ಯತ್ವ ನೀಡಿ ಎಂ.ಜೆ. ದೀಪಕ್‌ರಂತಹ ಉತ್ಸಾಹಿ ಯುವಕನನ್ನು ಸದಸ್ಯರನ್ನಾಗಿ ನಾಮಕರಣ ಮಾಡಿತು. ಇವರ ಅವಧಿಯಲ್ಲಿ 1997–98ರ ಸಾಲಿನ ಅಕಾಡಮಿ ಪ್ರಶಸ್ತಿ ಸಮಾರಂಭ ಮತ್ತು ಅದಕ್ಕೆ ಪೂರಕವಾಗಿ ಪ್ರೊ. ಲಿಂಗದೇವರು ಹಳೇಮನೆ, ಉಮಾಶ್ರೀ ಮತ್ತು ಲೋಹಿತಾಶ್ವರವರು ಭಾಗವಹಿಸಿದ್ದ ವಿಚಾರಸಂಕಿರಣ ನಡೆಯಿತು. ಎಂ.ಜೆ. ದೀಪಕ್‌ರವರು ಭಾರತ ಯಾತ್ರಾ ಕೇಂದ್ರದ ಜೊತೆಗೂಡಿ ಅಕ್ಟೋಬರ್ 1996ರಲ್ಲಿ 3 ದಿನಗಳ ಸದ್ಭಾವನಾ ನಾಟಕೋತ್ಸವವನ್ನು ಆಯೋಜಿಸಿದ್ದರು. ಅಂದು ಪ್ರದರ್ಶನಗೊಂಡ ವಾಲ್ಟರ್ ಡಿಸೋಜ ನಿರ್ದೇಶನದ **'ಡಾ. ತಿಪ್ಪೇಶಿ'**, ನಾಗೇಂದ್ರಶಾರ ನಿರ್ದೇಶನದ **'ನಮ್ಮ ನಿಮ್ಮೊಳಗೊಬ್ಬ'**, ಸುರೇಶ್ ಅನಗಳ್ಳಿ ನಿರ್ದೇಶನದ **'ಮಂಟೇಸ್ವಾಮಿ ಕಥಾ ಪ್ರಸಂಗ'** ನಾಟಕಗಳು ಜನಮನವನ್ನು ಸೂರೆಗೊಂಡವು.

ನಾಗಪುರದ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ 1999ರಲ್ಲಿ ನಾಡಿನ ಹೆಸರಾಂತ ರಂಗನಿರ್ದೇಶಕಿ, ಚಲನಚಿತ್ರ ನಟಿ, ಗಾಯಕಿ, ಮತ್ತು 2002ರ ಸಾಲಿನ ನಾಟಕ ಅಕಾಡೆಮಿ ಪುರಸ್ಕೃತರಾದ ಬಿ. ಜಯಶ್ರೀರವರು ಚಿಕ್ಕಮಗಳೂರಿ ನಲ್ಲಿ 20 ದಿನಗಳ ರಂಗ ತರಬೇತಿ ಶಿಬಿರ ನಡೆಸಿದರು. ಈ ಸಂದರ್ಭದಲ್ಲಿ ಭೀಷ್ಮ ಸಹಾನಿರವರ **ಸಂತೆಯಲ್ಲಿ ನಿಂತ ಕಬೀರ** ನಾಟಕವನ್ನು ಸಾದರಪಡಿಸ ಲಾಯಿತು. ನಾಡಿನ ಅನೇಕ ಭಾಗಗಳಿಂದ ಆಗಮಿಸಿದ್ದ ಕಲಾವಿದರು ಭಾಗವಹಿಸಿದ್ದ ಶಿಬಿರದ ಈ ನಾಟಕದಲ್ಲಿ ಫಕೀರನಾಗಿ ಎಂ. ಯಶವಂತ್, ಕೊತ್ವಾಲನಾಗಿ ಚಿ.ನ. ನಾಗರಾಜ್, ಲೂಯಿಯಾಗಿ ಸ್ವಪ್ನಳ ಅಭಿನಯ ನಾಟಕದ ಬೋನಸ್ ಅಂಶಗಳಾಗಿದ್ದವು.

## ಭೂಮಿಕ, ಚಿಕ್ಕಮಗಳೂರು.

ಬಿ. ಜಿ. ನಾರಾಯಣಪ್ರಸಾದ್‌ರವರ ಮುಖಂಡತ್ವದಲ್ಲಿ ಹುಟ್ಟಿದ **'ಭೂಮಿಕ'** ಚಿಕ್ಕಮಗಳೂರಿನ ರಂಗಭೂಮಿ ಬೆಳವಣಿಗೆಗೆ ಗಮನಾರ್ಹ ಕೊಡುಗೆಯನ್ನು ನೀಡಿದೆ. ಸುರೇಶ ದೀಕ್ಷಿತ್, ವಿವಿಯನ್‌ವಾಜ್, ದಿ॥ ಚಿ.ನ. ನಾಗರಾಜ್, ದಿ॥ ಗೋಪಾಕೃಷ್ಣ, ಪ್ರೇಮ್‌ಕುಮಾರ್

ಮುಂತಾದವರ ಜೊತೆಗೂಡಿ ಕಟ್ಟಿ ಬೆಳೆಸಿದ ಭೂಮಿಕ **ಬಿನ್ನಹಕ್ಕೆ ಬಾಯಿಲ್ಲ** (ರಚನೆ : ಬಿ.ಜಿ.ಎನ್. ಪ್ರಸಾದ್) **ಹಿರಣ್ಮಯೇನಾ ಪಾತ್ರೇಣ**, ಭದ್ರಾವತಿಯ ಬಾನುಲಿಗಾಗಿ ದ.ರಾ. ಬೇಂದ್ರೆಯವರ **ಜಾತ್ರೆ**, ಬಿಎನ್ವೆರವರ **ನಂಬಿಕೆ** ನಾಟಕವನ್ನು ಪ್ರಸ್ತುತಪಡಿಸಿದೆ. ಬಿ.ಜಿ. ನಾರಾಯಣ ಪ್ರಸಾದ್ ರಚಿತ **'ಭಿನ್ನಹಕ್ಕೆ ಬಾಯಿಲ್ಲ'** ನಾಟಕ ರಂಗಭೂಮಿಯಲ್ಲಿ ಹೊಸ ಸಂಚಲವನ್ನುಂಟು ಮಾಡಿತ್ತು.

## ಸಂಯುಕ್ತ, ಚಿಕ್ಕಮಗಳೂರು.

2002ರ ಸಾಲಿನ ಜಿಲ್ಲಾ ರಾಜ್ಯೋತ್ಸವದ ಪ್ರಶಸ್ತಿ ಗೌರವಕ್ಕೆ ಪಾತ್ರರಾದ ಕೇಂದ್ರ ಆದಾಯ ತೆರಿಗೆ ಇಲಾಖೆಯ ಉದ್ಯೋಗಿ ಎಂ. ಬಿ. ಶಿವಪ್ಪನವರ ಪ್ರತಿಭಾ ಮತ್ತು ಭೂಮಿಕ ಒಂದಾಗಿ 'ಸಂಯುಕ್ತ' ತಂಡವನ್ನು ರಚಿಸಿಕೊಂಡವು. **ವಿಷಜ್ವಾಲೆ, ದಿವ್ಯದರ್ಶನ, ಕುರಿದೊಡ್ಡಿ ಕುರುಕ್ಷೇತ್ರ, ತೆರೆದ ಹೃದಯ, ಅಕ್ಕಪಕ್ಕ, ಮೀನಿನ ಹೆಜ್ಜೆ, ರತ್ತೋ ರತ್ತೋ ರಾಯನ ಮಗಳೆ** ನಾಟಕಗಳು ಸಂಯುಕ್ತ ಸಂಸ್ಥೆಗೆ ಕೀರ್ತಿ ಮತ್ತು ಪುರಸ್ಕಾರ ತಂದುಕೊಟ್ಟಿವೆ. 1995ರ ನವೆಂಬರ್‌ನಲ್ಲಿ ನಡೆದ ರಾಜ್ಯ ನಾಟಕ ಸ್ಪರ್ಧೆಯಲ್ಲಿ ಸಂಯುಕ್ತ ತಂಡ ಅಭಿನಯಿಸಿದ್ದ **'ಪುಟ್ಟಕ್ಕನ ಮೆಡಿಕಲ್ ಕಾಲೇಜ್'** ನಾಟಕಕ್ಕೆ ದ್ವಿತೀಯ ಬಹುಮಾನ ಲಭಿಸಿತು. ಪ್ರತಿಭಾ ಮತ್ತು ಭೂಮಿಕ ಒಂದುಗೂಡಿ ಚಾಲನೆಗೆ ಬಂದ ಸಂಯುಕ್ತ ಕಳೆದ ಅನೇಕ ವರ್ಷಗಳಿಂದ ನಿರಂತರವಾಗಿ ಮಕ್ಕಳಿಗಾಗಿ ಬೇಸಿಗೆ ತರಬೇತಿ ಶಿಬಿರ ನಡೆಸಿಕೊಂಡು ಬಂದಿದೆ. ಗೋಪಿನಾಥ ರಾವತ್, ಪ್ರೇಮಕುಮಾರ್, ವಿದ್ಯಾನಂದ, ಪ್ರಭಾಕರ್, ಹೆಚ್.ಡಿ.ಶಾಂತಿ ಸರೋಜಿನಿ, ಸಿ.ಕೆ. ದಿನೇಶ, ರಮೇಶ ಭೂಮಿಕ ಮತ್ತು ಸಂಯುಕ್ತ ತಂಡದ ಕಲಾವಿದರಾಗಿದ್ದರು.

## ರಮಿ ಕಲಾವಿದರು, ಚಿಕ್ಕಮಗಳೂರು.

ಇತ್ತೀಚಿನ ದಿನಗಳಲ್ಲಿ ಯುವ ಪ್ರತಿಭೆಗಳಿಂದ ಕೂಡಿದ ನಗರದ ರಮೀ ಕಲಾವಿದರು ಸುದ್ದಿಯಲ್ಲಿದ್ದಾರೆ. ಅನೇಕ ಯುವಜನ ಮೇಳದಲ್ಲಿ ಮತ್ತು ಭೂಪಾಲ್‌ನಲ್ಲಿ ನಡೆದ ಹಿಂದಿ ನಾಟಕೋತ್ಸವದಲ್ಲಿ ಉತ್ತಮ ಅಭಿನಯ ನೀಡಿದ್ದಾರೆ. ಇಮ್ರಾನ್ ಬೇಗ್, ಶ್ರೀಧರರಾಜ ಅರಸ್, ವೆಂಕಟೇಶ್, ಸದಾಶಿವ, ವಿಜಯಕುಮಾರ್, ಸಂಪತ್‌ಕುಮಾರ್, ಕಲ್ಯಾಣಕುಮಾರ್, ಗೋಗಿ ಮುಂತಾದ ವರು 'ರಮೀ ಕಲಾವಿದರು' ಸಂಸ್ಥೆಯ ಆಧಾರ ಸ್ತಂಭಗಳಾಗಿದ್ದಾರೆ. 'ಅಭಿನಯ' ಯುವಕ ಸಂಘದ ಬಿ. ರವಿಕುಮಾರ್ ನಿರ್ದೇಶಿಸಿದ್ದ **'ಭೂತ್ ಮಂದಿರ'** ನಾಟಕ ಕೇರಳದಲ್ಲಿ ನಡೆದ ಯುವಜನ ಉತ್ಸವಕ್ಕೆ ಆಯ್ಕೆಯಾಗಿತ್ತು. ರಮೀ ಕಲಾವಿದರು ಸಂಸ್ಥೆಯ ಬಿ. ರವಿಕುಮಾರ್ **ಅಶೋಕ, ಈಡಿಪಸ್, ಬೆಳಕಿನೆಡೆಗೆ, ನಗ್ನಸತ್ಯ, ಅಮ್ಮ, ಗಜಗಾಮಿನಿ,** (ಹಿಂದಿ ಮತ್ತು ಕನ್ನಡ), **ಮೃಗನಯನೆ** (ಹಿಂದಿ) ಮುಂತಾದ ಸುಮಾರು 50 ನಾಟಕಗಳನ್ನು ನಿರ್ದೇಶಿಸಿದ್ದಾರೆ.

## ಪ್ರಕೃತಿ ಬೆಳಕು ತಂಡ, ಆಲ್ದೂರು, ಚಿಕ್ಕಮಗಳೂರು ತಾಲ್ಲೂಕು.

ಚಿಕ್ಕಮಗಳೂರು ಸಮೀಪದ ಆಲ್ದೂರಿನ ಪ್ರಕೃತಿ ಬೆಳಕು ತಂಡ ರಂಗಭೂಮಿಯಲ್ಲಿ ಕೊಂಚ ಹೆಸರು ಮಾಡಿದ್ದು, ಮೈ.ನಾ. ಚಿದಾನಂದಸ್ವಾಮಿ, ಹೆಚ್.ಯಂ.ಕೆ. ಸ್ವಾಮಿ, ಕುಮಾರಿ

ವಿದ್ಯಾ ಮುಂತಾದ ಅನೇಕ ಉದಯೋನ್ಮುಖ ನಟ–ನಟಿಯರು ಆಗಾಗ್ಗೆ ಸದಭಿರುಚಿಯ ನಾಟಕಗಳನ್ನು ಪ್ರದರ್ಶಿಸಿಕೊಂಡು ಬಂದಿದ್ದಾರೆ.

## ಸುಗಮ ಸಂಗೀತ ಗಂಗಾ, ಚಿಕ್ಕಮಗಳೂರು

ಸುಗಮ ಸಂಗೀತದ ಬಗ್ಗೆ ಜನಸಾಮಾನ್ಯರಲ್ಲಿ ಆಸಕ್ತಿ ಮೂಡಿಸಿ, ಅದನ್ನು ಉಳಿಸಿ, ಬೆಳೆಸಬೇಕೆಂಬ ಸದುದ್ದೇಶದಿಂದ 1999ರಲ್ಲಿ ಅಸ್ತಿತ್ವಕ್ಕೆ ಬಂದ ಈ ಸಂಸ್ಥೆ ರಂಗಭೂಮಿಗೆ ಹೊಸ ಆಯಾಮ ನೀಡಿದೆ. ನಿರಂತರವಾಗಿ ರಂಗಗೀತೆಗಳ ಕಾರ್ಯಕ್ರಮವನ್ನು ನಾಡಿನ ಹೆಸರಾಂತ ಗಾಯಕ–ಗಾಯಕಿಯರಿಂದ ಸಾದರಪಡಿಸುವುದರ ಜೊತೆಗೆ, ಹಿರಿಯ ಕಲಾವಿದೆ ಬಿ. ಜಾಯ್ಯ ಮತ್ತು ಕಲ್ಪನಾ ನಾಗನಾಥ್‌ರವರಿಂದ ರಂಗಗೀತೆಗಳ ತರಬೇತಿ ಶಿಬಿರವನ್ನು ಆಯೋಜಿಸಿದೆ. ಇತ್ತೀಚೆಗೆ ಶಿವಶಕ್ತಿ ಕಲಾ ಸಂಘ, ಕಲ್ಕಟ್ಟೆಯ ಪುಸ್ತಕದ ಮನೆಯ ಸಂಯುಕ್ತಾಶ್ರಯದಲ್ಲಿ ವಿಶ್ವರಂಗಭೂಮಿ ದಿನಾಚರಣೆಯನ್ನು ಆಚರಿಸಿ, ಜಿಲ್ಲೆಯ ಪ್ರಸಿದ್ಧ ರಂಗ ಕಲಾವಿದ ಬಿ.ಎಸ್.ಎನ್.ಎಲ್. ಸತ್ಯನಾರಾಯಣ (ಕಿಂಗ್ ಸತ್ಯ) ರವರನ್ನು ಸನ್ಮಾನಿಸಿತು.

## ಕಲಾಸೇವಾ ಸಂಘ, ಅಜ್ಜಂಪುರ, ತರೀಕೆರೆ ತಾಲ್ಲೂಕು

ಕರ್ನಾಟಕ ರಾಜ್ಯದ ರಂಗಭೂಮಿ ಪರಂಪರೆಯಲ್ಲಿ ಅತ್ಯಂತ ಸೃಜನಶೀಲ ಮತ್ತು ಮೌಲಿಕವಾದ ರಂಗಚಟುವಟಿಕೆಗಳನ್ನು ಪೋಷಿಸಿ ಬೆಳೆಸಿಕೊಂಡು ಬಂದಿರುವ ಕೀರ್ತಿ ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಅಜ್ಜಂಪುರಕ್ಕೆ ಸಲ್ಲುತ್ತದೆ. ಇದೊಂದು ಸಣ್ಣ ಗ್ರಾಮವಾದರೂ ಸಾಂಸ್ಕೃತಿಕವಾಗಿ ಗಟ್ಟಿಯಾದ ನೆಲೆಗಳು ಇಲ್ಲಿ ಹರಳುಗಟ್ಟಿ ನಿಂತಿವೆ. ಸ್ವಾತಂತ್ರ್ಯ ಪೂರ್ವದಲ್ಲಿ 40ರ ದಶಕದ ಆರಂಭದಲ್ಲಿಯೇ ಇಲ್ಲಿ ರಂಗ ಚಟುವಟಿಕೆ ಗರಿಗೆದರಿಕೊಂಡಿತ್ತು. ಈ ಸಂದರ್ಭದಲ್ಲಿ ಅಜ್ಜಂಪುರವು ರಂಗಭೂಮಿಗಾಗಿ ನೀಡಿರುವಂತಹ ಕೊಡುಗೆಯನ್ನು ನಾವು ಕೃತಜ್ಞತೆಯಿಂದ ಸ್ಮರಿಸಬೇಕಿದೆ. ಜೊತೆಯಲ್ಲಿ ಇಡೀ ಜಿಲ್ಲೆಗೆ ಒಂದು ಮಾದರಿಯಾಗಿದೆ. ರಂಗಚಟುವಟಿಕೆಗೆ ಒಂದು ಹೊಸ ಆಯಾಮ ನೀಡಿದ ಮತ್ತು ಭೂಮಿಕೆಯನ್ನು ಒದಗಿಸಿದ ಕೀರ್ತಿ ಅಜ್ಜಂಪುರದ ರಂಗಾಸಕ್ತರಿಗೆ ಸಲ್ಲುತ್ತದೆ.

ಜಿಲ್ಲೆಯ ಚಿಕ್ಕಮಗಳೂರು, ಕಡೂರು, ಅಜ್ಜಂಪುರ ಮುಂತಾದ ಬೆರಳಣಿಕೆಯ ಸ್ಥಳಗಳಲ್ಲಿ ಮೊಕ್ಕಾಂ ಮಾಡಿ ನಾಟಕ ಪ್ರದರ್ಶಿಸುತ್ತಿದ್ದ ಗುಬ್ಬಿ ವೀರಣ್ಣನವರ ಕಂಪನಿ. ಚಿಂದೋಡಿ ವೀರಪ್ಪನವರ ಕೆ.ಬಿ.ಆರ್. ಕಂಪನಿ. ಏಣಗಿ ಬಾಳಪ್ಪನವರ ಕಲಾವೈಭವ ನಾಟ್ಯ ಸಂಘ, ಕಮತಗಿಯ ಹುಚ್ಚೇಶ್ವರ ನಾಟಕ ಮಂಡಳಿ, ಬಳ್ಳಾರಿಯ ಲಲಿತ ಕಲಾ ನಾಟಕ ಮಂಡಳಿ, ಅಲ್ಲದೆ ಇನ್ನೂ ಹಲವಾರು ನಾಟಕ ಕಂಪನಿಗಳ ಅತ್ಯುತ್ತಮ ಕಲಾವಿದರಾದ ಗುಬ್ಬಿವೀರಣ್ಣ, ಬಸವರಾಜು, ಮಾಲತಮ್ಮ, ಚನ್ನಬಸವಣ್ಣ, ಮೀರ್‌ಸಾದಕ್ ಪಾತ್ರದ ಖ್ಯಾತಿಯ ಶಾಂತಕುಮಾರ್, ಹಲಗೇರಿ ಜಟ್ಟಪ್ಪ, ಹಳ್ಳಿ ಹುಡುಗಿಯ ಚಿಂದೋಡಿಲೀಲಾ, ಚಿಂದೋಡಿ ವೀರಪ್ಪ ಅಲ್ಲದೆ ಬಳ್ಳಾರಿ ನಾಟಕ ಕಂಪನಿಯ ಟಿಪ್ಪುಸುಲ್ತಾನ್ ನಾಟಕದ ಥ್ಯಾಕರೆ ಪಾತ್ರದ ಖ್ಯಾತಿಯ ಶ್ರೀಧರ ಮುಂತಾದ ವೃತ್ತಿಕಲಾವಿದರ ಅಮೋಘ ಅಭಿನಯವನ್ನು ನೋಡುವ ಅವಕಾಶ ಅಜ್ಜಂಪುರದ

ರಂಗಪ್ರೇಮಿಗಳಿಗೆ ಲಭಿಸಿತ್ತು. ಅಜ್ಜಂಪುರದ ಹವ್ಯಾಸಿ ಕಲಾಸಂಸ್ಥೆಯಾದ ಕಲಾ ಸೇವಾ ಸಂಘದ ಜಗಜ್ಯೋತಿ ಬಸವೇಶ್ವರ, ಭರತನ ಭ್ರಾತೃ ಪ್ರೇಮ, ಬ್ಲಾಕ್ ಮಾರ್ಕೆಟ್, ಮಹಾರಥಿ ಭೀಷ್ಮ, ಅಲ್ಲದೆ ಆಯಾ ಸಾಂದರ್ಭಿಕ ಸಂದರ್ಭಗಳಲ್ಲಿ ಪ್ರದರ್ಶಿಸುತ್ತಿದ್ದ ಯಶಸ್ವಿ ನಾಟಕಗಳಾಗಿದ್ದವು.

ಬಿ. ಆನಂದರಾವ್, ಶೆಟ್ರು ಸಿದ್ಧಪ್ಪ, ಎನ್. ಹೆಚ್. ಕೋಟಪ್ಪ, ಎಸ್. ಸುಬ್ರಹ್ಮಣ್ಯ ಶೆಟ್ಟಿ ಮುಂತಾದವರ ಮುಂದಾಳತ್ವದಲ್ಲಿ ಹುಟ್ಟಿಕೊಂಡ 'ಜೈ ಹಿಂದ್ ಥಿಯೇಟರ್' ಅನೇಕ ಕಿರಿಯ ತಲೆಮಾರಿನ ಕಲಾವಿದರಲ್ಲಿ ಹೊಸ ಉತ್ಸಾಹವನ್ನು ತುಂಬಿತು. ಎ.ಪಿ. ನಾಗರಾಜಶೆಟ್ಟಿ, ನಿರ್ದೇಶಕರಾಗಿ ಹೊರಹೊಮ್ಮಿದರೆ, ಪಿ. ವೆಂಕಟರಾಂ ತಂಡಕ್ಕೆ ನಾಟಕಗಳನ್ನು ರಚಿಸಿಕೊಡುತ್ತಿದ್ದರು. 1995ರ ಸಾಲಿನ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಕೃಷ್ಣೋಜಿರಾವ್ ಚವ್ಹಾಣ್, ಎಸ್. ಸತ್ಯನಾರಾಯಣ ಶೆಟ್ಟಿ, ವಿ. ಸೀತಾರಾಮಭಟ್ ಪ್ರಖ್ಯಾತ ನಟರಾಗಿದ್ದರು.

**ಜಗಜ್ಯೋತಿ ಬಸವೇಶ್ವರ** ನಾಟಕದಲ್ಲಿ ಗಿರಿಯಾಪುರದ ಜಿ. ಸಿ. ಸಿದ್ದಪ್ಪನವರ ಬಸವಣ್ಣವನರ ಪಾತ್ರದಲ್ಲಿನ ಪರಿಪಕ್ವವಾದ ಅಭಿನಯ ಮತ್ತು ತಲ್ಲೀನತೆಯನ್ನು ಈ ಹೊತ್ತಿಗೂ ಅಜ್ಜಂಪುರದ ಕಲಾವಿದರು ನೆನಪಿಸಿಕೊಳ್ಳುತ್ತಾರೆ. ಚವ್ಹಾಣರ ಎಲ್ಲಾ ನಾಟಕಗಳಿಗೆ ಹಿನ್ನೆಲೆ ಸಂಗೀತದ ಸಾಥಿಯಾಗಿದ್ದವರು ಎಸ್. ಸತ್ಯನಾರಾಯಣಶೆಟ್ಟರು. ಜಾನಪದ ವಿದ್ವಾಂಸ ಎಸ್. ಕೆ. ಕರೀಂಖಾನರು ಒಂದು ತಿಂಗಳ ಅವಧಿಯವರೆಗೆ ಅಜ್ಜಂಪುರದಲ್ಲಿಯೇ ಇದ್ದು **'ಮಧುಮೋಹ'** ಎಂಬ ನಾಟಕವನ್ನು ರಚಿಸಿಕೊಟ್ಟು ಅಜ್ಜಂಪುರದ ಪ್ರೇಕ್ಷಕರ ಮನಗೆದ್ದ ಮಹಾನುಭಾವರಾಗಿದ್ದಾರೆ. ಕಲಾ ಸೇವಾ ಸಂಘ ನಾಟಕಗಳ ಅಭಿನಯದ ಜೊತೆಗೆ ರಾಜ್ಯಮಟ್ಟದ ನಾಟಕ, ನೃತ್ಯ ಸ್ಪರ್ಧೆ, ಪ್ರಾಯೋಜಕತ್ವದ ನಾಟಕಗಳು, ರಂಗ ತರಬೇತಿ ಶಿಬಿರಗಳನ್ನು ನಿರಂತರವಾಗಿ ನಡೆಸಿಕೊಂಡು ಬಂದಿದೆ. ನಾಟಕ ಕಲೆ ಅನ್ನುವಂತಹದ್ದು ಸದಾ ಕಲಿಕೆಗೆ ಮತ್ತು ಏನನ್ನಾದರೂ ತಿಳಿಯಬೇಕೆಂಬ ಹಂಬಲದ ಹುಡುಕಾಟಕ್ಕೆ ವೇದಿಕೆಯನ್ನು ಒದಗಿಸುತ್ತದೆ. ಹೀಗಾಗಿ ಕಲಾಸೇವಾ ಸಂಘ ಹೊರಗಡೆಯಿಂದಲೂ ರಂಗಭೂಮಿಯಲ್ಲಿ ಹೆಸರು ಮಾಡಿರುವ ನೀನಾಸಂ ತಿರುಗಾಟ ತಂಡಕ್ಕೂ ಅಗ್ರತಾಂಬೂಲ ನೀಡಿ ಗೌರವಿಸಿತು. 1967ರಲ್ಲಿ ಸಂಘ ತನ್ನದೇ ಆದ ಸುಸಜ್ಜಿತ ರಂಗಮಂದಿರವನ್ನು ಹೊಂದಿತು. ಇದನ್ನು ಮಾಸ್ಟರ್ ಹಿರಣ್ಣಯ್ಯ ಉದ್ಘಾಟಿಸಿದರೆ, ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು 1972ರಲ್ಲಿ ಪ್ರೇಕ್ಷಕ ಮಂದಿರವನ್ನು ಅಜ್ಜಂಪುರದ ಕಲಾವಿದರಿಗೆ ಸಮರ್ಪಿಸಿದರು. ಕಲಾ ಸೇವಾ ಸಂಘದ ಜೊತೆಯಲ್ಲಿಯೇ ವಾರ್ಷಿಕ ದಿನಗಳ ಜಾತ್ರೆಗಾಗಿ ನಾಟಕಗಳನ್ನಾಡುವಂತಹ ಮತ್ತೆ ಕೆಲವು ತಂಡಗಳು ಹುಟ್ಟಿಕೊಂಡವು. ಎ.ಸಿ. ಚಂದ್ರಪ್ಪ, ಬಿ. ಅಶೋಕ್ ನೇತೃತ್ವದ ಸಾರ್ವಭೌಮ ಮಿತ್ರ ಮಂಡಳಿ, ಎ. ಎಸ್. ಕೃಷ್ಣಮೂರ್ತಿ, ಮಹಾವೀರ ಜೈನ್ ನಾಯಕತ್ವದಲ್ಲಿ ಚಾಲನೆಗೊಂಡ **ತರುಣ ಕಲಾವಿದರು,** ಪುಟ್ಟಸ್ವಾಮಿ ಮತ್ತು ನಾಗರಾಜ್ ಕಟ್ಟಿ ಬೆಳೆಸಿದ **ನಿರುದ್ಯೋಗಿ ಕಲಾವಿದರು** ತಂಡಗಳು ಅಜ್ಜಂಪುರದಲ್ಲಿ ರಂಗಚಳುವಳಿಗೆ ಹೊಸಭಾಷ್ಯ ಬರೆದವು. ಈ ತಂಡಗಳು ಎ. ಎಸ್. ಮೂರ್ತಿ, ದಾಶರಥಿ ದೀಕ್ಷಿತ್, ಪರ್ವತವಾಣಿ ಮುಂತಾದವರ ನಾಟಕಗಳನ್ನು ಪ್ರದರ್ಶಿಸುತ್ತಿದ್ದವು. ಇದೇ ಅವಧಿಯಲ್ಲಿ ಯಕ್ಷಗಾನದ ಸಿದ್ರಾಮಣ್ಣನವರು ರೈತ ಸಮುದಾಯಕ್ಕೆ

ಅನೇಕ ಬಯಲಾಟಗಳನ್ನು ಕಲಿಸಿ ಆಡಿಸಿದರು. 1978ರಲ್ಲಿ ಎ. ಎಸ್. ಕೃಷ್ಣಮೂರ್ತಿ, ಮಹಾವೀರ ಜೈನ್, ಎ.ಸಿ. ಚಂದ್ರಪ್ಪ ಮುಂತಾದವರು ಹೊಸ ಬಗೆಯ ನಾಟಕ ಸ್ಪರ್ಧೆಗಳಿಗೆ ಒತ್ತು ನೀಡಿದರು. 1981ರಲ್ಲಿ ರಾಜ್ಯ ನಾಟಕ ಅಕಾಡೆಮಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಸ್ಪರ್ಧೆಗಳನ್ನು ಆರಂಭಿಸಿ 1987ರವರೆಗೆ ನಡೆಸಿಕೊಂಡು ಬಂದರು. ಮಹಾವೀರ ಜೈನ್, ಎ.ಎಸ್. ಕೃಷ್ಣಮೂರ್ತಿ ಸಾಣೇಹಳ್ಳಿಯ ಶಿವಸಂಚಾರ ನಾಟಕ ತಂಡ ಪ್ರದರ್ಶಿಸುತ್ತಿದ್ದ ಅನೇಕ ನಾಟಕಗಳಿಗೆ ಅಚ್ಚುಕಟ್ಟಾಗಿ ನೇಪಥ್ಯದ ಕೆಲಸವನ್ನು ನಿರ್ವಹಿಸಿ ನಾಟಕದ ಯಶಸ್ವಿಗೆ ಕಾರಣಕರ್ತರಾಗಿದ್ದಾರೆ.

1988ರಲ್ಲಿ ನಾಡಿನ ಹೆಸರಾಂತ ರಂಗ ನಿರ್ದೇಶಕ ಧೃವರಾಜ ದೇಶಪಾಂಡೆಯವರಿಂದ 45 ದಿವಸಗಳ ರಂಗತರಬೇತಿ ಶಿಬಿರವನ್ನು ಗೆಳೆಯರ ಬಳಗ ಮತ್ತು ಕಲಾಸೇವಾಸಂಘ ಸಂಯುಕ್ತವಾಗಿ ಸಂಯೋಜಿಸಿದ್ದವು. ಚಿದಂಬರರಾವ್ ಜಂಬೆ, ಕೆ.ವಿ. ಅಕ್ಷರ, ಮೇಕಪ್ ನಾಣಿ, ಲೈಟಿಂಗ್ ರಾಮೂರ್ತಿ, ಅಬ್ಬೂರು ಜಯತೀರ್ಥ, ಗಂಗಾಧರಸ್ವಾಮಿ, ಜಿ.ವಿ.ಶಿವಾನಂದ್, ಎ.ಪಿ. ಮಾಲತಿ, ವಿಶ್ವನಾಥ ರೈ ಮುಂತಾದ ಅನೇಕ ತಜ್ಞರು ಶಿಬಿರದಲ್ಲಿ ಭಾಗವಹಿಸಿ ಉಪಯುಕ್ತ ಮಾಹಿತಿ ನೀಡಿದ್ದರು. ಈ ಶಿಬಿರದಲ್ಲಿ **'ಸ್ವಾಮಿಗೂಳ ಸ್ವಾಮಾರ'** ಮತ್ತು **'ಹಕ್ಕಿ ಹಾರುತಿದೆ ನೋಡಿದಿರಾ'** ನಾಟಕಗಳು ಪ್ರದರ್ಶನಗೊಂಡವು. 1990ರಲ್ಲಿ **ಮಹಾರಥಿ ಭೀಷ್ಮ** ನಾಟಕವನ್ನು ಹಿರಿಯ ರಂಗತರಬೇತಿ ಶಿಬಿರಾರ್ಥಿಗಳು ಪ್ರದರ್ಶಿಸಿದರು. 1989ರಲ್ಲಿ ನಾಟಕ ಅಕಾಡಮಿಯ ಸಹಯೋಗದಲ್ಲಿ ಚಿಣ್ಣರ ಬಳಗದ ಇಕ್ಬಾಲ್ ಅಹ್ಮದ್‌ರವರಿಂದ ತರಬೇತಿ ಪಡೆದ ಶಿಬಿರಾರ್ಥಿಗಳು ಭಾಸ ಕವಿಯ ಮಧ್ಯಮ ಪ್ರಸಂಗ ನಾಟಕವನ್ನು ಅಭಿವ್ಯಕ್ತಿಸಿದರು.

1990ರಿಂದ ಎ.ಸಿ. ಚಂದ್ರಪ್ಪನವರ ಗೆಳೆಯರ ಬಳಗ ನೀನಾಸಂ ತಿರುಗಾಟ ತಂಡದ ನಾಟಕಗಳ ಪ್ರದರ್ಶನಕ್ಕೆ ಅನುವು ಮಾಡಿಕೊಟ್ಟಿತು. 1994ರಲ್ಲಿ ಗೆಳೆಯ ಬಳಗ ತನ್ನದೇ ಆದ ಬಯಲು ರಂಗಮಂದಿರ ಸ್ಥಾಪಿಸಿತು. 1997ರಲ್ಲಿ ಸಾಣೇ ಹಳ್ಳಿಯ ಶಿವ ಸಂಚಾರ ತಂಡವನ್ನು ಬರಮಾಡಿಕೊಂಡಿತು. ಇನ್ನೂ ಅಚ್ಚುಕಟ್ಟಾಗಿ ಸಜ್ಜುಗೊಳಿಸಿದ ಇದೇ ಬಯಲು ರಂಗಮಂದಿರವನ್ನು ಹೆಸರಾಂತ ನಾಟಕ – ಚಲನಚಿತ್ರ ನಿರ್ದೇಶಕ ಎಂ. ಎಸ್. ಸತ್ಯುರವರ ಉಪಸ್ಥಿತಿಯಲ್ಲಿ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಉದ್ಘಾಟಿಸಿದರು. 1991ರಲ್ಲಿ ಎ.ಎಸ್. ಕೃಷ್ಣಮೂರ್ತಿ ಮತ್ತು ಮಹಾವೀರ ಜೈನ್ ಸ್ವತಃ ರಂಗ ತರಬೇತಿ ಶಿಬಿರ ನಡೆಸಿ ಕೃಷ್ಣಮೂರ್ತಿಯವರ ಸಣ್ಣಕತೆಯನ್ನೇ ಆಧಾರವಾಗಿಟ್ಟುಕೊಂಡು ರಚಿಸಿದ **'ಇಮಾನ ಅಪಹರಣ'** ವನ್ನು ಶಿಬಿರಾರ್ಥಿಗಳಿಗಾಗಿ ಸಿದ್ಧಪಡಿಲಾಯಿತು. 2001 ರಲ್ಲಿ ಗೆಳೆಯರ ಬಳಗ ಮಾಸ್ಟರ್‌ಹಿರಣ್ಣಯ್ಯ, ಶಿವಸಂಚಾರ ಮತ್ತು ಭದ್ರಾವತಿಯ ದಿ|| ಶಾಮಮೂರ್ತಿಯವರ ನಾಟಕಗಳನ್ನು ತರಿಸಿ ವಿಶಿಷ್ಟವಾಗಿ ನಾಟಕೋತ್ಸವವನ್ನು ಆಚರಿಸಿತು. ಈ ಹೊತ್ತು ಅತ್ಯಂತ ಸುವ್ಯವಸ್ಥಿತವಾದ ಮತ್ತು ಒಂದು ಉತ್ತಮ ನಾಟಕದ ಪ್ರದರ್ಶನಕ್ಕೆ ಬೇಕಾದ ಸಕಲ ಸವಲತ್ತುಗಳನ್ನು ಒಳಗೊಂಡಿರುವ ಕಲಾಸೇವಾ ಸಂಘದ ರಂಗಮಂದಿರ ಮತ್ತು ಕೈಲಾಸಂ ಕಲಾಕ್ಷೇತ್ರವಿದೆ. ಅಜ್ಜಂಪುರದಂತಹ ಕುಗ್ರಾಮದಲ್ಲಿ ಅಲ್ಲಿಯ ಕಲಾವಿದರು, ಊರಿನ ಪ್ರಮುಖರು ನಾಟಕ ತಂಡಗಳ ಕಟ್ಟಿ, ನಾಟಕ ಕೃತಿ ರಚಿಸಿ ಹೊರಗಡೆಯಿಂದ

ನಿರ್ದೇಶಕರನ್ನು ಕರೆಸಿ ರಂಗಭೂಮಿಯಲ್ಲೊಂದು ಸಣ್ಣ ಕ್ರಾಂತಿ ಮಾಡಿರುವುದು ಶ್ಲಾಘನೀಯ ಸಂಗತಿಯಾಗಿದೆ.

## ಸಪ್ತಶ್ರೀ ಹವ್ಯಾಸಿರಂಗ, ನರಸಿಂಹರಾಜಪುರ, ಚಿಕ್ಕಮಗಳೂರು ಜಿಲ್ಲೆ.

ನರಸಿಂಹರಾಜಪುರದ ಶಿಕ್ಷಕ ಮತ್ತು ಪ್ರಸಿದ್ಧ ರಂಗಭೂಮಿ ಕಲಾವಿದರಾಗಿದ್ದ ದಿ. ನಿರ್ಮಲಕುಮಾರ್ ಶಾಸ್ತ್ರೀಯವರ ಮಾರ್ಗದರ್ಶನದಲ್ಲಿ ಎ. ರಘುಪತಿ ತುಂಗ, ಪ್ರಭಾಕರ್, ಪಿ.ಸಿ. ಮ್ಯಾಥ್ಯು, ದಯಾನಂದಶೆಟ್ಟಿ, ಆರ್. ಪಂಚಾಕ್ಷರಪ್ಪ, ಬಿ. ಎನ್. ಜ್ವಾಲನಪ್ಪ ಸೇರಿಕೊಂಡು 1970ರ ದಶಕದಲ್ಲಿ 'ಸಪ್ತಶ್ರೀ ಹವ್ಯಾಸಿ ರಂಗವನ್ನು ಕಟ್ಟಿದರು. ಪರ್ವತವಾಣಿ, ದಾಶರಥಿ ದೀಕ್ಷಿತ್, ಬೇಲೂರು ಕೃಷ್ಣಮೂರ್ತಿ, ಗುಂಡಣ್ಣನವರ ಜನಪ್ರಿಯ ನಾಟಕಗಳನ್ನು ಸಪ್ತಶ್ರೀ ಪ್ರದರ್ಶಿಸುತ್ತಿತ್ತು. ಈ ನಾಟಕಗಳು ನರಸಿಂಹರಾಪುರದ ಗಣಪತಿ ಪೆಂಡಾಲ್‌ನಲ್ಲಿ ಪ್ರದರ್ಶನ ವಾಗುತ್ತಿತ್ತು. ಪ್ರಪ್ರಥಮಬಾರಿಗೆ ಬೀದಿ ನಾಟಕಗಳ ರಂಗಕ್ಕೆ ಅಳವಡಿಸಿದ ಕೀರ್ತಿ ಸಪ್ತಶ್ರೀಗೆ ಸಲ್ಲುತ್ತದೆ. ಸಮುದಾಯದ **'ಪತ್ರೆ ಸಂಗಪ್ಪನ ಕೊಲೆ'** ನಾಟಕವನ್ನು 1983ರಲ್ಲಿ ತುಮಕೂರಿನಲ್ಲಿ ನಡೆದ ರಾಜ್ಯಮಟ್ಟದ ಯುವಜನ ಮೇಳದಲ್ಲಿ ಪ್ರದರ್ಶಿಸಿ ಪ್ರಥಮ ಪುರಸ್ಕಾರವನ್ನು ಸಂಸ್ಥೆ ಪಡೆದಿತ್ತು. ಅದೇ ವರ್ಷ ಶಿಕಾರಿಪುರದ ಕಾಗಿನೆಲ್ಲಿಯಲ್ಲಿ ಆಯೋಜಿಸಿದ್ದ ಪುಟ್ಟಣ್ಣ ಕಣಗಾಲ್ ಸ್ಮಾರಕ ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲೂ ನಿರ್ದೇಶನಕ್ಕಾಗಿ ಶ್ರೇಷ್ಠ ನಿರ್ದೇಶಕ ಪ್ರಶಸ್ತಿ ಸಪ್ತಶ್ರೀ ಪಾಲಾಗಿತ್ತು. ತುಮಕೂರು, ಮೈಸೂರು, ನಂಜನಗೂಡು, ಇತ್ಯಾದಿ ರಾಜ್ಯದ ಅನೇಕ ಭಾಗಗಳಲ್ಲಿ ಸಪ್ತಶ್ರೀ ಕಲಾವಿದರು **'ಪತ್ರೆ ಸಂಗಪ್ಪನ ಕೊಲೆ'** ನಾಟಕವನ್ನು ಪ್ರದರ್ಶಿಸಿದ್ದಾರೆ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದ ದಿ॥ ಎ. ರಘುಪತಿ ತುಂಗ ತಮ್ಮ ಸಹಜಾಭಿನಯ, ಸುಶ್ರಾವ್ಯವಾದ ಧ್ವನಿಯ ಮೂಲಕ ಪ್ರೇಕ್ಷಕರನ್ನು ರಂಜಿಸಿದರೆ, ಕುಡುಕನ ಪಾತ್ರಕ್ಕೆ ಹೇಳಿ ಮಾಡಿಸಿದಂತಿದ್ದ ಪಿ.ಸಿ.ಮ್ಯಾಥ್ಯು ತಮ್ಮ ನೈಜ ಅಭಿನಯದಿಂದ ಪ್ರೇಕ್ಷಕರಿಗೆ ಮೋಡಿ ಹಾಕುತ್ತಿದ್ದರು. ಎನ್.ಎಸ್. ಲಕ್ಷ್ಮೀನಾರಾಯಣ, ಎನ್.ಎಸ್.ಶ್ರೀಧರ ಮೂರ್ತಿ, ಎನ್.ಎಸ್.ಶಿವಸ್ವಾಮಿ, ಬಿ.ಎನ್. ಬ್ರಹ್ಮರಾಜು, ಪಿ. ಪ್ರಕಾಶ, ಸುಂಕದಕಟ್ಟೆ ಕುಮಾರ್, ಎ.ಆರ್. ರಾಜಗೋಪಾಲ, ಎ. ಪ್ರಸನ್ನಕುಮಾರ್, ಆರ್. ಪಂಚಾಕ್ಷರಪ್ಪ, ಎ.ಆರ್. ಉಮೇಶ್, ಬಾಲಕೃಷ್ಣ, ಸದಾನಂದಶೆಟ್ಟಿ, ಪಿ.ಸಿ.ಮ್ಯಾಥ್ಯು ನರಸಿಂಹರಾಜಪುರ ತಾಲ್ಲೂಕಿನ ರಂಗಭೂಮಿ ಚಟುವಟಿಕೆಗೆ ಜೀವ ತುಂಬಿದವರು.

## ಕಲಾರಂಗ, ಬಾಳೆಹೊನ್ನೂರು, ನರಸಿಂಹರಾಜಪುರ ತಾಲ್ಲೂಕು

ಬಾಳೆಹೊನ್ನೂರಿನ ಕಲಾರಂಗ 70ರ ದಶಕದಲ್ಲಿ ಅನೇಕ ಜನಸಾಮಾನ್ಯರಿಗೆ ಹೆಚ್ಚೆಚ್ಚು ಖುಷಿ ಕೊಡುವಂತಹ ಐತಿಹಾಸಿಕ ನಾಟಕಗಳನ್ನು ಅಭಿನಯಿಸುತ್ತಿತ್ತು. ಇಲ್ಲಿಯ ಉಮೇಶ್‌ಕುಮಾರ್ ರಂಗಭೂಮಿಯಲ್ಲಿ ಒಳ್ಳೆಯ ಹೆಸರು ಮಾಡಿದವರು. ಕೊಪ್ಪದ ಉಮೇಶ ಕಾಸರವಳ್ಳಿ ಪ್ರಸಿದ್ಧ ನಟ–ನಿರ್ದೇಶಕ. ಅವರ ಭೈರ ನಾಟಕ ಯಶಸ್ವಿ ಪ್ರಯೋಗವಾಗಿದೆ. 90ರ ದಶಕದಲ್ಲಿ ಕೊಪ್ಪದ ಬಾಳಗಡಿಯ ಸರ್ವೋದಯ ಯುವಕ ಸಂಘ ಪ್ರಕಾಶರ ನಿರ್ದೇಶನದಲ್ಲಿ ಹಲವು ಸದಭಿರುಚಿಯ ನಾಟಕಗಳ ಪ್ರದರ್ಶಿಸಿತ್ತು. ಶಿಕ್ಷಕ ಗುರುರಾಜ್

ತಂತ್ರಿಯವರು ಮಕ್ಕಳಿಗಾಗಿ **'ಪೆದ್ದಗುಂಡ'** ನಾಟಕವನ್ನು ನಿರ್ದೇಶಿಸಿದರೆ, ಇಲ್ಲಿಯ ಕಿರಿಯ **ಮಹಾವಿದ್ಯಾಲಯದ ಕಲರವ** ಕನ್ನಡ ಸಂಘದ ಅಭಿನಯ ತಂಡ 1995ರಿಂದ ಅನೇಕ ಕಿರುನಾಟಕ ಮತ್ತು ರೂಪಕಗಳನ್ನು ರಂಗದ ಮೇಲೆ ಪ್ರಯೋಗಿಸಿದೆ. ಲೇಖಕಿ ಎ.ಎಸ್. ರೇಷ್ಮಾರವರು 150 ಕಿರು ಪ್ರಸಂಗಗಳ ರಚಿಸಿ ರಂಗ ಪ್ರಯೋಗ ಮಾಡಿದ್ದಾರೆ.

## ಕಾಳಿಂಗನಾವಡ ಪ್ರತಿಷ್ಠಾನ, ಶೃಂಗೇರಿ

ತುಂಗಾ ನದಿಯ ದಂಡೆಯ ಮೇಲಿರುವ, ಧಾರ್ಮಿಕ ಸಾಂಸ್ಕೃತಿಕವಾಗಿ ಇಡೀ ರಾಷ್ಟ್ರದ ಗಮನ ಸೆಳೆದಿರುವ ಶೃಂಗೇರಿಯಲ್ಲಿ ಅನೇಕ ಸಂಘಟನೆಗಳು ರಂಗಭೂಮಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿವೆ. 1970–80ರ ದಶಕದಲ್ಲಿ ಅಸ್ತಿತ್ವದಲ್ಲಿದ್ದ ಸಚ್ಚಿದಾನಂದ ಕಲಾ ಸಂಘ, ಶಾರದ ಕಲಾ ಸಂಘ ಮತ್ತು ಸ್ಫೂರ್ತಿ ಸಂಘಗಳು ಅನೇಕ ರಂಗ ಪ್ರಯೋಗ ಮಾಡಿದೆ. 1991ರಲ್ಲಿ ಹುಟ್ಟಿಕೊಂಡ ಕಾಳಿಂಗ ನಾವಡ ಪ್ರತಿಷ್ಠಾನ ಶೃಂಗೇರಿಯಲ್ಲಿ ಸಾಂಸ್ಕೃತಿಕ ಕ್ರಾಂತಿ ಮಾಡಿತೆಂದೇ ಹೇಳಬಹುದು ಈ ಸಂಸ್ಥೆ ಸಾಹಿತ್ಯಾಸಕ್ತರಲ್ಲಿ ನಾಟಕ, ಯಕ್ಷಗಾನದ ಬಗ್ಗೆ ಆಸಕ್ತಿಯನ್ನು ಜನರಲ್ಲಿ ಬೆಳೆಸಿತು. 1990 ರಲ್ಲಿ ಕಲಾರಂಗ ಎಂಬ ಸಂಸ್ಥೆಯನ್ನು ಕಟ್ಟಿಕೊಂಡು ನಾಟಕ ಅಭಿನಯಿಸುತ್ತಿದ್ದ ಕಲಾವಿದರಲ್ಲಿ ಹೊಸ ಆಲೋಚನೆ ಚಿಂತನೆಗಳ ಮೂಲಕ ರಂಗದ ಬಗ್ಗೆ ವಿಶೇಷ ಶ್ರದ್ಧೆ ಮತ್ತು ಆಸಕ್ತಿ ಮೂಡಿಸಿದ ಯಕ್ಷಗಾನ ಪಟು ಕಾಳಿಂಗ ನಾವಡರು ಅಚಾನಕ್ಕಾಗಿ ನಿಧನರಾದುದು ಕಾಳಿಂಗ ನಾವಡ ಪ್ರತಿಷ್ಠಾನದ ಹುಟ್ಟಿಗೆ ಕಾರಣವಾಯ್ತು. **ಅರಮನೆ ಕಥಾ ಪ್ರಸಂಗ, ಪುಟ್ಟಕ್ಕನ ಮೆಡಿಕಲ್ ಕಾಲೇಜ್, ಓದುವವರು, ಡಾ|| ಯು. ಆರ್. ಅನಂತಮೂರ್ತಿ ಅವರ ಪ್ರಶ್ನೆ** ನಾಟಕಗಳು ಪ್ರತಿಭಾವಂತ ಯುವ ನಿರ್ದೇಶಕ ರಮೇಶ್ ಬೇಗಾರ್ ನಿರ್ದೇಶನದಲ್ಲಿ ಈ ಪ್ರತಿಷ್ಠಾನ ಅಭಿನಯಿಸಿದೆ. ಚಿಕ್ಕಮಗಳೂರು ಜಿಲ್ಲಾ ಕೇಂದ್ರದಲ್ಲಿ ಆಗಿಂದಾಗ್ಗೆ ಶೃಂಗೇರಿಯ ಕಾಳಿಂಗ ನಾವಡ ಪ್ರತಿಷ್ಠಾನ ನಾಟಕೋತ್ಸವವನ್ನು ನಡೆಸಿಕೊಂಡು ಬಂದಿದೆ. ಪಾರಂಪರಿಕ ರಂಗೋತ್ಸವ ಶೀರ್ಷಿಕೆಯಲ್ಲಿ ರಮೇಶ್ ಬೇಗಾರ್ ನಿರ್ದೇಶನದ **ಸಂಗೊಳ್ಳಿ ರಾಯಣ್ಣ,** ಕಳ್ಳಪ್ಪು ಬಾಲಕೃಷ್ಣ ಪೈ ರಚಿಸಿ ನಿರ್ದೇಶಿಸಿರುವ ಮತ್ತು ಈವರೆವಿಗೂ ಸಾವಿರ ಪ್ರದರ್ಶನ ಕಂಡಿರುವ **'ಮೂರು ಮುತ್ತು'** ಹಾಸ್ಯನಾಟಕ ಪ್ರದರ್ಶನ ಕಂಡಿವೆ.

ಬಿ.ಎಲ್. ರವಿಕುಮಾರ್, ಶೃಂಗೇರಿ ಸುಬ್ಬಣ್ಣ, ಎ.ಎಸ್. ನಯನ, ಟಿ.ಕೆ. ಪರಾಶರ, ನಾಗೇಶ್ ಕಾಮತ್, ಶೃಂಗೇರಿ ಶಿವಣ್ಣ, ಶೃಂಗೇರಿ ರಾಮಣ್ಣ, ಬಾಲ ಗಣಪತಿ ಭಟ್, ಮುರುಳಿಧರ ಪೈ, ವೇಣುಗೋಪಾಲ, ರಮೇಶ್ ಕರುವಾನೆ, ಚಂದ್ರಕಾಂತರಾವ್, ಉದಯ ಆನೆಗುಂದ, ಎಸ್.ಜಿ. ರವೀಂದ್ರ, ಅರ್ಚನ, ಪುಷ್ಪ ಶ್ರೀಕಾಂತ, ಶ್ರೀಲಕ್ಷ್ಮೀ, ಪ್ರವೀಣ ಆನೆಗುಂದ, ಸುಬ್ರಹ್ಮಣ್ಯ ಆಚಾರ್, ಎ.ಜಿ. ಶಿವಾನಂದ ಭಟ್, ಭಾರ್ಗವ ಕೊಪ್ಪ, ಎಂ.ಕೆ. ಶ್ರೀನಿಧಿ ಮುಂತಾದವರು ಶೃಂಗೇರಿ ತಾಲ್ಲೂಕಿನ ರಂಗಕರ್ಮಿಗಳಾಗಿದ್ದಾರೆ.

## ಸಮತಾ ರಂಗತಂಡ, ಕುದುರೆಮುಖ, ಮೂಡಿಗೆರೆ ತಾಲ್ಲೂಕು

ಪಶ್ಚಿಮ ಘಟ್ಟದ ಪರ್ವತಶ್ರೇಣಿಯ ಮಧ್ಯೆ ಹಚ್ಚಹಸಿರಿನ ನಿಬಿಡಾರಣ್ಯದಿಂದ ಕಂಗೊಳಿಸುವ ಕುದುರೆಮುಖ ತನ್ನ ಒಡಲಾಳದಲ್ಲಿನ ಗಣಿಗಾರಿಕೆಯಿಂದ ಒಂದು ಕಾಲದಲ್ಲಿ ಮನೆ ಮಾತಾಗಿತ್ತು. ಇಲ್ಲಿಯ ಕಾರ್ಮಿಕರು ಹಗಲಲ್ಲಿ ಕಬ್ಬಿಣದ ಅದುರಿನ ಗಣಿಯೊಳಗೆ ಹೊಟ್ಟೆಗಾಗಿ ಬೆವರಿಳಿಸಿಕೊಂಡು ದುಡಿದರೆ, ರಾತ್ರಿ ಬುದ್ಧಿಭಾವಗಳ ವಿಕಾಸಕ್ಕಾಗಿ ಡಾ॥ ಅನಂತಮೂರ್ತಿ ಅವರು ಹೇಳುವಂತೆ ಸಾಹಿತ್ಯ, ಸಂಗೀತ ನಾಟಕ ಕಲೆಗಳಂತಹ 'ಅಡಗು ತಾಣಗಳನ್ನು' ಗಳ ಹುಡುಕಿಕೊಂಡಿದ್ದರು. **ಸಮತ, ಕಾಡುಕುದುರೆ** ತಂಡಗಳು ಕೆ.ಐ.ಓ.ಸಿ.ಎಲ್. ಸಂಸ್ಥೆ ನಿರ್ಮಿಸಿರುವ ಸುಸಜ್ಜಿತ ರಂಗಮಂದಿರದಲ್ಲಿ ಸದಭಿರುಚಿಯ ನಾಟಕಗಳನ್ನು ಪ್ರದರ್ಶಿಸುತ್ತಿದ್ದವು. ಈ ನಾಟಕಗಳು ಕಾರ್ಮಿಕರ ನಿತ್ಯ ಬವಣೆಯ ದೈನಂದಿನ ಬದುಕಿನಲ್ಲಿ ಕೊಂಚ ಲವಲವಿಕೆ ಉತ್ಸಾಹವನ್ನು ತುಂಬುತ್ತಿತ್ತು. ನಿಸರ್ಗದತ್ತ ಚೆಲುವಿನಿಂದ ಮನಮೋಹಕವಾಗಿರುವ ಕುದುರೆಮುಖದ ಸುಂದರ ಪರಿಸರದಲ್ಲಿ **ಸಮತ ಮತ್ತು ಕಾಡುಕುದುರೆ** ತಂಡಗಳು ರಂಗಭೂಮಿಯ ಕಂಪು ಬೀರಿವೆ. ಕುದುರೆಮುಖದಲ್ಲಿನ ಎಲ್ಲಾ ರಂಗ ಚಟುವಟಿಕೆಗಳು ಸಂಪತ್ ರಂಗಮಂದಿರದಲ್ಲಿ ನಡೆಯುತ್ತಿತ್ತು.

## ಅನ್ನಪೂರ್ಣೇಶ್ವರಿ ಮಹಿಳಾ ಮಂಡಳಿ, ಮೂಡಿಗೆರೆ ತಾ.

ಕಳಸದ ಅನ್ನಪೂರ್ಣೇಶ್ವರಿ ಮಹಿಳಾ ಮಂಡಳಿ ಕಳೆದ ಒಂದು ದಶಕದಿಂದ ಅನೇಕ ಅತ್ಯುತ್ತಮ ನಾಟಕ ಪ್ರಯೋಗಗಳನ್ನು ಮಾಡಿದೆ. ಮಾಸ್ಟರ್ ಹಿರಣ್ಣಯ್ಯ ನವರ **ಲಂಚಾವತಾರ,** ದಿ॥ ಭಾಸ್ಕರ್ ನೆಲ್ಲಿತೀರ್ಥ ನಿರ್ದೇಶನದ **ನಾಗಮಂಡಲ** ಮುಂತಾದ ಅನೇಕ ನಾಟಕಗಳನ್ನು ಈ ಸಂಸ್ಥೆ ಪ್ರದರ್ಶಿಸಿದೆ.

## ಸಚೇತನ ಯುವಕ ಸಂಘ, ಮೂಡಿಗೆರೆ

ಕಾಫಿಯ ಘಮಘಮ, ಏಲಕ್ಕಿಯ ಘಾಟಿಗೆ ಹೆಸರುವಾಸಿಯಾದ ಮೂಡಿಗೆರೆ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳಿಗೆ ಹೆಸರುವಾಸಿಯಾದ ಕೇಂದ್ರ, ಕರ್ವಾಲೋ, ತಬರನ ಕಥೆ, ಅಬಚೂರಿನ ಪೋಸ್ಟ್ ಆಫೀಸ್ ಕಾದಂಬರಿಗಳ ಮೂಲಕ ಮೂಡಿಗೆರೆಯ ಸಾಂಸ್ಕೃತಿಕ ತಲ್ಲಣಗಳಿಗೆ ಧ್ವನಿಯಾಗಿದ್ದ ದಿ॥ ಪೂರ್ಣಚಂದ್ರ ತೇಜಸ್ವಿ ತಮ್ಮ ಬದುಕನ್ನು ಕಟ್ಟಿಕೊಂಡ ಊರು. ಇಂತಹ ಮೂಡಿಗೆರೆ ಯಲ್ಲಿ ಕಳೆದ 25 ವರ್ಷಗಳಿಂದ ನಿರಂತರವಾಗಿ ರಂಗ ಚಟುವಟಿಕೆಯನ್ನು ಬೆಳೆಸಿ, ಪೋಷಿಸಿಕೊಂಡು ಬಂದಿರುವ ಸಚೇತನ ಯುವಕ ಸಂಘ ತನ್ನ 25 ವರ್ಷಗಳ ಸುದೀರ್ಘ ಪಯಣದ ಸಂಭ್ರಮದಲ್ಲಿ ಬೆಳ್ಳಿ ಹಬ್ಬವನ್ನು ಆಚರಿಸಿಕೊಂಡಿದೆ. ಈ ದಿಸೆಯಲ್ಲಿ ಇಲ್ಲಿಯ ಅದ್ಭುತವಾದ ರಂಗಮಂದಿರದಲ್ಲಿ ಪ್ರದರ್ಶನಗೊಂಡ ಬೆಂಗಳೂರಿನ ಶಂಕರಗಣೇಶ್ ನಿರ್ದೇಶನದ **ರೋಮಿಯೋ ಲವ್ಸ್ ಅನಾರ್ಕಲಿ** ನಾಟಕ ಒಂದು ದಾಖಲೆಯಾಗಿ ಉಳಿದಿದೆ. ರಂಗನಿಧಿ, ದಿನೇಶ್, ಅನಿರುದ್ಧ್, ಅಂಕಿತ, ರುಕ್ಮಿಣಿ, ವಿದ್ಯಾ ಉಳಿತ್ತಾಯ, ರಕ್ಷಿತ್, ದೀಪಕ್, ರವೀಕ್, ಶರತ್, ಸೂಯಿತ್ ಮತ್ತು ಗೌತಮ್ ಸುಚೇತನ ಕಲಾಸಂಘದ ಪ್ರಮುಖ ಮತ್ತು ಪ್ರಬುದ್ಧ ಕಲಾವಿದರಾಗಿದ್ದಾರೆ.

## ಚಂದ್ರಗಿರಿ ಕಲಾಪ್ರತಿಷ್ಠಾನ – ಕೊಪ್ಪ

**"ಚಂದ್ರಗಿರಿ"** ಕಲಾಪ್ರತಿಷ್ಠಾನ ಕಳೆದ ಎರಡು ವರ್ಷಗಳಿಂದ ಮಲೆನಾಡಿನ ಗ್ರಾಮೀಣ ಪ್ರತಿಭೆಗಳನ್ನು ರಂಗಭೂಮಿಗೆ ಪರಿಚಯಿಸುವುದರಲ್ಲಿ ಗಮನಾರ್ಹ ವಾದ ಸಾಧನೆ ಮಾಡಿದೆ. ಕೊಪ್ಪದ ಚಂದ್ರಗಿರಿ ಪ್ರತಿಷ್ಠಾನ ಅಸ್ತಿತ್ವಕ್ಕೆ ಬಂದ ದಿನಗಳಿಂದಲೂ ನೂರಾರು ರಂಗ ಕಲಾವಿದರನ್ನು ನಾಡಿಗೆ ಪರಿಚಯಿಸಿದೆ. ಹಾಸ್ಯಮಯ ನಾಟಕ **'ಫೇಸ್ ಬುಕ್'** ಪ್ರತಿಷ್ಠಾನ ಪ್ರಸ್ತುತಪಡಿಸಿರುವ ಯಶಸ್ವಿ ನಾಟಕವಾಗಿದೆ.

## ಚಿಕ್ಕಮಗಳೂರು ನಗರ ಕಲಾವಿದರು

ಎಸ್.ಆಲೇಶ್, ಗೋಪಿನಾಥ, ಎಂ.ವೈ. ಮಹಂತೇಶ್, ಡಿ॥ ಚಿ.ನಾ. ನಾಗರಾಜ್, ಶಿವಪ್ರಸಾದ್, ಕೀಬೋರ್ಡ್ ನಾಗಭೂಷಣ, ಕಿಂಗ್ ಸತ್ಯ, ಮುಂತಾದ ಅನೇಕ ಕಲಾವಿದರು 1995ರಲ್ಲಿ ಸದರಿ ತಂಡವನ್ನು ಸ್ಥಾಪಿಸಿದ್ದರು. ವಾರ್ತಾ ಮತ್ತು ಪ್ರಚಾರ ಇಲಾಖೆಯ ಆಶ್ರಯದಲ್ಲಿ ಪ್ರದರ್ಶನಗೊಂಡ **ಅಕ್ಷರ ಬಾಳಿಗೊಂದು ಉತ್ತರ** ನಾಟಕ 75 ಪ್ರದರ್ಶನಗಳನ್ನು ಕಂಡಿದೆ.

## ನವರಸ ಕಲಾವಿದರು, ಚಿಕ್ಕಮಗಳೂರು

1986ರಲ್ಲಿ ಕಾರ್ಯಪ್ರವೃತ್ತವಾಗಿದ್ದ ಸದರಿ ತಂಡ ಅನೇಕ ಸಾಮಾಜಿಕ, ಪೌರಾಣಿಕ, ಐತಿಹಾಸಿ ನಾಟಕಗಳನ್ನು ಪ್ರದರ್ಶಿಸಿದೆ. **ಪ್ರಾಯಶ್ಚಿತ, ದಾಹ, ಓಟಿನ ಏಟು, ಹೆಣ್ ಕೊಟ್ಟ ಮಾವ ಕಣ್ ಕೊಟ್ಟ ದೇವ, 420 ಅಲ್ಲಾ 840** ಮುಂತಾದ ಅನೇಕ ಜನಪ್ರಿಯ ನಾಟಕಗಳನ್ನು ಪ್ರದರ್ಶಿಸಿದೆ. ಜಾರ್ಜ್ ಚಕ್ರವರ್ತಿ, ಎಂ.ವೈ. ಮಹಂತೇಶ್, ಕಾರ್ಪೆಂಟರ್ ಗಂಗಣ್ಣ, ಕುಮಾರ್, ಪಿ.ರಾಜೇಶ್ ಮುಂತಾದವರು **ನವರಸ ಕಲಾವಿದರು** ತಂಡದ ಕಲಾವಿದರಾಗಿದ್ದಾರೆ.

# ಜಿಲ್ಲೆಯ ಮಕ್ಕಳ ರಂಗಭೂಮಿ

ಪ್ರತಿಭಾದ ಎಂ.ಬಿ. ಶಿವಪ್ಪ, ಭೂಮಿಕಾದ ಬಿ.ಜಿ. ನಾರಾಯಣ ಪ್ರಸಾದ್, ಸಂಯುಕ್ತಾದ ಸುರೇಶ್ ದೀಕ್ಷಿತ್ ಮುಂತಾದವರು ಜಿಲ್ಲೆಯ ಮಕ್ಕಳ ರಂಗಭೂಮಿ ಬೆಳವಣಿಗೆಯಲ್ಲಿ ಅಪಾರ ಕೊಡುಗೆ ನೀಡಿದ್ದಾರೆ. ಈ ಸಂಸ್ಥೆಗಳು ನಿರಂತರವಾಗಿ ಬೇಸಿಗೆ ರಜೆಯ ಸಮಯದಲ್ಲಿ ಮಕ್ಕಳ ರಂಗ ತರಬೇತಿ ಶಿಬಿರವನ್ನು ಆಯೋಜಿಸಿದ್ದರು. ಕೃಷ್ಣಮೂರ್ತಿಯಾದವ್, ಬ್ರಹ್ಮಾಚಾರ್ ಮುಂತಾದವರಿಂದ ರಂಗ ತರಬೇತಿ ಶಿಬಿರಗಳನ್ನು ನಡೆಸಿದ್ದಾರೆ. ಚಿಕ್ಕಮಗಳೂರಿನ ರಂಗಶ್ರೀ ಮಕ್ಕಳಿಗಾಗಿ ಕೆ.ಜಿ. ಕೃಷ್ಣಮೂರ್ತಿ ನಿರ್ದೇಶನದಲ್ಲಿ ರಂಗ ತರಬೇತಿ ಶಿಬಿರ ಆಯೋಜಿಸಿ **"ಬೆಟ್ಟಕ್ಕೆ ಚಳಿಯಾದರೆ"** ನಾಟಕವನ್ನು ಪ್ರದರ್ಶಿಸಿತ್ತು. ಕೃಷ್ಣಮೂರ್ತಿ ಕವತಾರ್ ಚಿಕ್ಕಮಗಳೂರು ನಗರದ ಶಾಲಾ ಮುಖ್ಯಸ್ಥರ ಒತ್ತಾಸೆಯ ಮೇರೆಗೆ ನಗರ ಮಹಿಳಾ ಸಮಾಜ ಶಾಲೆಗಾಗಿ **'ಢಾಣ ಡಂಗೂರ'**, ಎಂ.ಇ.ಎಸ್. ಸಂಸ್ಥೆಗಾಗಿ ಡಾ॥ ಚಂದ್ರಶೇಖರ್ ಕಂಬಾರರ **'ಪುಷ್ಪದ ರಾಣಿ'** ನಾಟಕ ಶಿಬಿರವನ್ನು ನಗರದ ರಂಗಾಸಕ್ತರ ಸಹಕಾರದೊಂದಿಗೆ ನಡೆಸಿಕೊಟ್ಟಿದ್ದರು.

ರಂಗಶ್ರೀ ಸಂಸ್ಥೆ 1990ರ ದಶಕದಲ್ಲಿ ನಿರಂತರವಾಗಿ ಅಂತರ ಪ್ರೌಢಶಾಲಾ ನಾಟಕ ಸ್ಪರ್ಧೆಯನ್ನು ನಡೆಸಿಕೊಂಡು ಬಂದಿತ್ತು. ಪ್ರತಾಪ್, ನಾಗರಾಜ್, ಎಂ.ಜೆ. ಶ್ರೇಯಸ್, ಪವಿತ್ರ, ಸಿಂಧು, ನಾಗಭೂಷಣ, ಚಂದನ, ಹೆಚ್.ಆರ್. ರೇಖಾ, ಎಂ.ಸಿ. ನಂದಿನಿ, ಬಿ. ಸೌಮ್ಯ, ಎಂ.ಎಸ್. ಲತಾ, ರೋಸಲೀನ್, ಬಿ. ಭೂಮಿಕ, ಎಸ್. ಲತಾ, ಹೆಚ್.ಎನ್. ಶ್ರೀದೇವಿ ಮುಂತಾದ ಬಾಲನಟರು ಚಿಕ್ಕಮಗಳೂರಿನ ಮಕ್ಕಳ ರಂಗಭೂಮಿಯಲ್ಲಿ ಗುರುತಿಸಿಕೊಂಡಿದ್ದರು.

ಅಜ್ಜಂಪುರದ ಗೆಳೆಯರ ಬಳಗ ಹೊಸದುರ್ಗದ ತೋಟದ ರಾಮಯ್ಯ ಪ್ರೌಢಶಾಲೆಯ ಮಕ್ಕಳಿಗಾಗಿ ನಡೆಸಿದ್ದ ಮಕ್ಕಳ ಶಿಬಿರದಲ್ಲಿ ಮಂಜುಳ ಬಾದಾಮಿ ಚಂದ್ರಶೇಖರ್ ಕಂಬಾರರ **'ಅಪ್ಪ'** ಮಕ್ಕಳ ನಾಟಕವನ್ನು ನಿರ್ದೇಶಿಸಿದ್ದರು. ಗೆಳೆಯರ ಬಳಗದ ವಿದ್ಯಾಸಂಸ್ಥೆಯ ಮಕ್ಕಳಿಗಾಗಿ ಕಂಬಾರರ **'ಪುಷ್ಪದ ರಾಣಿ'** ನಾಟಕವನ್ನು ಎ.ಎಸ್. ಕೃಷ್ಣಮೂರ್ತಿ ಮತ್ತು ಮಂಜುಳ ಬಾದಾಮಿ ನಿರ್ದೇಶಿಸಿದ್ದರು.

ನಗರದ ಜಿಲ್ಲಾಧಿಕಾರಿ ಕಚೇರಿಯ ಚುನಾವಣಾ ವಿಭಾಗದ ನೌಕರರಾಗಿದ್ದ ಸುರೇಶ್ ದೀಕ್ಷಿತ್‌ರವರ ಮಕ್ಕಳ ರಂಗಭೂಮಿಯಲ್ಲಿನ ಸೇವೆ ಅನುಕರಣೀಯ ವಾಗಿದೆ. ಇವರು ಶಾಲಾ ಮಕ್ಕಳಿಗೆ ಬೇಸಿಗೆ ಶಿಬಿರಗಳಲ್ಲಿ **'ಬೊಂಬೆ ರಾವಣ'**, **'ಆಲಿಬಾಬಾ 40 ಮಂದಿ ಕಳ್ಳರು'**, **'ಡಾಂ–ಢೂಮ್ ಸುಂಟರಗಾಳಿ'** ಹಾಗೂ ಆಶಾಕಿರಣ ಅಂಧಮಕ್ಕಳ ಪಾಠಶಾಲೆಯ ಸುಮಾರು

100 ಮಂದಿ ಅಂಧ ವಿದ್ಯಾರ್ಥಿಗಳಿಂದ **'ಕೆರೆಗೆ ಹಾರ'** ನಾಟಕವನ್ನು ಯಶಸ್ವಿಯಾಗಿ ರಂಗಕ್ಕೆ ತಂದ ಕೀರ್ತಿ ಇವರಿಗೆ ಸಲ್ಲುತ್ತದೆ.

ಚಿಕ್ಕಮಗಳೂರಿನ ಜಿಲ್ಲಾ ರಂಗಭೂಮಿ ಚಟುವಟಿಕೆಯಲ್ಲಿ ಒಂದು ಕಾಲದಲ್ಲಿ ಕ್ರಿಯಾಶೀಲರಾಗಿದ್ದು, ಕಾರಣಾಂತರದಿಂದ ಬದುಕಿನ ಸುಂದರ ಕ್ಷಣಗಳನ್ನು ಅರಸಿಕೊಂಡು ಹೋದ ಮಹಾನುಭಾವರು ನಮ್ಮಲ್ಲಿದ್ದಾರೆ. ಜೊತೆಯಲ್ಲಿ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ರಂಗಭೂಮಿಯಲ್ಲಿ ತೊಡಗಿಸಿಕೊಂಡವರೂ ಇದ್ದಾರೆ.

ತರೀಕೆರೆಯ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ತರೀಕೆರೆಯ ಕಲಾಶ್ರೀ ಭಗವಾನ್, ಕೊಪ್ಪದ **'ಶಂಖನಾದ'** ಚಲನಚಿತ್ರ ಖ್ಯಾತಿಯ ಅರವಿಂದ್, ನಾಟಕ ಅಕಾಡೆಮಿ ಪ್ರಶಸ್ತಿ ವಿಜೇತ ಶೃಂಗೇರಿ ರಾಮಣ್ಣ, ತರೀಕೆರೆಯ ಕೆ. ತಿಮ್ಮಣ್ಣ ಮತ್ತು ಜಯಲಕ್ಷ್ಮಿರವರು ಚಿಕ್ಕಮಗಳೂರು ಜಿಲ್ಲಾ ರಂಗಭೂಮಿಗೆ  ನೀಡಿರುವ ಅನುಪಮ ಸೇವೆಯನ್ನು ನಾವಿಂದು ಸ್ಮರಿಸಿಕೊಳ್ಳಬೇಕಿದೆ. ಕಡೂರಿನ ಪತ್ರಕರ್ತ ದಿ॥ ಹೆಚ್.ಎಸ್. ಸೂರ್ಯನಾರಾಯಣ, ಎಂ. ಎಸ್. ಜೋಯ್ಸ್ ಮತ್ತು ಶಂಕರರವರು ರಂಗಚಳುವಳಿಗೆ ನೀಡಿರುವ ಬಳುವಳಿ ಅನನ್ಯವಾದುದು. ಕೊಪ್ಪ ಸಮೀಪದಲ್ಲಿರುವ ಹುಲ್ಸೆಯ ದಿ॥ ಹು.ವಾ. ಶ್ರೀವತ್ಸರ ತಂಡ ಸದ್ದಿಲ್ಲದೆ ರಂಗ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದೆ. ಮೂಡಿಗೆರೆಯ ತಕ್ಷಶಿಲಾ ಸಂಸ್ಥೆಯು ಒಂದಿಷ್ಟು ರಂಗಚಟುವಟಿಕೆ ನಡೆಸಿಕೊಂಡು ಬಂದಿದೆ. ಇಲ್ಲಿಯ ದೂರವಾಣಿ ವಿನಿಮಯ ಕೇಂದ್ರದ ಬಸವರಾಜ ಅತ್ತಾಡಕರ್, ರುದ್ರಯ್ಯ ಮುಂತಾದವರು ಮೂಡಿಗೆರೆಯ ರಂಗಚಟುವಟಿಕೆಯನ್ನು ಜೀವಂತಗೊಳಿಸಿದ್ದಾರೆ.

ಇನ್ನೂ ಅನೇಕ ಮಂದಿ ರಂಗಾಸಕ್ತರು ನೇರವಾಗಿ ರಂಗದ ಮೇಲೆ ಕಾಣಿಸಿಕೊಳ್ಳದಿದ್ದರೂ ತಮ್ಮ ರಂಗಭೂಮಿ ಅಧ್ಯಯನದ ಹಿನ್ನೆಲೆಯಲ್ಲಿ ಚಿಕ್ಕಮಗಳೂರು ನಗರದಲ್ಲಿ ಪ್ರದರ್ಶನಗೊಂಡಿರುವ ಅನೇಕ ನಾಟಕಗಳ ವಿಮರ್ಶಕ ರಾಗಿ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಇವರಲ್ಲಿ ಎ.ಜಿ.ವಿಶ್ವಮೂರ್ತಿ, ಕೆ. ಓಂಕಾರಪ್ಪ, ಘಂ. ಮೋಹನಕುಮಾರ್, ಸಿ.ಬಿ.ಸತೀಶ್, ಪ್ರಜಾವಾಣಿಯ ವರದಿಗಾರ ರಾಗಿದ್ದ ಎಫ್.ಎಂ.ನಂದಗಾವ್, ವಿಜಯ ಕರ್ನಾಟಕದ ವರದಿಗಾರ ಹೆಚ್.ಎಸ್. ಪುಟ್ಟಸ್ವಾಮಿ, ಪ್ರಜಾವಾಣಿಯ ಸಂತೋಷ್‌ಕುಮಾರ್, ಅಪ್ಪಾಜಿ ಪ್ರಮುಖ ರಂಗ ವಿಮರ್ಶಕರಾಗಿದ್ದಾರೆ. ವಿಶೇಷವಾಗಿ ಜಿಲ್ಲೆಯ ಅನೇಕ ದಿನಪತ್ರಿಕೆ ಮತ್ತು ರಾಜ್ಯ ಪತ್ರಿಕೆಗಳಾದ ಮನುಜಮತ, ಶೃಂಕೋನ, ಜನಮಿತ್ರ, ಪ್ರಜಾವಾಣಿ, ವಿಜಯವಾಣಿ, ವಿಜಯಕರ್ನಾಟಕ, ಸಂಯುಕ್ತ ಕರ್ನಾಟಕ, ಉದಯವಾಣಿ ಮುಂತಾದ ಪತ್ರಿಕೆಗಳು ಆಗಾಗ್ಗೆ ಪ್ರದರ್ಶನಗೊಳ್ಳುವ ನಾಟಕಗಳ ಕುರಿತು ಆರೋಗ್ಯಪೂರ್ಣ ವಿಮರ್ಶೆಯನ್ನು ಮಾಡುವುದರ ಮೂಲಕ ಚಿಕ್ಕಮಗಳೂರು ಜಿಲ್ಲೆಯ ರಂಗ ಚಟುವಟಿಕೆ ಜೀವಂತವಾಗಿರುವುದರಲ್ಲಿ ನಿರಂತರವಾಗಿ ಸಹಕರಿಸಿವೆ.

ನೂರಾರು ಕಲಾವಿದರು ಹಗಲುಗನಸಾಗಿದ್ದ ಕುವೆಂಪು ಕಲಾಮಂದಿರ ಈ ಹೊತ್ತು ಸಜ್ಜುಗೊಂಡು ನಿಂತಿದೆ. ಚಿಕ್ಕಮಗಳೂರು ಸೇರಿದಂತೆ ಜಿಲ್ಲೆಯ ಅನೇಕ ಭಾಗಗಳಲ್ಲಿ ಸಂಘಗಳು

ಹುಟ್ಟಿವೆ. ಅಷ್ಟೇ ವೇಗವಾಗಿ ತೆರೆಯ ಹಿಂದೆ ಸೇರಿವೆ. ದೂರದರ್ಶನದ ಪ್ರಭಾವ, ಮೋಟಾರ್ ರ್ಯಾಲಿಯ ಹುಚ್ಚು, ಸ್ನೂಕರ್ ಮತ್ತು ಬಿಲಿಯರ್ಡ್ಸ್ ಬಗೆಗಿನ ವ್ಯಾಮೋಹದ ಮಧ್ಯೆ ಪಕ್ಕದ ಹಾಸನ, ಶಿವಮೊಗ್ಗ ಮತ್ತು ಘಟ್ಟದ ಕೆಳಗಡೆಗೆ ಹೋಲಿಸಿದರೆ ಇಲ್ಲಿ ರಂಗಚಟುವಟಿಕೆ ತುಂಬಾ ಕಡಿಮೆ ಎಂದೇ ಹೇಳಬಹುದು. ಇದಕ್ಕೆ ಅಪವಾದ ಎಂಬಂತೆ ಅಜ್ಜಂಪುರ ಕಲಾಸೇವಾ ಸಂಘ ಮತ್ತು ಶೃಂಗೇರಿಯ ಕಾಳಿಂಗ ನಾವಡ ಪ್ರತಿಷ್ಠಾನ ಇಂದಿಗೂ ನಿರಂತರವಾಗಿ ರಂಗಚಟುವಟಿಕೆಯನ್ನು ನಡೆಸಿಕೊಂಡು ಬರುವಲ್ಲಿ ಯಶಸ್ವಿಯಾಗಿದೆ. ಆಗಾಗ್ಗೆ ನುಸುಳಿ ಕಣ್ಮರೆಯಾಗಿ ಹೋಗುವ ಹೊರಗಡೆಯಿಂದ ಬರುವ ತಂಡಗಳ ನಾಟಕಗಳ ಬಿಟ್ಟರೆ ಇಲ್ಲಿ ನಾಟಕಗಳಿಗೆ ಬರವೆಂದೇ ಹೇಳಬೇಕು. ಭೂತಕಾಲದ ಭವ್ಯ ಪರಂಪರೆಯ ವೈಭವವನ್ನು ನೆನಪಿಸಿಕೊಳ್ಳುವುದರ ಜೊತೆಗೆ ಭವಿಷ್ಯತ್ತಿನಲ್ಲಿಯ ರಂಗ ಚಟುವಟಿಕೆಯ ಅಳಿವು ಮತ್ತು ಉಳಿವಿನ ಬಗ್ಗೆಯೂ ಕೂಡ ಜಿಲ್ಲೆಯ ರಂಗಾಸಕ್ತರು ಯೋಚಿಸಬೇಕಿದೆ. 80ರ ದಶಕದಲ್ಲಿ ಚಿಕ್ಕಮಗಳೂರು ನಗರದಲ್ಲಿ ಸ್ಥಾಪನೆಗೊಂಡ ಕುವೆಂಪು ಕಲಾಮಂದಿರ ಅನೇಕ ಕಲಾವಿದರ, ರಂಗಕರ್ಮಿಗಳ ಹೋರಾಟಕ್ಕೆ ಸಂದ ಜಯವಾಗಿದೆ. 2011ರಲ್ಲಿ ನವೀಕರಣ ಗೊಂಡ ಕುವೆಂಪು ಕಲಾಮಂದಿರದ ಬಾಡಿಗೆ ಬಡ ಕಲಾಸಂಸ್ಥೆಗಳಿಗೆ ಹೊರೆಯಾಗಿದೆ. ಕುವೆಂಪು ಕಲಾಮಂದಿರ ಅಸ್ತಿತ್ವಕ್ಕೆ ಬರುವ ಮುನ್ನ ನಗರದ ನಾಟಕ ಪ್ರದರ್ಶನಗಳು ಎಂ.ಎಲ್.ವಿ. ರೋಟರಿ ಸಭಾಂಗಣದಲ್ಲಿ ನಡೆಯುತ್ತಿತ್ತು.

# ಚಿಕ್ಕಮಗಳೂರು ಜಿಲ್ಲೆಯ ಹವ್ಯಾಸಿ ಕಲಾವಿದರು ಮತ್ತು ತಂತ್ರಜ್ಞರು

## ದಿ॥ ಸಿ.ಪಿ. ಪರಮೇಶ್ವರಪ್ಪ

ಚಿಕ್ಕಮಗಳೂರಿನ ಕಲಾಸೇವಾ ಸಂಘದ ಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದ ದಿ॥ ಸಿ.ಪಿ. ಪರಮೇಶ್ವರಪ್ಪನವರು ಹವ್ಯಾಸಿ ನಟರಾಗಿ, ಬಾಲನಟರಾಗಿ ರಂಗ ಭೂಮಿಗೆ ತಮ್ಮದೇ ಆದ ಅನನ್ಯ ಕೊಡುಗೆಯನ್ನು ನೀಡಿದ್ದಾರೆ. 1968ರಲ್ಲಿ ತಿಪಟೂರಿನಲ್ಲಿ ನಡೆದ ರಾಜ್ಯ ಮಟ್ಟದ ನಾಟಕ ಸ್ಪರ್ಧೆಯಲ್ಲಿ ಪ್ರದರ್ಶನಗೊಂಡ **'ಸಮಾಜ ದ್ರೋಹಿ'** ನಾಟಕದ **'ಕವಿರಾಜ್', 'ಜ್ವಾಲಾ'** ನಾಟಕದ ಬಬ್ರುವಾಹನ ಪಾತ್ರಗಳಲ್ಲಿನ ಅಭಿನಯಕ್ಕೆ ಉತ್ತಮ ಪೋಷಕ ನಟ ಪ್ರಶಸ್ತಿ ಇವರ ಪಾಲಾಗಿತ್ತು. ಇವರು ತಮ್ಮ ಶಿಕ್ಷಕ ವೃತ್ತಿಯ ನಿವೃತ್ತಿಯ ನಂತರ ಪೂರ್ಣಾವಧಿ ರಂಗಕಲಾವಿದ ರಾಗಿ ಕಾರ್ಯನಿರ್ವಹಿಸಿ **'ಯಮಲೋಕದಲ್ಲಿ ಮಾನವ'** ನಾಟಕದ ಚಿತ್ರಗುಪ್ತನ ಪಾತ್ರ ರಂಗಾಸಕ್ತರ ಸ್ಮೃತಿಪಟಲದಲ್ಲಿ ಅಚ್ಚಳಿಯದೇ ಉಳಿದಿದೆ.

## ದಿ. ಕೃಷ್ಣೋಜಿರಾವ್ ಚೌವ್ಹಾಣ್

ಅಜ್ಜಂಪುರದ ದಿ. ಕೃಷ್ಣೋಜಿರಾವ್ ಚೌವ್ಹಾಣ್ ದೃಶ್ಯ ವಿನ್ಯಾಸದಲ್ಲಿ ಅಪಾರ ಅನುಭವವನ್ನು ಹೊಂದಿದ್ದರು. ಅಜ್ಜಂಪುರದ ಪ್ರತಿಷ್ಠಿತ ಕಲಾ ಸೇವಾ ಸಂಘದ ಸ್ಥಾಪನೆಯಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದ ಶ್ರೀಯುತರು, ಆ ಮೂಲಕ ಅನೇಕ ಹಿರಿಯ, ಕಿರಿಯ ಕಲಾವಿದರಲ್ಲಿ ನಾಟಕದ ಗೀಳನ್ನು ಹಚ್ಚಿ ಅವರಿಗೆ ರಂಗಶಿಕ್ಷಣ ನೀಡಿದ್ದರು. ನರಹರಿಶಾಸ್ತ್ರೀಯವರ **ಜಗಜ್ಯೋತಿ ಬಸವೇಶ್ವರ**, ಬಿ.ಪುಟ್ಟಸ್ವಾಮಯ್ಯನವರ **ಅಕ್ಕಮಹಾದೇವಿ, ಏಚ್ಚಮನಾಯಕ, ಶ್ರೀರಾಮ ಪಾದುಕಾ ಪಟ್ಟಾಭಿಷೇಕ**, ಕುವೆಂಪುರವರ **'ಬೆರಳ್‌ಗೆ ಕೊರಳ್'** ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದರು.

## ದಿ. ನಿರ್ಮಲಕುಮಾರ ಶಾಸ್ತ್ರಿ

1970ರ ದಶಕದಲ್ಲಿ ನರಸಿಂಹರಾಜಪುರ ಮತ್ತು ಅದರ ಸುತ್ತ ಮುತ್ತಲಿನ ಸರಹದ್ದಿನಲ್ಲಿ ಕೇಳಿಬರುವ ಖ್ಯಾತ ಹೆಸರು ದಿ. ನಿರ್ಮಲಕುಮಾರ ಶಾಸ್ತ್ರಿ, ವೃತ್ತಿಯಲ್ಲಿ ಶಿಕ್ಷಕರಾಗಿದ್ದ ಶಾಸ್ತ್ರಿಗಳು ಸ್ವತಃ ಗಾಯಕ, ನಿರ್ದೇಶಕ ಮತ್ತು ನಟ ಹಾಗೂ ಒಳ್ಳೆಯ ಹಾರ್ಮೋನಿಯಂ ವಾದಕರೂ ಆಗಿದ್ದರು. ಹೆಸರಿಗೆ ಯಾವುದೇ ತಂಡಗಳ ಕಟ್ಟದಿದ್ದರೂ ಅಂದಿನ ಜನಪ್ರಿಯ ನಾಟಕಗಳಾಗಿದ್ದ

ದಾನಶೂರಕರ್ಣ, ಸಂಸಾರನೌಕೆ, ಕುರುಕ್ಷೇತ್ರ, ದೇವದಾಸಿ, ಬಾಡಿಗೆ ಮನೆ, ಸದಾರಮೆ ಮುಂತಾದ ನಾಟಕಗಳ ಆಯೋಜಿಸಿದ್ದರು. ಸಾಂಸ್ಕೃತಿಕವಾಗಿ,. ಸಾಹಿತ್ಯಿಕವಾಗಿ ತುಂಬಾ ಹಿಂದುಳಿದಿರುವ ನರಸಿಂಹರಾಜಪುರಕ್ಕೆ ನಟ ದಿ. ಉದಯಕುಮಾರ್‌ರವರನ್ನು ಆಮಂತ್ರಿಸಿ **ಎಚ್ಚಮನಾಯಕ**, ಬೆಳಗೆರೆ ಕೃಷ್ಣಶಾಸ್ತ್ರಿ ವಿರಚಿತ **ಹಳ್ಳಿಚಿತ್ರ** ನಾಟಕವನ್ನು ನಿರ್ಮಲಕುಮಾರ ಶಾಸ್ತ್ರಿಗಳು ಸಂಯೋಜಿಸಿದ್ದರು. ಕಲಾವಿದರು, ಗಾಯಕರೆಂದರೆ ಸದಾ ಸಹಾಯದ ಹಸ್ತ ನೀಡುತ್ತಿದ್ದ ಶ್ರೀಯುತರು ಬಾಳೆಹೊನ್ನೂರಿನ ಪ್ರೌಢಶಾಲೆ ಸಹಾಯಾರ್ಥ ಕುರುಕ್ಷೇತ್ರ ನಾಟಕವನ್ನು 50ರ ದಶಕದಲ್ಲಿಯೇ ಪ್ರದರ್ಶಿಸಿ ಪ್ರೇಕ್ಷಕರ ಪ್ರೀತಿಗೆ ಪಾತ್ರರಾಗಿದ್ದರು. ಎನ್.ಕೆ. ಕೃಷ್ಣ ಮೂರ್ತಿ, ರಾಮಮೂರ್ತಿ, ಎ.ಕೆ. ರಾಮಣ್ಣ, ವೈ. ಕೃಷ್ಣಮೂರ್ತಿ,. ರಾಮಮೂರ್ತಿ, ಹೆಚ್.ಸಿ. ನಂಜುಂಡಭಟ್ಟ, ಎನ್.ಎಸ್. ಶಿವಸ್ವಾಮಿ, ಎನ್.ಎಸ್. ಶಶಿಧರ, ಎನ್.ಎಸ್. ಲಕ್ಷ್ಮೀನಾರಾಯಣ ಮುಂತಾದವರ ಜೊತೆಯಲ್ಲಿ ಶಾಸ್ತ್ರಿಗಳು ರಂಗಭೂಮಿಗೆ ವಿಶಿಷ್ಟ ಕಾಣಿಕೆಯನ್ನು ಇತ್ತಿದ್ದಾರೆ.

### ದಿ|| ಎಂ.ಎಸ್. ರಾಮಣ್ಣ

ತಮ್ಮ ಸೇವಾವಧಿಯಲ್ಲಿ, ತಮ್ಮ ಶಿಷ್ಯ ವೃಂದಕ್ಕೆ ನಾಟಕದ ಬಗ್ಗೆ ಆಸಕ್ತಿ ಹುಟ್ಟಿ ಹಾಕುವುದರಲ್ಲಿ ನಿರಂತರವಾಗಿ ಶ್ರಮಿಸಿದ್ದರು. ಐತಿಹಾಸಿಕ, ಪೌರಾಣಿಕ ಮತ್ತು ಸಾಮಾಜಿಕ ನಾಟಕಗಳಲ್ಲಿ ತಮ್ಮ ವಿಶಿಷ್ಟವಾದ ಅಭಿನಯದ ಮೂಲಕ ಹೆಸರುವಾಸಿಯಾಗಿದ್ದ ಶ್ರೀಯುತರು ಗಣೇಶ್ ಕಲಾತಂಡದ ಪ್ರಮುಖ ಕಲಾವಿದರಾಗಿ ಸೇವೆ ಸಲ್ಲಿಸಿದ್ದರು.

### ದಿ|| ರವಿ

ಚಿಕ್ಕಮಗಳೂರಿನ ಹಿರಿಯ ಕಲಾವಿದರಾಗಿದ್ದ ಶ್ರೀಯುತರು ಕಲಾಸೇವಾ ನಗರದ ಎಲ್ಲಾ ಕಲಾ ತಂಡಗಳು ಸಾದರಪಡಿಸುತ್ತಿದ್ದ ಹತ್ತು ಹಲವು ನಾಟಕಗಳಲ್ಲಿ ಪೋಷಕ ಪಾತ್ರಗಳನ್ನು ಮಾಡುತ್ತಿದ್ದರು. ವಿಶೇಷವಾಗಿ ಹಾಸ್ಯ ನಾಟಕಗಳ ಹಾಸ್ಯ ನಟನ ಅಭಿನಯಕ್ಕೆ ಜೀವ ತುಂಬಿ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಾಡುವಂತೆ ಮಾಡುವುದರಲ್ಲಿ ಇವರು ನಿಸ್ಸೀಮರು.

### ದಿ|| ಚಿ.ನಾ. ನಾಗರಾಜ್

ರಂಗಭೂಮಿ, ಚಿತ್ರಕಲೆ ಮತ್ತು ವ್ಯಂಗ್ಯ ಚಿತ್ರ ಕಲಾವಿದರಾಗಿದ್ದ ಶ್ರೀಯುತರು 'ಶಿಲ್ಪಶ್ರೀ', 'ಕಲಾಸೇವಾ ಸಂಘ' ಕಲಾ ತಂಡಗಳು ಪ್ರದರ್ಶಿಸುತ್ತಿದ್ದ ನಾಟಕಗಳಲ್ಲಿ ಅಭಿನಯಿಸಿದ್ದರು. ಕೃಷ್ಣಮೂರ್ತಿ ಕವತಾರ್ ನಿರ್ದೇಶನದ **'ಶಾಂಡಿಲ್ಯ ಪ್ರಹಸನ'**, ನಾಗಮರದ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರಕ್ಕಾಗಿ ಬಿ.ಜಯಶ್ರೀ ನಿರ್ದೇಶಿಸಿದ್ದ **'ಸಂತೆಯಲ್ಲಿ ನಿಂತ ಕಬೀರ'** ನಾಟಕದಲ್ಲಿ ಮನೋಜ್ಞ ಅಭಿನಯ ನೀಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು. ಚಿಕ್ಕಮಗಳೂರು ಜಿಲ್ಲಾ ಕೇಂದ್ರದಿಂದ ಪ್ರಕಟವಾಗುತ್ತಿದ್ದ **'ರಂಗವೇಷ'** ಪತ್ರಿಕೆಯ ಕಲಾವಿದರಾಗಿದ್ದ ಶ್ರೀಯುತರು ತಮ್ಮ ಕೈಬರಹದ ಮೂಲಕ ಹೆಸರುವಾಸಿಯಾಗಿದ್ದರು.

**ಅಂದಾನಪ್ಪ** (ಜ.1941)

ಇವರು ನಗರದ ಹಿರಿಯ ರಂಗಭೂಮಿ ಕಲಾವಿದರು ಹಾಗೂ ನಿರ್ದೇಶಕರು. ವಿವಿಧ ರಂಗ ತಂಡಗಳಲ್ಲಿ ಪಾತ್ರಗಳನ್ನು ಮಾಡುವುದರೊಂದಿಗೆ ನಾಟಕಗಳನ್ನು ನಿರ್ದೇಶಿಸಿದ್ದಾರೆ. ತಮ್ಮ ನೇತೃತ್ವದ ಛಾಯಾ ಕಲಾವಿದರು, ಕೊಂಚಾಡಿ ಮುಕಾಂಬಿಕಾ ಕಲಾತಂಡದ ಮೂಲಕ **'ಅಳಿಯ ದೇವರು', 'ಎಚ್ಚಮ್ಮನಾಯಕ', 'ರಕ್ತಾಕ್ಷಿ', 'ಪಂಚಭೂತ'** ಇತ್ಯಾದಿ ಸುಮಾರು 25 ನಾಟಕಗಳಲ್ಲಿ ಅಭಿನಯಿಸಿದ್ದಾರೆ.

**ಎ.ಸಿ. ಮಹಾವೀರಜೈನ್** (ಜ.1950)

ಅಜ್ಜಂಪುರದ ರಂಗಭೂಮಿಯಲ್ಲಿ ಅಭಿನಯ, ನಿರ್ದೇಶನ, ಸಂಘಟನೆಯ ಮೂಲಕ ಜನಮನ್ನಣೆಗೆ ಪಾತ್ರರಾಗಿರುವ ಶ್ರೀಯುತರು ಬಿ.ವಿ. ಕಾರಂತ, ಫ್ರಿಟ್ಜ್ ಬೆನೆವಿಟ್ಜ್, ಧ್ರುವರಾಜ ದೇಶಪಾಂಡೆ, ಕೆ.ವಿ. ಅಕ್ಷರ, ಕೆ.ಜಿ. ಕೃಷ್ಣಮೂರ್ತಿ, ಚಿದಂಬರರಾವ್ ಜಂಬೆ ಮುಂತಾದ ರಾಜ್ಯದ ಅನೇಕ ನಿರ್ದೇಶಕರ ಜೊತೆ ಕೆಲಸ ನಿರ್ವಹಿಸಿ ರಂಗದ ವಿವಿಧ ಮಜಲುಗಳಲ್ಲಿ ಪರಿಣತರಾಗಿದ್ದಾರೆ. **ಗಾಂಧಿ, ಮುಖವಾಡದವರು, ಕುರುಕ್ಷೇತ್ರ** ಇತ್ಯಾದಿ ನಾಟಕಗಳ ನಿರ್ದೇಶಕರಾಗಿ, **ಸೆಜುವಾನ್ ನಗರದ ಸಾಧ್ವಿ, ಒಂದು ವಾಡೆಯ ಕಥೆ, ಧಾಂ ಧೂಂ ಸುಂಟರಗಾಳಿ, ಟೆಂಪೆಸ್ಟ್, ಚಿದಂಬರ ರಹಸ್ಯ** ಮುಂತಾದ ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ ಇವರಿಗೆ ಸಂದಿದೆ.

**ಎ.ಎಸ್. ಕೃಷ್ಣಮೂರ್ತಿ (ಅಜ್ಜಂಪುರ ಕೃಷ್ಣಮೂರ್ತಿ)** (ಜ.1950)

ರಂಗ ಚಟುವಟಿಕೆಯ ಬಗ್ಗೆ ಮುಂದಿನ ತಲೆಮಾರಿಗೆ ಖಚಿತವಾದ, ವಸ್ತುನಿಷ್ಠವಾದ ಮತ್ತು ಅರ್ಥಪೂರ್ಣವಾದ ಮಾಹಿತಿಗಳನ್ನು ಸಂಗ್ರಹಿಸಿಡುವುದು ಬಹುದೊಡ್ಡ ಕೆಲಸ. ಇಂತಹ ಚಟುವಟಿಕೆಗಳು ಒಂದು ಸಮಾಜದ ರಂಗ ಚಟುವಟಿಕೆಗಳನ್ನು ಅತ್ಯಂತ ಜತನದಿಂದ ಕಾಪಿಟ್ಟುಕೊಳ್ಳುವುದರಲ್ಲಿ ಯಶಸ್ವಿಯಾಗುತ್ತವೆ. ಈ ದಿಸೆಯಲ್ಲಿ ಅಜ್ಜಂಪುರದ ಗೆಳೆಯರ ಬಳಗದ ಎ.ಎಸ್. ಕೃಷ್ಣಮೂರ್ತಿ ಅತ್ಯಂತ್ಯ ಔಚಿತ್ಯಪೂರ್ಣವಾದ ರಂಗ ದಾಖಲಾತಿಗಳ ಸಂಗ್ರಹಕ್ಕೆ ಅಪೂರ್ವ ಕೊಡುಗೆ ನೀಡಿದ್ದಾರೆ. ನಾಟಕ ಪ್ರದರ್ಶನದ ಬಗ್ಗೆ ದಿನಪತ್ರಿಕೆ, ರಾಜ್ಯ ಪತ್ರಿಕೆಗಳಲ್ಲಿ ಪ್ರಕಟಗೊಂಡ ಲೇಖನ, ವಿಮರ್ಶೆ, ಸುದ್ದಿ, ಛಾಯಾಚಿತ್ರ, ವಿಶ್ಲೇಷಣೆ ಮುಂತಾದ ಅಂಶಗಳನ್ನೊಳಗೊಂಡ ಪತ್ರಿಕೆಗಳನ್ನು ಸುಮಾರು 4 ದಶಕಗಳಿಂದ ಸಂಗ್ರಹಿಸುವುದರ ಮೂಲಕ ಕೃಷ್ಣಮೂರ್ತಿ ಅತ್ಯದ್ಭುತ ಸಾಧನೆ ಮಾಡಿದ್ದಾರೆ. ಈ ಸಂಗ್ರಹದಲ್ಲಿ ಬೆಂಗಳೂರಿನ ಮಾರ್ಕ್ಸವಾದವರ ಕುಟುಂಬವೇ ನಾಟಕ ಕಂಪನಿಯಂತಿರುವ ವಿಚಾರದಿಂದ ಹಿಡಿದು ಜರ್ಮನಿಯ ಪೀಟರ್ ಕುಕ್‌ನವರೆಗೆ ಮಾಹಿತಿ ದೊರಕುತ್ತದೆ. ಷೇಕ್ಸ್‌ಪಿಯರ್, ಗಿರೀಶ್ ಕಾರ್ನಾಡ್, ಮಾಸ್ಟರ್ ಹಿರಣ್ಣಯ್ಯ, ನಿಂಗವ್ವ ಕೌಜಲಗಿ, ಅ.ನ. ಸುಬ್ಬರಾವ್, ಏಣಗಿ ಬಾಳಪ್ಪ, ಬೆಕ್ಟ್, ಬಿ.ವಿ.ಕಾರಂತ ಮುಂತಾದವರ ವ್ಯಕ್ತಿ ವಿಚಾರಗಳಿಂದ ಹಿಡಿದು ಅವರ ಸಾಧನೆಗಳ ಮೇಲೆ ಬೆಳಕು ಚೆಲ್ಲುವ ದೊಡ್ಡ ಸಾಧನೆ ಈ ಸಂಗ್ರಹದಲ್ಲಿದೆ. ಇವುಗಳೆಲ್ಲವನ್ನೂ ಕೂಡ ಲ್ಯಾಮಿನೇಷನ್ ಮಾಡಿಸಿ,

500ಕ್ಕೂ ಹೆಚ್ಚು ವಿಷಯಗಳಲ್ಲಿ 200ಕ್ಕೂ ಹೆಚ್ಚು ಕಡತಗಳಲ್ಲಿ ಸಂಗ್ರಹಿಸಲಾಗಿದೆ. ಇದು ಎ.ಎಸ್.ಕೃಷ್ಣಮೂರ್ತಿಯವರ ನಿರಂತರ ತಪಸ್ಸಿನ ಫಲ. ಈ ಸಂಗ್ರಹ ಪ್ರತಿಯೊಬ್ಬ ರಂಗಕರ್ಮಿಯೂ ಅಧ್ಯಯನ ಮಾಡಬೇಕಾಗಿದೆ.

ರಾಷ್ಟ್ರದ ಹೆಸರಾಂತ ರಂಗ ನಿರ್ದೇಶಕರಾದ ಎಂ.ಎಸ್. ಸತ್ಯು, ಬಿ.ವಿ. ಕಾರಂತರು ಕೃಷ್ಣಮೂರ್ತಿಯವರ ರಂಗ ಮಾಹಿತಿ ಸಂಗ್ರಹದ ಬಗ್ಗೆ ಮೆಚ್ಚುಗೆಯ ನುಡಿಗಳನ್ನಾಡಿರುವುದನ್ನು ನಾವಿಂದು ಸ್ಮರಿಸಿಕೊಳ್ಳಬೇಕಿದೆ. ಸಂಗ್ರಹದ ಜೊತೆಗೆ ಗೊ.ರು.ಚ. ರಚನೆಯ **'ಅಯ್ಯನ ಕೆರೆ'** ನಾಟಕವನ್ನು ಇವರು ನಿರ್ದೇಶಿಸಿದ್ದಾರೆ. ಎ.ಎಸ್. ಕೃಷ್ಣಮೂರ್ತಿಯವರ ರಂಗ ದಾಖಲಾತಿ ಪ್ರದರ್ಶನ ಬಿಜಾಪುರ, ಹುನಗುಂದ, ಚಿಕ್ಕಮಗಳೂರು, ಬೆಂಗಳೂರು ಮುಂತಾದ ಅನೇಕ ಸ್ಥಳಗಳಲ್ಲಿ ಪ್ರದರ್ಶನ ಗೊಂಡಿವೆ.

### ಎ.ಸಿ. ಚಂದ್ರಪ್ಪ

ಅಜ್ಜಂಪುರದ ಸಮಗ್ರ ರಂಗ ಚಟುವಟಿಕೆಗಳ ಕೇಂದ್ರ ಬಿಂದುವಾಗಿರುವ ಶ್ರೀಯುತರು ಅಚ್ಚುಕಟ್ಟುತನ, ಉತ್ತಮ ಸಂಘಟನೆಗೆ ಹೆಸರುವಾಸಿಯಾದವರು. ಗೆಳೆಯರ ಬಳಗ ತಂಡದ ಸ್ಥಾಪಕರಲ್ಲಿ ಒಬ್ಬರಾಗಿರುವ ಚಂದ್ರಪ್ಪನವರು ರಂಗ ಶಿಬಿರ ಹಾಗೂ ಅನೇಕ ನಾಟಕೋತ್ಸವಗಳನ್ನು ಆಯೋಜಿಸಿದ್ದಾರೆ.

### ಎ.ಪಿ. ನಾಗರಾಜಶೆಟ್ಟಿ

ಅಜ್ಜಂಪುರದ ರಂಗಭೂಮಿ ಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ ಶ್ರೀಯುತರು ಸಾಹಿತ್ಯ, ಸಂಗೀತ, ಅಭಿನಯ ಮತ್ತು ನೇಪಥ್ಯದ ಕೆಲಸ ಕಾರ್ಯಗಳಲ್ಲಿ ಶ್ರದ್ಧೆ ಮತ್ತು ಉತ್ಸಾಹದಿಂದ ಭಾಗವಹಿಸುತ್ತಿದ್ದರು.

### ಬಿ.ಎನ್. ಜ್ವಾಲನಪ್ಪ (ಜ.1956)

ನರಸಿಂಹರಾಜಪುರ ತಾಲ್ಲೂಕಿನದವರಾದ ಬಿ.ಎನ್.ಜ್ವಾಲನಪ್ಪ ತಂದೆಯವರ ಮಾರ್ಗದರ್ಶನದಲ್ಲಿ ರಂಗಭೂಮಿಯಲ್ಲಿ ಅಭಿರುಚಿಯನ್ನು ಬೆಳೆಸಿಕೊಂಡು **ಸಂಸಾರ ನೌಕ, ಅಳಿಯ ದೇವರು, ರಂಗಣ್ಣನ ರಾದ್ಧಾಂತ, ಪಜೀತಿ, ಆಹುತಿ, ತ್ಯಾಗಿ, ಹಿರಣ್ಮಯೇಣ ಪಾತ್ರೇಣ, ಸಾಹೇಬರು ಬರುತ್ತಾರೆ, ಮಾರಾನಾಯಕ, ಜಯಸಿದ್ದ ನಾಯಕ** ಇತ್ಯಾದಿ 25 ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಇವರ ನಿರ್ದೇಶನದ **'ಪತ್ರೆ ಸಂಗಪ್ಪನ ಕೊಲೆ'** ನಾಟಕ ರಾಜ್ಯ ಮಟ್ಟದ ಯುವಜನ ಮೇಳದ ಅಂಗವಾಗಿ ಮೈಸೂರು, ತುಮಕೂರು, ಬೆಂಗಳೂರಿನಲ್ಲಿ ಪ್ರದರ್ಶನ ಗೊಂಡು ಪ್ರಥಮ ಬಹುಮಾನಗಳಿಸಿತ್ತು. ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಕಾಗಿನೆಲ್ಲಿಯಲ್ಲಿ ನಡೆದ ಪುಟ್ಟಣ ಕಣಗಾಲ್ ಸ್ಮಾರಕ ರಾಜ್ಯ ಮಟ್ಟದ ನಾಟಕ ಸ್ಪರ್ಧೆಯಲ್ಲಿ **'ಪತ್ರೆ ಸಂಗಪ್ಪನ ಕೊಸೆ'** ನಾಟಕದ ನಿರ್ದೇಶಕನಾಗಿ **'ಶ್ರೇಷ್ಠ ನಿರ್ದೇಶಕ'** ಪ್ರಶಸ್ತಿಗೆ ಭಾಜನರಾಗಿದ್ದಾರೆ. ಎನ್.ಎಸ್.ಡಿ.ಯ ಸುಮತಿ, ಕೃಷ್ಣಮೂರ್ತಿ ಕವತಾರ್, ಬಿ.ಜಯಶ್ರೀ,

ಶಶಿಧರ ಬಾರಿಘಾಟ್ ಮುಂತಾದ ಹೆಸರಾಂತ ನಿರ್ದೇಶಕರ ಜೊತೆ ಕೆಲಸ ಮಾಡಿದ್ದಾರೆ. **'ದಂಗೆಯ ಮುಂಚಿನ ದಿನಗಳು', 'ಸತ್ತವರ ನೆರಳು'** ಇವರು ನಿರ್ದೇಶಿಸಿರುವ ಯಶಸ್ವಿ ನಾಟಕಗಳು. **'ರಂಗವೇಷ'** ಕೈಬರಹದ ಪತ್ರಿಕೆ ಸಂಪಾದಿಸಿ; ಸೂತ್ರಧಾರ, ರಂಗತೋರಣ, ಈ ಮಾಸ ನಾಟಕ ಪತ್ರಿಕೆ, ಸಂಯುಕ್ತ ಕರ್ನಾಟಕ, ವಿಜಯಕರ್ನಾಟಕ ಮತ್ತು ಜನಮಿತ್ರ ಪತ್ರಿಕೆಗಳಲ್ಲಿ ನಾಟಕದ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಬರೆದಿದ್ದಾರೆ.

## ಡಿ.ಎಂ. ಮಂಜುನಾಥ ಸ್ವಾಮಿ

ಶ್ರೀಯುತರು 1990ರಿಂದ 2002ರವರೆಗೆ 12 ವರ್ಷಗಳ ಕಾಲ ಕರ್ನಾಟಕ ರಾಜ್ಯದಾದ್ಯಂತ ಸಾಮಾಜಿಕ ಹೋರಾಟಗಳಲ್ಲಿ ತೊಡಗಿಸಿಕೊಂಡು 2500 ಕ್ಕೂ ಅಧಿಕ ಬೀದಿ ನಾಟಕಗಳನ್ನು ನಿರ್ದೇಶಿಸಿ, ಅಭಿನಯಿಸಿದ್ದಾರೆ. ಉತ್ತರ ಭಾರತದ ರಾಜಸ್ಥಾನ, ಪಶ್ಚಿಮ ಬಂಗಾಳ, ದೆಹಲಿ, ದಕ್ಷಿಣ ಭಾರತದ ಕೇರಳ, ತಮಿಳುನಾಡು, ಮಹಾರಾಷ್ಟ್ರಗಳಲ್ಲಿ ಬೀದಿ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಜಿಲ್ಲಾ ಸಾಕ್ಷರತಾ ಸಮಿತಿಯ ಆಶ್ರಯದಲ್ಲಿ ಕಾರಾಗೃಹದ ಖೈದಿಗಳಿಗೆ ಬೀದಿ ನಾಟಕಗಳ ಕಾರ್ಯಗಾರ ನಡೆಸಿದ್ದಾರೆ. ಆಕಾಶವಾಣಿ, ದೂರದರ್ಶನದಲ್ಲೂ ಪ್ರದರ್ಶನಗೊಂಡ ನಾಟಕಗಳಲ್ಲಿ ತಮ್ಮ ಪ್ರತಿಭೆಯನ್ನು ಅಭಿವ್ಯಕ್ತಿಸಿದ್ದಾರೆ. ಭದ್ರಾ ಮೇಲ್ದಂಡೆ ಯೋಜನೆ ಅನುಷ್ಠಾನಕ್ಕೆ ಒತ್ತಾಯಿಸಿ ನಿರಂತರವಾಗಿ 60 ದಿನಗಳ ಕಾಲ ರಾತ್ರಿಯಲ್ಲಿ ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಜಿಲ್ಲೆಯಲ್ಲಿ ಬೀದಿ ನಾಟಕ ಪ್ರದರ್ಶಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಭಾರತೀಯ ಜನಕಲಾ ಸಮಿತಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದಾರೆ.

## ರವೀಶ್ ಕ್ಯಾತನಬೀಡು

ನಿರಂತರವಾಗಿ ಜನಪರ ಹೋರಾಟಗಳಲ್ಲಿ ಸಕ್ರೀಯರಾಗಿರುವ ರವೀಶ್ ತಮ್ಮ ಹುಟ್ಟೂರು ಚಿಕ್ಕಮಗಳೂರು ತಾಲ್ಲೂಕಿನ ಕ್ಯಾತನಬೀಡಿನಲ್ಲಿ 'ಕ್ಯಾತನಬೀಡು ಪ್ರತಿಷ್ಠಾನ' ರಂಗ ಸಂಸ್ಥೆ ಸ್ಥಾಪಿಸಿ ಆ ಮೂಲಕ ನಾಟಕ ಪ್ರದರ್ಶನ, ವಿಚಾರ ಸಂಕಿರಣ, ಸಂವಾದ ಮತ್ತು ಕಾರ್ಯಗಾರ ನಡೆಸಿರುವ ಕೀರ್ತಿ ಇವರಿಗೆ ಸಲ್ಲುತ್ತದೆ. ವಿದ್ಯಾಭ್ಯಾಸದ ಆರಂಭದ ದಿನಗಳಿಂದಲೂ ರಂಗ ಚಟುವಟಿಕೆಯಲ್ಲಿ ಆಸಕ್ತಿಯನ್ನು ಮೈಗೂಡಿಸಿಕೊಂಡು ಸುಮಾರು 30 ನಾಟಕಗಳಲ್ಲಿ ಅಭಿನಯಿಸಿದ್ದಾರೆ. ನಾಡಿನ ಹೆಸರಾಂತ ನಿರ್ದೇಶಕರ ರಂಗ ತಾಲೀಮಿನಲ್ಲಿ ಪಳಗಿ ರಂಗಭೂಮಿಗೆ ವೈವಿಧ್ಯಮಯ ಕೊಡುಗೆ ನೀಡಿದ್ದಾರೆ.

## ಕೆ.ಎನ್. ನವನೀತ (ಜ.1952)

**ತ್ಯಾಗಿ, ರತ್ನ ಮಾಂಗಲ್ಯ, ದೀಪಾವಳಿ** ಅಥವಾ **ಹೆಣ್ಣಿನ ಕಣ್ಣೀರು, ಬಿಚ್ಚುಗತ್ತಿ, ಮುದುಕನ ಮದುವೆ, ಕಿತ್ತೂರು ರಾಣಿ ಚೆನ್ನಮ್ಮ, ಕಂಬನಿ, ಉಂಡಾಡಿ ಗುಂಡ** ಇತ್ಯಾದಿ 50 ನಾಟಕಗಳಲ್ಲಿ ಅಭಿನಯಿಸಿರುವುದರ ಜೊತೆಗೆ ಪ್ರೇಮ ಬಂಧನ, ಆಹುತಿ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಇವರು ಉತ್ತಮ ಹಾರ್ಮೋನಿಯಂ ವಾದಕರಾಗಿದ್ದಾರೆ.

**ಯೋವನ್ ಜಾನ್** (ಜ.1959)

ಚಿಕ್ಕಮಗಳೂರಿನ ಕಲಾಕೂಟದಲ್ಲಿ ಪ್ರಮುಖ ನಟರಾಗಿ ಗುರುತಿಸಿಕೊಂಡಿದ್ದ ಜಾನ್‌ರವರು **ದಾರಿ ಯಾವುದಯ್ಯಾ, ಕುದುರೆ ಬಂತು ಕುದುರೆ, ಸುಳಿಯಲ್ಲಿ ಸಿಕ್ಕವರು, ಚೆಂದುಳ್ಳಿ ಚೆಲುವೆ** ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸುರೇಶ್ ದೀಕ್ಷಿತ್ ನಿರ್ದೇಶನದ **ಥಫನ್, ಕತ್ತಲೆ ಬೆಳಕು** ನಾಟಕಗಳಲ್ಲಿ ಅಭಿನಯದ ಜೊತೆಗೆ ರಂಗ ಸಜ್ಜಿಕೆ ಮತ್ತು ಉತ್ತಮ ಬೆಳಕು ಸಂಯೋಜನೆಯಲ್ಲಿ ಅನುಭವಿಗಳಾಗಿದ್ದಾರೆ.

**ಜಗದೀಶ ಆರ್. ಜಾನಿ** (ಜ.1981)

2013ರಲ್ಲಿ ದೆಹಲಿ ಎನ್.ಎಸ್.ಡಿ. ಯಿಂದ ಪದವಿ ಪಡದಿರುವ ಶ್ರೀಯುತರು 2006ರಲ್ಲಿ ರಂಗ ಸಂಗೀತಕ್ಕಾಗಿ ಪ್ರಶಸ್ತಿ ಪಡೆಯುವುದರ ಜೊತೆಗೆ ಮತ್ತು 2015ರಲ್ಲಿ ಸಿ.ಜಿ.ಕೆ. ರಂಗ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕೆ.ವಿ. ಅಕ್ಷರ ನಿರ್ದೇಶನದ ವೆನಿಸ್ಸಿನ ವರ್ತಕ, ಸಂಜಯ ಉಪಾಧ್ಯಾಯರ ಆಕಾಶಬೇರಿಯಲ್ಲಿ ಅಭಿನಯಿಸಿರುವ ಅನುಭವವಿದೆ. ಎನ್.ಎಸ್.ಡಿ.ಯಲ್ಲಿ **ರೋಬಿನ್‌ದಾಸ್, ರಾಜೇಶ್ ಬೆಹ್ಲ, ದೀಪಕ್‌ಕುಮಾರ್, ಎಸ್. ತ್ಯಾಗರಾಜನ್, ಕ್ಲಾಡಿಯಾ, ಪೀಟರ್‌ಕುಕ್, ನೀಲ್ ಫ್ರೆಜರ್** ಮುಂತಾದವರ ಮಾರ್ಗದರ್ಶನದಲ್ಲಿ ರಂಗಭೂಮಿಯ ಬಗ್ಗೆ ಆಳವಾದ ಅಧ್ಯಯನ ಮಾಡಿರುವ ಇವರು ರಂಗಸಜ್ಜಿಕೆ, ಬೆಳಕು ಸಂಯೋಜನೆಯಲ್ಲೂ ಪರಿಣತಿಯನ್ನು ಹೊಂದಿದ್ದಾರೆ. **ನಾಯಿ ಮರಿ, ಹಂಚಿನ ಮನೆಯ ಪರಸಪ್ಪ, ಗೊಂಬೆ ರಾವಣ, ವಿಗಡವಿಕ್ರಮರಾಯ, ಧರಣಿಮಂಡಲ** ಇತ್ಯಾದಿ ನಾಟಕಗಳನ್ನು ನಿರ್ದೇಶಿಸಿದ್ದಾರೆ. 2012 ರಲ್ಲಿ ಚೈನಾದ ಬೀಜಿಂಗ್‌ನಲ್ಲಿ ನಡೆದ 2ನೇ ಏಷ್ಯನ್ ಥಿಯೇಟರ್ ಫೆಸ್ಟಿವಲ್ ಮತ್ತು 2014ರಲ್ಲಿ ಪಾಕಿಸ್ತಾನದ ಕರಾಚಿಯಲ್ಲಿ ನಡೆದ ಅಂತರರಾಷ್ಟ್ರೀಯ ನಾಟಕೋತ್ಸವದಲ್ಲಿ ಭಾಗವಹಿಸಿದ್ದಾರೆ.

**ಕೃಷ್ಣೇಗೌಡ** (ಜ.1955)

ನಾಲ್ಕು ದಶಕಗಳಿಂದ ರಂಗಭೂಮಿಯೊಂದಿಗೆ ನಂಟು ಇಟ್ಟುಕೊಂಡಿರುವ ಶ್ರೀಯುತರು ಅಭಿನಯ, ನಿರ್ದೇಶನ ಮತ್ತು ಸಂಗೀತ ಸಂಯೋಜನೆಗೆ ಹೆಸರು ವಾಸಿಯಾಗಿದ್ದಾರೆ. **ಸಂಪೂರ್ಣ ರಾಮಾಯಣ, ರಾಜವಿಕ್ರಮ, ರಾಜ ಸತ್ಯವ್ರತ, ಕುರುಕ್ಷೇತ್ರ, ಪಾಂಡು ವಿಜಯ, ಸತ್ಯ ಮಹಂದಾತ** ಇತ್ಯಾದಿ 150 ನಾಟಕಗಳಲ್ಲಿ ಅಭಿನಯಿಸಿ ಅನಕ್ಷರಸ್ಥರಲ್ಲಿ ರಂಗಾಸಕ್ತಿಯನ್ನು ಬೆಳೆಸುವುದರಲ್ಲಿ ವಿಶೇಷ ಕಾಳಜಿಯನ್ನು ವಹಿಸಿದ್ದಾರೆ.

**ಎಂ. ವಿನೀತ್‌ಕುಮಾರ್** (ಜ.1991)

ಹೆಗ್ಗೋಡಿನ ನೀನಾಸಂನಲ್ಲಿ ನಾಟಕದಲ್ಲಿ ಡಿಪ್ಲೋಮೋ ಮಾಡಿರುವ ವಿನೀತ್ ಕುಮಾರ್ 2 ವರ್ಷ ನೀನಾಸಂ **ತಿರುಗಾಟ, ಹೆಗ್ಗೋಡಿನ ಜನಮನದಾಟ, ಧಾರವಾಡದ ಆಟ್ಟಮಾಟ, ಸಮೂಹ ಸ್ಪಂದನ, ಜನಪದಕ್ಕಾಗಿ ನಾವು, ಪಾಂಚಜನ್ಯ,** ನಟರಂಗದ ಆಶ್ರಯದಲ್ಲಿ ಈವರೆವಿಗೂ ನೂರಾರು ನಾಟಕಗಳಲ್ಲಿ ಅಭಿನಯಿಸಿ ದ್ದಾರೆ. ಧಾರವಾಡ, ಬಾಗಲಕೋಟೆ, ಲೋಕಾಪುರ,

ಮಂಚಿಕೇರಿ, ಹುಬ್ಬಳ್ಳಿ, ಬೆಂಗಳೂರು, ಹೆಗ್ಗೋಡು, ಜಮಖಂಡಿಗಳಲ್ಲಿ ಮಕ್ಕಳ ರಂಗ ತರಬೇತಿ ಶಿಬಿರಗಳನ್ನು ನಡೆಸಿಕೊಟ್ಟಿರುತ್ತಾರೆ. 2009 ಮತ್ತು 2010ರಲ್ಲಿ ನಾಟಕ ಅಕಾಡೆಮಿಯಿಂದ ಇವರಿಗೆ ವಿದ್ಯಾರ್ಥಿ ವೇತನ ಲಭಿಸಿದೆ. **ಅಜ್ಜಿ ಕಥೆ, ಮಧ್ಯಮ ವ್ಯಾಯೋಗ, ಏಕಲವ್ಯ, ನಾನು ನನ್ನ ಅವ್ವ, ಧನ್ವಂತರಿ** ಚಿಕಿತ್ಸೆ ನಾಟಕಗಳ ನಿರ್ದೇಶಿಸಿದ್ದಾರೆ.

## ಎಂ.ಪಿ. ಜಯರಾಂ

ಅಪ್ಪಟ ಗ್ರಾಮೀಣ ಪ್ರತಿಭೆಯಾಗಿರುವ ಇವರು **ಮರುವಿವಾಹ, ದಡ್ಡ ನನ್ನ ಮಕ್ಕಳು, ಪ್ರಾಕ್ಟೀಸ್‌ಲ್ಲಿ ಪರದಾಟ, ಇದು ನಮ್ಮೂರಾ, ನಾರದ ವಿನೋದ, ತೀರದ ಬಯಕೆ, ಬಾಣ ಸುರಸಂಹಾರ, ಗೋವಿಂದ ಗೋವಿಂದ, ಹೀಗೂ ಡೌಟ್ ಉಂಟೇ, ದೇವತೆಯಾದ ಹೆಣ್ಣು** ಮುಂತಾದ ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಬುದ್ಧಛಾಯೆ, ಏಕಾಂಗಿ ನಾಟಕಗಳಲ್ಲಿನ ಅಭಿನಯಕ್ಕೆ ವಿಶೇಶ ಬಹುಮಾನ ಪಡೆದುಕೊಂಡಿದ್ದಾರೆ.

## ಬಿಸಲೇಹಳ್ಳಿ ಸೋಮಶೇಖರ್ (ಜ.1953)

ವೃತ್ತಿಯಲ್ಲಿ ಶಿಕ್ಷಕರಾಗಿದ್ದರೂ ಪ್ರವೃತ್ತಿಯಲ್ಲಿ ರಂಗಾಸಕ್ತರಾಗಿ ಬೆಂಗಳೂರಿನ ಛಾಯಾ ಕಲಾ ಸಂಸ್ಥೆಯಲ್ಲಿ 9 ತಿಂಗಳು ರಂಗ ಶಿಕ್ಷಣ ಪಡೆದು ಕಾಲಕ್ರಮೇಣ ನಟನೆ, ನಿರ್ದೇಶನದಲ್ಲಿ ತೊಡಗಿಸಿಕೊಂಡವರು. ತಮ್ಮ ಶಿಕ್ಷಕ ವೃತ್ತಿಯ ಅವಧಿಯಲ್ಲಿ ಅನೇಕ ಶಾಲಾ ಪಠ್ಯವನ್ನು ರಂಗಕ್ಕೆ ಅಳವಡಿಸಿ ವಿದ್ಯಾರ್ಥಿಗಳಿಗೆ ಪರಿಣಾಮಕಾರಿ ಶಿಕ್ಷಣ ನೀಡುತ್ತಿದ್ದರು. 1975ರಲ್ಲಿ ನಡೆದ ರಾಜ್ಯ ಮಟ್ಟದ ಏಕಪಾತ್ರಾಭಿನಯ ಸ್ಪರ್ಧೆಯಲ್ಲಿ ಚಿನ್ನದ ಪದಕ ವಿಜೇತರಾದ ಶ್ರೀಯುತರು ಚಿಕ್ಕಮಗಳೂರಿನ ಕಲಾಸೇವಾ ಸಂಘದ ಆಶ್ರಯದಲ್ಲಿ ಪ್ರದರ್ಶನಗೊಂಡ ನಾಟಕ ಸ್ಪರ್ಧೆಯಲ್ಲಿ **'ತೆರೆದ ಹೃದಯ'** ನಾಟಕದಲ್ಲಿನ **'ಮಲ್ಲಿ'** ಪಾತ್ರದ ಅಭಿನಯಕ್ಕೆ ಪ್ರಥಮ ಬಹುಮಾನ ಪಡೆದಿದ್ದಾರೆ.

## ಹುಲಿಕೆರೆ ಪುಲಕೇಶಿ (ಮುಳ್ಳಪ್ಪಶೆಟ್ಟಿ) (ಜ.1958)

ಅಭಿನಯ, ನಿರ್ದೇಶನ, ಗಾಯನ ಮತ್ತು ಸಂಗೀತೋಪಕರಣಗಳ ನುಡಿಸುವಿಕೆಯಲ್ಲಿ ಅಪಾರ ಸಾಧನೆ ಮಾಡಿರುವ ಪುಲಕೇಶಿ ಹಳ್ಳಿಗಾಡಿನ ಪ್ರತಿಭೆ. ಕಲಾಸೇವಾ ಸಂಘ, ಶಿವಸಂಚಾರ ಸಂಘ, ನೀಲಕಂಠೇಶ್ವರ ಸಂಘ, ರಮ್ಯಕಲಾ ತಂಡಗಳ ಮೂಲಕ ಅನೇಕ ನಾಟಕಗಳಲ್ಲಿ ಅಭಿಯಿಸಿದ್ದಾರೆ. **ಸಂಕ್ರಾಂತಿ, ತಲೆದಂಡ, ಜಂಗಮಡೆಡೆ** ಮುಂತಾದ ನಾಟಕಗಳ ಅಭಿನಯ ಇವರಿಗೆ ಕೀರ್ತಿ ತಂದಿದೆ. 2009ರಲ್ಲಿ ನಾಟಕ ಅಕಾಡೆಮಿ ಮತ್ತು ಬಳ್ಳಾರಿ ಜಿಲ್ಲೆ ಹೂವಿನಹಡಗಲಿಯ ರಂಗಭಾರತಿಯ ಸಂಯುಕ್ತಾಶ್ರಯದಲ್ಲಿ ನಡೆದ ನಾಟಕೋತ್ಸವದಲ್ಲಿ ಪುಲಕೇಶಿಯವರಿಗೆ "ಶ್ರೇಷ್ಠ ಹಾಸ್ಯನಟ" ಪುರಸ್ಕಾರ ನೀಡಿ ಗೌರವಿಸಲಾಗಿದೆ. ವಾರ್ತಾ ಇಲಾಖೆಯಿಂದ ಪ್ರದರ್ಶನಗೊಂಡ 'ಕರ್ನಾಟಕ ವೈಭವ ನೃತ್ಯ ರೂಪಕ' ದಲ್ಲಿ ಅಭಿನಯಿಸಿರುವ ಪುಲಕೇಶಿಗೆ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. ಅಶೋಕ್ ಬಾದರದಿನ್ನಿ,

ಸಿ. ಬಸವಲಿಂಗಯ್ಯ ನವರ ಜೊತೆಯಲ್ಲಿ ದುಡಿದಿದ್ದಾರೆ. ಭಾರತ್ ಶಿವಸಂಚಾರ ತಂಡದಲ್ಲಿ ಪ್ರದರ್ಶನಗೊಂಡ ಹಿಂದಿ ನಾಟಕಗಳಲ್ಲಿಯೂ ಸಹ ಅಭಿನಯಿಸಿದ್ದಾರೆ.

**ಬೀಕನಹಳ್ಳಿ ಬಸವರಾಜ್** (ಜ.1954)

ಇವರು ಮೂಲತಃ ಬೀಕನಹಳ್ಳಿ ಗ್ರಾಮದವರು. ಇವರಿಗೆ ಗ್ರಾಮೀಣ ರಂಗ ಭೂಮಿಯ ಬಗ್ಗೆ ಅಪಾರ ಆಸಕ್ತಿ. ಇವರು **ಶನಿಮಹಾತ್ಮೆ, ರಾಮಾಯಣ, ಮಹಾಭಾರತ, ದೇವಿ ಮಹಾತ್ಮೆ** ಸೇರಿದಂತೆ ಹಲವು ಪೌರಾಣಿಕ ನಾಟಕಗಳಲ್ಲಿ ಪಾತ್ರ ನಿರ್ವಹಿಸಿ, ನಾಟಕಗಳನ್ನು ಹೇಳಿಕೊಟ್ಟಿದ್ದಾರೆ. ಇವರು ನಗರದ ಕಲಾಸೇವಾ ಸಂಘದ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿದ್ದಾರೆ.

**ಎಂ.ವೈ. ಮಹಂತೇಶ್** (ಜ.1961)

ವೃತ್ತಿಯಲ್ಲಿ ಟೈಲರ್ ಆಗಿದ್ದರೂ ರಂಗಭೂಮಿಯಲ್ಲಿನ ಇವರ ಶ್ರದ್ಧೆ, ಅಭಿರುಚಿ ಇತರೆ ಕಲಾವಿದರಿಗೆ ಮಾರ್ಗದರ್ಶಕವಾಗಿದೆ.**'ಕಂಬನಿ' 'ಮಹಾರಾತ್ರಿ', 'ಅಕ್ಷರ ಬಾಳಿಗೊಂದು ಉತ್ತರ', '420 ಅಲ್ಲ 840, 'ಅಳಿಯ ದೇವರು', 'ಮುದುಕನ ಪರದಾಟ, ಪ್ರಾಯಶ್ಚಿತ, ಗೋಲ್ಮಾಲ್, ದಾಹ, ಸಂಜೀವಿನಿ** ಸೇರಿದಂತೆ ನವರಸಕಲಾಸೇವಾ ಸಂಘ, ಮಿತ್ರವೃಂದ, ಶಿಲ್ಪಶ್ರೀ, ವೀರಭದ್ರೇಶ್ವರ ಯುವಕ ಸಂಘಗಳ ಆಶ್ರಯದಲ್ಲಿ 300 ನಾಟಕಗಳಲ್ಲಿ ಅಭಿಯಿಸಿದ್ದಾರೆ. **ಅಳಿಯ ದೇವರು** ನಾಟಕದಲ್ಲಿನ ಅಭಿಯನಕ್ಕಾಗಿ ರಾಜ್ಯಮಟ್ಟದ ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ. ರವೀಂದ್ರ ಕಲಾಕ್ಷೇತ್ರ, ಬೆಂಗಳೂರು ಇಲ್ಲಿ ನಡೆದ ನಾಟಕ ಸ್ಪರ್ಧೆಯಲ್ಲಿ ಶ್ರೀ ಕಾಲಭೈರವ ಕಲಾನಿಕೇತನದಿಂದ **ಉತ್ತಮ ನಟನ** ಪ್ರಶಸ್ತಿಗೆ ಪಾತ್ರರಾಗಿದ್ದಾರೆ. **'ಕರ್ನಾಟಕ ವೈಭವ'** ರೂಪಕದಲ್ಲಿ ವಿಶೇಷ ಬಹುಮಾನ, ಶಿವಮೊಗ್ಗದ ರಂಗಾಯಣದಿಂದ ಪ್ರಶಂಸನಾ ಪತ್ರ, ಹಿರಿಯೂರಿನಲ್ಲಿ ನಡೆದ ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ ಅತ್ಯುತ್ತಮ **ಹಾಸ್ಯ ನಟ** ಪ್ರಶಸ್ತಿ ಲಭಿಸಿದೆ.

**ಬಿ.ಎ. ಲೋಕೇಶ್** (ಜ.1961)

ಕಳೆದ 3 ದಶಕಗಳಿಂದ ರಂಗ ಚಟುವಟಿಕೆಯಲ್ಲಿ ಗುರುತಿಸಿಕೊಂಡಿರುವ ಇವರು **ರಾಜಸತ್ಯವ್ರತ, ವಿಕ್ರಮಾರ್ಜುನ ಚರಿತ್ರೆ, ಸತ್ಯ ಮಹಂದಾರ ಚರಿತ್ರೆ, ಸತ್ಯ ಪುರೂರವ, ದೇವಿ ಮಹಾತ್ಮೆ, ಭೂಕೈಲಾಸ, ಕುರುಕ್ಷೇತ್ರ** ಮುಂತಾದ ಪೌರಾಣಿಕ ನಾಟಕಗಳಲ್ಲಿ ಮನೋಜ್ಞ ಅಭಿನಯ ನೀಡಿದ್ದಾರೆ. ಉತ್ತಮ ತಬಲವಾದಕರಾಗಿರುವ ಶ್ರೀಯುತರು ರಂಗದ ಹಿನ್ನೆಲೆಯಲ್ಲೂ ಕಾರ್ಯನಿರ್ವಹಿಸಿ ಪ್ರೇಕ್ಷಕರ ಪ್ರೀತಿಗೆ ಪಾತ್ರರಾಗಿದ್ದಾರೆ.

**ಬಿ.ಆರ್. ಶ್ರೀನಿವಾಸಮೂರ್ತಿ** (ಜ.1959)

ಬಾಲ್ಯದಿಂದಲೂ ರಂಗ ಚಟುವಟಿಕೆಗಳ ಬಗ್ಗೆ ತೀವ್ರ ಆಸಕ್ತಿವುಳ್ಳವರಾಗಿದ್ದು, ಕೆ.ಕೆ. ಮಂಜುನಾಥ್ ಮತ್ತು ಬಸವರಾಜ್‌ರವರ ಮಾರ್ಗದರ್ಶನದಲ್ಲಿ **ರಂಗಣ್ಣನ ರಾದ್ಧಾಂತ, ತ್ಯಾಗಿ, ಟಿಪ್ಪು ಸುಲ್ತಾನ್** ನಾಟಕಗಳಲ್ಲಿ ಅಭಿನಯಿಸಿದ್ದಾರೆ. 1984 ರಿಂದ 91ರವರೆಗೆ ಶಿಲ್ಪಶ್ರೀ ತಂಡದ

ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಈ ಸಮಯದಲ್ಲಿ **ಮಂತ್ರದ ಕಾಯಿ, ದಾರಿ ಯಾವುದಯ್ಯಾ ಮುಂದೆ, ಹರಕೆಯ ಕುರಿ, 36 ಅಲ್ಲ 63** ಮುಂತಾದ ಹಲವು ನಾಟಕಗಳ ಯಶಸ್ವಿ ಪ್ರದರ್ಶನಕ್ಕೆ ಶ್ರಮಿಸಿದ್ದಾರೆ. ರಾಜ್ಯದ ವಿವಿಧೆಡೆ ನಡೆಯುತ್ತಿದ್ದ ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಹತ್ತು ಹಲವು ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

**ಸೈಯದ್ ಷಹಾಬುದ್ಧೀನ್**

ತಮ್ಮ ಪ್ರಾಥಮಿಕ ಶಾಲಾ ದಿನಗಳಲ್ಲಿಯೇ ಚಿಕ್ಕಮಗಳೂರು ನಗರದ ಪೋರ್ಟರ್ ಪೇಟೆ ಶಾಲೆಯ ಶಿಕ್ಷಕ ವೈ.ಪುಟ್ಟಸ್ವಾಮಪ್ಪನವರ ಮಾರ್ಗದರ್ಶನದಲ್ಲಿ ಮುಖಕ್ಕೆ ಬಣ್ಣ ಹಚ್ಚಿದವರು. **'ಪ್ರಚಂಡ ಚಾಣಕ್ಯ', 'ಹಿರಣ್ಯಕಶಿಪು'** ಸೇರಿದಂತೆ ಹಲವು ಏಕಪಾತ್ರಾಭಿನಯಗಳನ್ನು ಮಾಡಿರುವುದಲ್ಲದೇ, ಅನೇಕ ಏಕಾಂತ ನಾಟಕಗಳಲ್ಲೂ ಅಭಿನಯಿಸಿದ್ದಾರೆ.

**ಜಾರ್ಜ್‌ಚಕ್ರವರ್ತಿ** (ಜ.1953)

ಇವರು ನಗರದ ಶಂಕರಪುರ ವಾಸಿ. ನಗರದ ವಿವಿಧ ರಂಗಭೂಮಿಗಳಲ್ಲಿ ಕಾರ್ಯನಿರ್ವಹಿಸಿದ ಖ್ಯಾತಿ ಇದೆ. ತಮ್ಮದೇ ನೇತೃತ್ವದ 'ನವರಸ ಕಲಾವಿದರ ತಂಡ'ದ ಮೂಲಕ ಸಾಮಾಜಿಕ, ರಾಜಕೀಯ ವಿಡಂಬನೆ, ಸಾಮಾಜಿಕ ಪಿಡುಗುಗಳಾದ ಜೂಜು, ವರದಕ್ಷಿಣೆ ಮುಂತಾದ ಅನೇಕ ಸಾಮಾಜಿಕ ಸಮಸ್ಯೆಗಳನ್ನು ಪ್ರತಿನಿಧಿಸುವ ಅನೇಕ ನಾಟಕಗಳಲ್ಲಿ ಹಾಸ್ಯಭರಿತ ಸಂಭಾಷಣೆಗಳ ಮೂಲಕ ನಾಟಕಕ್ಕೆ ಜೀವ ತುಂಬುತ್ತಿದ್ದರು. ಇವರ ಪ್ರಮುಖ ನಾಟಕಗಳು **'ಪ್ರಾಯಶ್ಚಿತ', '420 ಅಲ್ಲ 840'** ಸೇರಿದಂತೆ ಹಲವು ನಾಟಕಗಳನ್ನು ರಚಿಸಿ, ನಿರ್ದೇಶಿಸಿದ್ದಾರೆ. ಇವರ **'ಪ್ರಾಯಶ್ಚಿತ'** ನಾಟಕ ಅತ್ಯಂತ ಯಶಸ್ವಿ ಪ್ರಯೋಗವಾಗಿದ್ದು, ನೂರಾರು ಪ್ರದರ್ಶನಗಳನ್ನು ಕಂಡಿದೆ.

**ಗೋಪಿ**

ಚಿಕ್ಕಮಗಳೂರು ನಗರದ ಸರ್ಕಾರಿ ನೌಕರರಾಗಿರುವ ಇವರು ರಂಗಭೂಮಿ ಯಲ್ಲಿ ಆಸಕ್ತಿಯುಳ್ಳವರಾಗಿದ್ದು, ಚಿಕ್ಕಮಗಳೂರಿನ ಕಲಾಸೇವಾ ಸಂಘದ ಕ್ರಿಯಾಶೀಲ ಸದಸ್ಯರಾಗಿದ್ದಾರೆ.**'ನಾಯಿಕಥೆ', 'ವರಭ್ರಷ್ಟ'** ಸೇರಿದಂತೆ ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

**ಎಚ್.ಎಂ. ನಾಗರಾಜರಾವ್** (ಜ.1969)

ಹಾಡು, ಗೀತರಚನೆ, ಅಭಿನಯ, ಸಾಹಿತ್ಯ, ಸಂಗೀತ ತರಬೇತಿ, ಸಂಘಟನೆ, ನಾಟಕ ರಚನೆ, ಹೀಗೆ ಇವರು ನಾನಾ ಕ್ಷೇತ್ರಗಳಲ್ಲಿ ಕೈಯಾಡಿಸಿದ್ದಾರೆ. ಬಾಲ್ಯದಿಂದಲೂ ನಾಟಕದ ಗೀಳಿರುವ ಇವರು ಈವರೆಗೆ 30ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. **'ಅರಮನೆ ಕಥಾಪ್ರಸಂಗ', 'ಕರ್ಣಭಾರ', 'ಗುಡುಗು ಹೇಳಿದ್ದೇನು', 'ಪ್ರಶ್ನೆ', 'ಹರಿದ್ರಾಕುಂಕುಮ'** ಹೀಗೆ ಹಲವಾರು ನಾಟಕಗಳಲ್ಲಿ ಪುರುಷ, ಸ್ತ್ರೀ ಪಾತ್ರಗಳನ್ನು ನಿರ್ವಹಿಸಿದ್ದಾರೆ. ರಂಗಭೂಮಿ

ಚಟುವಟಿಕೆಯಲ್ಲಿ ಸಕ್ರಿಯರಾಗಿರುವ ಇವರು **ಭಟ್ಟಂಗಿ ಪುರಾಣಂ, ಓಡುವವರು, ಆ ಹುಡುಗ** ನಾಟಕಗಳಿಗೆ ಸಂಗೀತ, ಸಾಹಿತ್ಯ ನೀಡಿದ್ದಾರೆ. ಕಾಳಿಂಗನಾವಡ ಸಾಂಸ್ಕೃತಿಕ ಪ್ರತಿಷ್ಠಾನದ ಪ್ರಮುಖ ಕಲಾವಿದರಾಗಿ, ಗಾಯಕರಾಗಿ ನಾಗರಾಜರಾವ್ ಗುರುತಿಸಿಕೊಂಡಿದ್ದಾರೆ. ರಂಗ ಸಂಘಟನೆಯಲ್ಲೂ ಇವರು ಮುಂದಿದ್ದು, ಪ್ರತಿ ವರ್ಷ ನಾಟಕ ಪ್ರದರ್ಶನಗಳನ್ನು ನೀಡುವ ಇವರು ವೃತ್ತಿಯಲ್ಲಿ ಉಪನ್ಯಾಸಕರು.

## ಎಂ.ಬಿ. ಶಿವಪ್ಪ

ನಾಟಕ ಅಕಾಡೆಮಿ ಪ್ರಶಸ್ತಿ ಮತ್ತು ಜಿಲ್ಲಾ ಕನ್ನಡ ರಾಜ್ಯೋತ್ಸವ ಪುರಸ್ಕೃತರಾದ ಶಿವಪ್ಪನವರಿಗೂ ಚಿಕ್ಕಮಗಳೂರು ರಂಗಭೂಮಿಗೂ ಅವಿನಾಭಾವ ಸಂಬಂಧವಿದೆ. ಸುಮಾರು 40 ವರ್ಷಗಳಿಂದಲೂ ನಗರದಲ್ಲಿ '**ಪ್ರತಿಭಾ ಕಲಾವಿದರು**' ಎಂಬ ತಂಡದ ನೇತೃತ್ವ ವಹಿಸಿ ಸಿನಿಮಾ ನಟ ಎನ್.ಎಸ್.ರಾವ್ ವಿರಚಿತ '**ವಿಷಜ್ವಾಲೆ**', '**ಸಾಮ್ರಾಟ ಅಶೋಕ**', '**ದಿವ್ಯ ದರ್ಶನ**', '**36 ರಲ್ಲ 63**' ಸೇರಿದಂತೆ ಹಲವು ನಾಟಕಗಳನ್ನು ರಾಜ್ಯದ ನಾನಾ ಜಿಲ್ಲೆಗಳಲ್ಲಿ ಪ್ರದರ್ಶಿಸಿ, ಹಲವು ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿ- ಪಾರಿತೋಷಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಶಾಲಾ ಕಾಲೇಜು ಮಕ್ಕಳಿಗೆ ನಾಟಕಗಳನ್ನು ಹೇಳಿಕೊಡುವುದು ಇವರ ಹವ್ಯಾಸ. ಇವರು ಅಸಂಗತ ನಾಟಕದ ಅಭಿನಯಕ್ಕೆ ತಮ್ಮದೇ ಆದ ಶೈಲಿಯಲ್ಲಿ ಜೀವಂತಿಕೆ ತುಂಬುವುದರಲ್ಲಿ ನಿಸ್ಸೀಮರಾಗಿದ್ದರು. ಚಿಕ್ಕಮಗಳೂರಿನ ಅರಿವು ವೇದಿಕೆಗಾಗಿ ಸಮುದಾಯದ ಶಶಿಧರ್ ಬಾರಿಘಾಟ್ ನಿರ್ದೇಶಿಸಿದ್ದ '**ಮಾರನಾಯಕ**' ನಾಟಕ ದಲ್ಲಿನ '**ಭದ್ರನಾಯಕ**'ನ ಪಾತ್ರದಲ್ಲಿನ ಶಿವಪ್ಪನವರ ಅಭಿನಯವನ್ನು ರಂಗಾಸಕ್ತರು ಇಂದಿಗೂ ಸ್ಮರಿಸಿಕೊಳ್ಳುತ್ತಾರೆ.

## ರಾಮದಾಸ ಪ್ರಭು (ಜ.1953)

ರಂಗಶ್ರೀ ಅಸ್ತಿತ್ವಕ್ಕೆ ಬಂದ ಆರಂಭದ ದಿನಗಳಿಂದಲೂ ರಂಗ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿ ಗುರುತಿಸಿಕೊಂಡಿರುವ ರಾಮದಾಸ ಪ್ರಭು '**ಅಂತಿಗೊನೆ, 'ಜೂಲಿಯಸ್ ಸೀಜರ್**', '**ಏವಂ ಇಂದ್ರಜಿತ್**', '**ಸದ್ದು ವಿಚಾರಣೆ ನಡೆಯುತ್ತಿದೆ**', '**ಸಾಹೇಬರು ಬರುತ್ತಿದಾರೆ**' ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಜೂಲಿಯಸ್ ಸೀಜರ್ ನಾಟಕದ '**ಕ್ಯಾಸಿಯಸ್**' ಪಾತ್ರ ಇವರಿಗೆ ಹೆಸರು ತಂದುಕೊಟ್ಟಿದೆ. ಕಲ್ಕತ್ತಾದ ಬಾದಲ್ ಸರ್ಕಾರ್ ರಂಗಶ್ರೀಗಾಗಿ ನಡೆಸಿದ್ದ 30 ದಿನಗಳ ರಂಗತರಬೇತಿ ಶಿಬಿರಗಳಲ್ಲಿ ಭಾಗವಹಿಸಿದ್ದರು.

## ಬಿ. ರವಿಕುಮಾರ್ (ಜ.1974)

ಜಿಲ್ಲೆಯ ರಂಗಭೂಮಿಯ ಬಗ್ಗೆ ಅಪಾರ ಒಲವನ್ನು ಹೊಂದಿ, ರಂಗಭೂಮಿಯ ಬೆಳವಣಿಗೆಗಾಗಿ ತಮ್ಮ ಕೈಲಾದ ಸೇವೆ ಸಲ್ಲಿಸುತ್ತಿರುವವರು. ಬಿ. ರವಿಕುಮಾರ್. ನಿವೃತ್ತ ಶಿಕ್ಷಕ ವೈ.ಪುಟ್ಟಸ್ವಾಮಪ್ಪನವರ ತರಬೇತಿಯಲ್ಲಿ ರಂಗಾಸಕ್ತಿ ಮೂಡಿಸಿಕೊಂಡು, ಆರಂಭದಲ್ಲಿ ಏಕಪಾತ್ರಾಭಿನಯಗಳನ್ನು ಸಾದರಪಡಿಸುವುದರ ಮೂಲಕ ರಂಗಭೂಮಿಯ ಬಗ್ಗೆ ಒಲವನ್ನು

ಬೆಳೆಸಿಕೊಂಡರು. ಸುಮಾರು 15 ಬಾರಿ ತಾಲ್ಲೂಕು, ಜಿಲ್ಲೆ, ರಾಜ್ಯ, ರಾಷ್ಟ್ರ ಮಟ್ಟದ ಯುವಜನೋತ್ಸವದಲ್ಲಿ ತಮ್ಮ **'ರಮಿ ಅಭಿನಯ ತಂಡ'**ದೊಂದಿಗೆ ಹಿಂದಿ ನಾಟಕಗಳನ್ನು ರಚಿಸಿ, ನಿರ್ದೇಶಿಸಿ, ಭಾಗವಹಿಸಿ ಬಹುಮಾನಗಳನ್ನು ಗಳಿಸಿಕೊಂಡಿದ್ದಾರೆ. ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ತಾವೇ ನಾಟಕ ರಚಿಸಿ, ನಿರ್ದೇಶಿಸಿ, ರಂಗ ಪರಿಕರಗಳನ್ನು ಸಿದ್ಧಪಡಿಸುವುದರೊಂದಿಗೆ ವಸ್ತ್ರಾಲಂಕಾರ ಹಾಗೂ ಪ್ರಸಾಧನವನ್ನು ತಾವೇ ಮಾಡಿ ಹಲವು ನಾಟಕಗಳನ್ನು ಪ್ರಸ್ತುತಪಡಿಸಿದ್ದಾರೆ. **ಅಶೋಕ, ಈಡಿಪಸ್, ಬೆಳಕಿನೆಡೆಗೆ, ನಗ್ನ ಸತ್ಯ, ಅಮ್ಮ, ಗಜಗಾಮಿನಿ** (ಹಿಂದಿ ಮತ್ತು ಕನ್ನಡ), **ಮೃಗನಯನೆ** ಮುಂತಾದ 50 ನಾಟಕಗಳನ್ನು ಯಶಸ್ವಿಯಾಗಿ ನಿರ್ದೇಶಿಸಿದ್ದಾರೆ. ಹವ್ಯಾಸಿ ರಂಗಭೂಮಿ, ಬೀದಿ ನಾಟಕ, ಬಯಲಾಟ, ದೊಡ್ಡಾಟಗಳನ್ನು ತಮ್ಮಲ್ಲಿ ಬರುವ ಮಕ್ಕಳಿಗೆ ಹೇಳಿಕೊಟ್ಟು ವಿದ್ಯಾರ್ಥಿಗಳಿಗೆ ಕಲೆಯ ಬಗ್ಗೆ ಜಾಗೃತಿ ಮೂಡಿಸಲು ನಿರಂತರವಾಗಿ ಶ್ರಮಿಸಿದ್ದಾರೆ.

### **ಟಿ.ಆರ್. ನಾಗರಾಜ್** (ಜ.1945)

ಟಿ.ಆರ್. ನಾಗರಾಜ್ ಚಿಕ್ಕಮಗಳೂರಿನ ಅತ್ಯಂತ ಪ್ರಬುದ್ಧ ಕಲಾವಿದರಾಗಿದ್ದು, 1985ರಲ್ಲಿ ತಾವೇ ಸ್ಥಾಪಿಸಿದ ಕಲಾಕೂಟ ಸಂಸ್ಥೆಯ ಆಶ್ರಯದಲ್ಲಿ **'ದಾರಿ ಯಾವುದಯ್ಯ ಮುಂದೆ', 'ಕುದುರೆ ಬಂತು ಕುದುರೆ'** ನಾಟಕಗಳನ್ನು ಆಯೋಜಿಸಿದ್ದರು. 2000ರಲ್ಲಿ ಚಿಕ್ಕಮಗಳೂರಿನ ಕಲಾವಿದರೊಂದಿಗೆ ಕೈಜೋಡಿಸಿ **'ಚೆನಕ' ಎಂಬ ಹೊಸ ತಂಡ ಕಟ್ಟಿ 'ನಮ್ಮೊಳಗೊಬ್ಬ ನಾಜೂಕಯ್ಯ', 'ಅಕ್ಷರ ಬಾಳಿಗೊಂದು ಉತ್ತರ'** ನಾಟಕಗಳನ್ನು ಪ್ರದರ್ಶಿಸಿದ್ದಾರೆ. **ಕುರಿ ದೊಡ್ಡಿ ಕುರುಕ್ಷೇತ್ರ, ದಾರಿ ಯಾವುದಯ್ಯ ಮುಂದೆ** ನಾಟಕಗಳಿಗೆ ಉತ್ತಮ ನಟಪ್ರಶಸ್ತಿ, ಜಿಲ್ಲಾ ಪ್ರಶಸ್ತಿಗೆ ಭಾಜನರಾಗಿರುವ ನಾಗರಾಜ್ ರಂಗಭೂಮಿಯ ಎಲ್ಲಾ ವಿಭಾಗಗಳಲ್ಲೂ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಿದ್ದಾರೆ.

### **ರಮೇಶ್ ಬಂಗಾರ್**

ಚಿಕ್ಕಮಗಳೂರು ನಗರದ 'ರಮಿ ಕಲಾವಿದರು' ಬಳಗದ ಕ್ರಿಯಾಶೀಲ ಸದಸ್ಯರಾಗಿರುವ ಇವರು ತಮ್ಮ ವಿದ್ಯಾಭ್ಯಾಸದ ದಿನಗಳಿಂದಲೂ ರಂಗಭೂಮಿ ಯಲ್ಲಿ ಅಪಾರ ಆಸಕ್ತಿಯನ್ನು ಮೂಡಿಸಿಕೊಂಡು ಬಂದಿದ್ದಾರೆ. ಏಕಪಾತ್ರಾಭಿನಯ, ಏಕಾಂಕ ನಾಟಕಗಳು, ಸ್ತಬ್ಧ ಚಿತ್ರ, ಶಾಲಾ ಕಾಲೇಜು ಮಕ್ಕಳಿಗೆ ನಾಟಕಗಳನ್ನು ನಿರ್ದೇಶಿಸುವುದರಲ್ಲಿ ಪರಿಣತಿಯನ್ನು ಹೊಂದಿದ್ದಾರೆ. ಸಹ್ಯಾದ್ರಿ ಉತ್ಸವ, ಬಳ್ಳಾರಿಯ ರಂಗತೋರಣ ನಾಟಕೋತ್ಸವ, ಬೆಂಗಳೂರಿನ ಗಂಗೋತ್ರಿ ನಾಟಕೋತ್ಸವದಲ್ಲಿ ನಟನೆ ಮತ್ತು ನಾಟಕ ನಿರ್ದೇಶನಕ್ಕಾಗಿ ಅನೇಕ ಪುರಸ್ಕಾರಗಳಿಗೆ ಪಾತ್ರರಾಗಿದ್ದಾರೆ.

### **ವಿಶ್ವಕರ್ಮ ಆಚಾರ್ಯ** (ಜ.1975)

ಚಿಕ್ಕಮಗಳೂರಿನ ಶಾಂತಿನಿಕೇತನಾ ಚಿತ್ರಕಲಾ ಶಾಲೆಯ ಪ್ರಾಂಶುಪಾಲರಾಗಿರುವ ಶ್ರೀಯುತರು ಸಮುದಾಯ, ಜನಮನ, ಜಿ.ಪಿ.ಆರ್.ಎಸ್. ಮುಂತಾದ ತಂಡಗಳ ಒಡನಾಟದಲ್ಲಿ

ಹೆಚ್.ಆರ್.ರವೀಶ್, ಬಿ.ವಿ.ಕಾರಂತ್, ಪ್ರಸಾದ್ ಕುಂದೂರು, ಹೆಚ್. ಜನಾರ್ಧನ ಮುಂತಾದ ಅನೇಕ ನಿರ್ದೇಶಕರ ನಿರ್ದೇಶನದಲ್ಲಿ ಪ್ರದರ್ಶನಗೊಂಡ **ಸತ್ತವರ ನೆರಳು, ಕೂಡಲಸಂಗಮ, ಷರೀಫ, ಬಿಂಬ** ನಾಟಕಗಳಲ್ಲಿ ಶ್ರೇಷ್ಠ ಅಭಿನಯ ನೀಡಿದ್ದಾರೆ. ಸಾಕ್ಷರತಾ ಆಂದೋಲನಕ್ಕಾಗಿ ಪ್ರದರ್ಶನಗೊಂಡ ಅನೇಕ ಬೀದಿ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

### ವೈ. ಪುಟ್ಟಸ್ವಾಮಪ್ಪ

ರಂಗಭೂಮಿಯ ಬಗ್ಗೆ ಅಪಾರ ಆಸಕ್ತಿಯನ್ನು ಬೆಳೆಸಿಕೊಂಡಿದ್ದ ಶ್ರೀಯುತರು ನಗರದ ಎಲ್ಲಾ ಕಲಾತಂಡಗಳೊಂದಿಗೂ ಆತ್ಮೀಯ ಸಂಬಂಧ ಹೊಂದಿದ್ದರು. ಇವರು ತಮ್ಮ ಶಿಕ್ಷಕ ಸೇವಾವಧಿಯಲ್ಲಿ ತಮ್ಮ ಶಿಷ್ಯ ವೃಂದದ ಹಲವು ಮಂದಿಗೆ ಬಣ್ಣದ ಗೀಳನ್ನು ಅಂಟಿಸಿದ ಖ್ಯಾತಿ ಇದರದ್ದಾಗಿದೆ. ಇವರು ಸ್ವತಃ ಕಲಾವಿದರಾಗಿ **'ಕುರಿದೊಡ್ಡಿ ಕುರುಕ್ಷೇತ್ರ', 'ವಿಷಜ್ವಾಲೆ', 'ಹೂ ಅರಳಿತು ಬಳ್ಳಿ ಬಾಡಿತು'** ನಾಟಕಗಳಲ್ಲಿ ತಮ್ಮ ಅಮೋಘ ಅಭಿನಯವನ್ನು ನೀಡಿದ್ದಾರೆ.

### ಹೆಚ್.ಆರ್. ಶಿವಪ್ರಸಾದ್

ವೃತ್ತಿಯಲ್ಲಿ ವಿದ್ಯುತ್ ಎಲೆಕ್ಟ್ರಿಕ್ ಗುತ್ತಿಗೆದಾರಾಗಿರುವ ಇವರು ಚಿಕ್ಕಮಗಳೂರು ನಗರದ ಅನೇಕ ರಂಗ ತಂಡಗಳಲ್ಲಿ ಕಲಾವಿದರಾಗಿ ಪಾತ್ರಗಳನ್ನು ಯಶಸ್ವಿಯಾಗಿ ನಿಭಾಯಿಸಿದ ಅನುಭವವಿದ್ದು, **'ವಿಷಜ್ವಾಲೆ', 'ಯಯಾತಿ', 'ವರಭ್ರಷ್ಟ'** ಸೇರಿದಂತೆ ಹಲವು ನಾಟಕಗಳಲ್ಲಿ ತಮ್ಮ ಅಮೋಘ ಅಭಿನಯದ ಮೂಲಕ ಕಲಾಸೇವೆ ಸಲ್ಲಿಸಿದ್ದಾರೆ.

### ಹೆಚ್.ಎಸ್. ಸುಬ್ಬಣ್ಣ (ಶೃಂಗೇರಿ ಸುಬ್ಬಣ್ಣ)

ಹೆಚ್.ಎಸ್. ಸುಬ್ರಹ್ಮಣ್ಯ ಯಾನೆ ಶೃಂಗೇರಿ ಸುಬ್ಬಣ್ಣ ಶೃಂಗೇರಿ ತಾಲ್ಲೂಕಿನ ಪ್ರಮುಖ ಕಲಾವಿದರಲ್ಲಿ ಓರ್ವರು. ರಂಗ ಮತ್ತು ಕಿರುತೆರೆ ಹಾಸ್ಯಕಲಾವಿದರಾಗಿ ಗುರುತಿಸಿಕೊಂಡವರು. ಕಾಲೇಜು ದಿನಗಳಿಂದಲೂ ರಮೇಶ್ ಬೇಗಾರ್ ನಿರ್ದೇಶನದ ನಾಟಕಗಳಲ್ಲಿ ಅಭಿನಯಿಸುತ್ತಾ ಬಂದಿದ್ದಾರೆ. **ಕರ್ಣಭಾರ, ಮಹಾರಥಿ ಕರ್ಣ,ರಾಜಾಹರಿಶ್ಚಂದ್ರ, ಸಂಗೊಳ್ಳಿರಾಯಣ್ಣ, ಮಹಾಯುದ್ಧದ ನೆರಳಿನಲ್ಲಿ** ನಾಟಕಗಳಲ್ಲಿ ಅಭಿನಯಿಸುತ್ತಾ ಪ್ರಬುದ್ಧ ಅಭಿನಯ ನೀಡಿದ್ದಾರೆ. **ಶಕುನಿ, ನಕ್ಷತ್ರಿಕ, ವೆಂಕಣ್ಣಗೌಡ, ಭೀಮನ ಸಹಚರ** ಪಾತ್ರಗಳ ಮೂಲಕ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸುವ ಶೃಂಗೇರಿ ಸುಬ್ಬಣ್ಣ ಜಿಲ್ಲೆಯ ಹೆಮ್ಮೆಯ ಹಾಸ್ಯ ಕಲಾವಿದ ರಾಗಿ ಮನೆ ಮಾತಾಗಿದ್ದಾರೆ.

### ಪಿ. ರಾಜೇಶ್

ವೃತ್ತಿಯಲ್ಲಿ ಪತ್ರಕರ್ತರಾಗಿರುವ ರಾಜೇಶ್ ಪ್ರವೃತ್ತಿಯಲ್ಲಿ ರಂಗಾಸಕ್ತರು. ಶಿಕ್ಷಕ ಪುಟ್ಟಸ್ವಾಮಪ್ಪನವರ ಗರಡಿಯಲ್ಲಿ ಪಳಗಿ, 4 ನಾಟಕಗಳನ್ನು ನಿರ್ದೇಶಿಸಿದ್ದು, **ಬಿಚ್ಚುಗತ್ತಿ ಸಂಗೊಳ್ಳಿರಾಯಣ್ಣ, ವಿಷಜ್ವಾಲೆ, ಜ್ಞಾನಜ್ಯೋತಿ** ನಾಟಕಗಳಲ್ಲಿ ಅಭಿಯಿಸಿದ್ದಾರೆ.

**ಪಿ.ಸಿ. ಮ್ಯಾಥ್ಯು** (ಜ.1944)

ಮಾತೃ ಭಾಷೆ ಮಲೆಯಾಳಂ ಆಗಿದ್ದರೂ ಜನ್ಮ ಕೊಟ್ಟ ನೆಲದ ಋಣ ತೀರಿಸಲು, ಕನ್ನಡ ಭಾಷೆಯನ್ನು ಕಲಿತು 'ಸಪ್ತಶ್ರೀ' ಸಂಸ್ಥೆಯ ಎಲ್ಲಾ ನಾಟಕಗಳ ಪ್ರದರ್ಶನಕ್ಕೆ ಜೀವ ತುಂಬಿದವರು. ವಿಶೇಷವಾಗಿ ಕುಡುಕನ ಪಾತ್ರಕ್ಕೆ ಜೀವ ತುಂಬುತ್ತಿದ್ದ ಮ್ಯಾಥ್ಯು ಅಪಾರ ಸಂಖ್ಯೆಯ ಪ್ರೇಕ್ಷಕರ ಪ್ರೀತಿಗೆ ಪಾತ್ರರಾಗಿದ್ದಾರೆ. **ರಂಗಣ್ಣನ ರಾದ್ಧಾಂತ, ವಿಷಜ್ವಾಲೆ, ಫಜೀತಿ** ಮುಂತಾದ ನಾಟಕಗಳಲ್ಲಿ ಹೃದಯಸ್ಪರ್ಶಿ ಅಭಿನಯ ನೀಡಿರುವ ಶ್ರೀಯುತರಿಗೆ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ.

**ಸುರೇಶ್ ದೀಕ್ಷಿತ್**

ನಿವೃತ್ತಿ ಸರ್ಕಾರಿ ನೌಕರರಾಗಿರುವ ದೀಕ್ಷಿತರ ಹುಟ್ಟೂರು ರಾಣೆಬೆನ್ನೂರು ಸಮೀಪದ ಮಾಸೂರು. ವಿದ್ಯಾಭ್ಯಾಸ ಮಾಡಿದ್ದು ಸಾಗರದಲ್ಲಿ. ನೀನಾಸಂನ ಸ್ಥಾಪಕ ಸದಸ್ಯರಲ್ಲಿ ಪ್ರಮುಖ ಪಾತ್ರ ವಹಿಸಿದ್ದ ತಂದೆ ಎನ್.ಆರ್. ಮಾಸೂರರ ಪ್ರೇರಣೆಗೆ ಒಳಗಾಗಿ ರಂಗಭೂಮಿಯಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡರು. **'ರಿಹರ್ಸಲ್', 'ಪುಟ್ಟಕ್ಕನ ಮೆಡಿಕಲ್ ಕಾಲೇಜ್', 'ಬಿನ್ನಹಕ್ಕೆ ಬಾಯಿಲ್ಲ', 'ಕೊಡೆಗಳು', 'ಹಿರಣ್ಮಯೇನಾ ಪಾತ್ರೇಣ'** ನಾಟಕ ಮುಂತಾದ 18 ನಾಟಕಗಳನ್ನು ನಿರ್ದೇಶಿಸಿದ್ದಾರೆ. **ಹಿರಣ್ಮಯೇನಾ ಪಾತ್ರೇಣ** ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಮಕ್ಕಳಿಗಾಗಿ ಅನೇಕ ಬೇಸಿಗೆ ರಂಗಶಿಬಿರಗಳನ್ನು ಆಯೋಜಿಸಿರುವ ಕೀರ್ತಿ ದೀಕ್ಷಿತ್‌ರಿಗೆ ಸಲ್ಲುತ್ತದೆ.

**ಕೆ.ವೆಂಕಟೇಶ್** (ಜ.1948)

ಜಿಲ್ಲಾ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆಯ ನಿವೃತ್ತ ಉದ್ಯೋಗಿಯಾಗಿರುವ ಕೆ. ವೆಂಕಟೇಶ್ ತಮ್ಮ ವ್ಯಾಸಂಗದ ದಿನಗಳಿಂದಲೂ ನಾಟಕದ ಬಗ್ಗೆ ಆಸಕ್ತಿ ಬೆಳೆಸಿಕೊಂಡು ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಕಂಬಾರರ **'ಮಹಾಮಾಯಿ', 'ಪತ್ರ ಪ್ರಸಂಗ', 'ಮುದುಕನ ಮದುವೆ', 'ಶಂಖವಾದ್ಯ'** ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಪೌರಾಣಿಕ ನಾಟಕಗಳಲ್ಲಿ ಕೃಷ್ಣನ ಪಾತ್ರ ಇವರಿಗೆ ಹೆಸರು ತಂದುಕೊಟ್ಟಿದೆ. ನೇಪಥ್ಯದಲ್ಲಿನ ಕೆಲಸಕ್ಕಾಗಿ ಗುರುತಿಸಿಕೊಂಡಿದ್ದಾರೆ.

**ಕೆ.ಎ. ಶ್ರೀನಿವಾಸ್** (ಜ.1958)

ಕರ್ನಾಟಕ ಸರ್ಕಾರದ ವಿಮಾ ಇಲಾಖೆಯ ಅಧಿಕಾರಿಯಾಗಿರುವ ಇವರು ತಮ್ಮ ನೌಕರಿಯ ಒತ್ತಡದಲ್ಲೂ ರಂಗಭೂಮಿಯ ಬಗ್ಗೆ ಅಪಾರ ಆಸಕ್ತಿಹೊಂದಿದ್ದು, ಚಿಕ್ಕಮಗಳೂರು ನಗರದ ಶಿಲ್ಪಶ್ರೀ, ರಂಗಶ್ರೀ, ಅರಿವು ವೇದಿಕೆ, ಕಲಾಸೇವಾ ಸಂಘ, ಮಿತ್ರವೃಂದ ಇತ್ಯಾದಿ ತಂಡಗಳ ಮೂಲಕ ಅನೇಕ ನಾಟಕಗಳಲ್ಲಿ ಅಭಿನಯಿಸಿರುವ ಶ್ರೀನಿವಾಸ್ **'ಹರಕೆಯ ಕುರಿ', 'ಸುಳಿಯಲ್ಲಿ ಸಿಕ್ಕವರು', 'ನಾಯಿಕಥೆ'** ಮುಂತಾದ ನಾಟಕಗಳನ್ನು ನಿರ್ದೇಶಿಸಿದ್ದಾರೆ

## ಕೆ. ಚಂದ್ರಶೇಖರ್ (ಜ.1965)

ಜಿಲ್ಲಾಧಿಕಾರಿಗಳ ಕಚೇರಿ ಉದ್ಯೋಗಿರುವ ಇವರು ಬಾಲ್ಯದ ದಿನಗಳಿಂದಲೂ ರಂಗಭೂಮಿಯ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಂಡು, ನಗರದ ಅನೇಕ ಕಲಾತಂಡಗಳು ಪ್ರದರ್ಶಿಸಿರುವ ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಅಭಿನಯದ ಜೊತೆಗೆ **"ಹಸ್ವೆಪಟ್ಟೆ"** ಎಂಬ ಹೆಸರಿನಲ್ಲಿ ವ್ಯಂಗ್ಯಚಿತ್ರಗಳನ್ನು ಬರೆಯುವ ಹವ್ಯಾಸವನ್ನು ರೂಢಿಸಿಕೊಂಡಿದ್ದಾರೆ. **'ಕತ್ತಲೆ ಬೆಳಕು', 'ಪುಟ್ಟಕ್ಕನ ಮೆಡಿಕಲ್ ಕಾಲೇಜ್'** ಸೇರಿದಂತೆ ಅನೇಕ ಯಶಸ್ವಿ ನಾಟಕಗಳಲ್ಲಿ ಅಭಿನಯಿಸಿದ್ದಾರೆ. **'ಭೂಮಿಕ ತಂಡ'** ಪ್ರಸ್ತುತಪಡಿಸಿದ್ದ ಅನೇಕ ಬಾನುಲಿ ನಾಟಕಗಳಲ್ಲಿ ತಮ್ಮ ಪ್ರತಿಭೆಯನ್ನು ಅಭಿವ್ಯಕ್ತಿಸಿದ್ದಾರೆ. ಇವರು ಉತ್ತಮ ರಂಗಭೂಮಿ ತಂತ್ರಜ್ಞರೂ ಹೌದು.

## ಎಸ್. ಆಲೇಶ್ (ಜ.1959)

ಶ್ರೀಯುತರು ರಂಗಭೂಮಿಯ ಬಗ್ಗೆ ಅಪಾರ ಒಲವನ್ನುಳ್ಳವರಾಗಿದ್ದು, ಪ್ರತಿಭಾ ಕಲಾವಿದರು, ಕಲಾಸೇವಾ ಸಂಘ, ಶಿಲ್ಪಶ್ರೀ ಮತ್ತು ಮಿತ್ರವೃಂದ ಸಂಸ್ಥೆಗಳು ಪ್ರದರ್ಶಿಸಿರುವ ಅನೇಕ ನಾಟಕಗಳಲ್ಲಿ ಅಭಿನಯಿಸಿರುವುದರ ಜೊತೆಗೆ ಅನೇಕ ನಾಟಕೋತ್ಸವಗಳನ್ನು ಯಶಸ್ವಿಯಾಗಿ ಸಂಘಟಿಸಿದ್ದಾರೆ. **'ದಾರಿ ಯಾವುದಯ್ಯ, 'ಮಾರಾನಾಯಕ', ಗಂಡಸ್ಸಲ್ಲವೇ ಗಂಡ್ಸು, ಮಂತ್ರದ ಕಾಯಿ, ಗುರು ನಿರ್ವಾಣ ಸ್ವಾಮಿ, ಅವಾಂತರ, ಅಳಿಯ ದೇವರು, ಅಕ್ಷರ ಬಾಳಿಗೊಂದು ಉತ್ತರ** ಮುಂತಾದ ಸುಮಾರು 400 ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀಯುತರನ್ನು ಚಿತ್ರದುರ್ಗ ಜಿಲ್ಲೆ ಹಿರಿಯೂರಿನ 'ಭಾರತಿ ಕಲಾವಿದರು' ಸಂಸ್ಥೆ ಉತ್ತಮ ನಿರ್ದೇಶಕ ಪ್ರಶಸ್ತಿ ನೀಡಿ ಗೌರವಿಸಿದೆ.

## ಸದಾನಂದಶೆಟ್ಟಿ (ಜ.1953)

ನರಸಿಂಹರಾಜಪುರದ ಸಪ್ತಶ್ರೀ ಹವ್ಯಾಸಿ ರಂಗದ ಪ್ರಮುಖ ನಟರಾಗಿದ್ದ ಶ್ರೀಯುತರು ಗಡಸು ಶಾರೀರಕ್ಕೆ ಹೆಸರುವಾಸಿಯಾಗಿದ್ದರು. ಜಿಲ್ಲಾ ಮತ್ತು ರಾಜ್ಯ ಮಟ್ಟದ ಅನೇಕ ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ **ವಿಷಜ್ವಾಲೆ, ಅಳಿಯ ದೇವರು, ಆಹುತಿ, ತ್ಯಾಗಿ** ಮುಂತಾದ ನಾಟಕಗಳಲ್ಲಿ ಬಹುಮಾನಗಳನ್ನು ಪಡೆದಿದ್ದಾರೆ. ರಂಗಸಜ್ಜಿಕೆಯಲ್ಲಿ ವಿಶೇಷ ಪರಿಣತಿಯನ್ನು ಸಂಪಾದಿಸಿದ್ದರು.

## ಪಿ. ವೇಲಾಯುಧನ್

ವಿವಿಧ ಸಾಮಾಜಿಕ ಹೋರಾಟಗಳಲ್ಲಿ ಗುರುತಿಸಿಕೊಂಡಿರುವ ಶ್ರೀಯುತರು ಅನೇಕ ಬೀದಿ ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ಜನಾರ್ಧನ ಮತ್ತು ಸಿ. ಬಸವಲಿಂಗಯ್ಯನವರ ನಿರ್ದೇಶನದಲ್ಲಿ ದಾವಣಗೆರೆಯ ಕೊಂಡಜ್ಜಿಯಲ್ಲಿ ನಡೆದ ರಂಗ ತರಬೇತಿ ಶಿಬಿರದಲ್ಲಿ ಭಾಗವಹಿಸಿರುತ್ತಾರೆ. ಅಂತೆಯೇ ಚಿಕ್ಕಮಗಳೂರು, ಭದ್ರಾವತಿ, ಮೈಸೂರು, ಚಿತ್ರದುರ್ಗ, ಧಾರವಾಡದಲ್ಲಿ ಅನೇಕ ರಂಗ ತರಬೇತಿ ಶಿಬಿರಗಳನ್ನು ಆಯೋಜಿಸಿರುತ್ತಾರೆ. **"ಇಪ್ಟಾ"**

ಸಂಘಟನೆಯ ಪ್ರಮುಖರಾಗಿರುವ ವೇಲಾಯುಧನ್ ಈವರೆವಿಗೂ ಸುಮಾರು 1500 ನಾಟಕ ಪ್ರದರ್ಶನ ನೀಡಿರುತ್ತಾರೆ.

**ಅಪೂರ್ವ** (ಜ.1954)

ತರೀಕೆರೆ ತಾಲ್ಲೂಕು ಅಜ್ಜಂಪುರದ ಅಪೂರ್ವ ರಂಗ ಚಟುವಟಿಕೆಯಲ್ಲಿ ಅಪಾರ ಆಸಕ್ತಿಯನ್ನು ಉಳ್ಳವರಾಗಿದ್ದಾರೆ. ಕಲಾಸೇವಾ ಸಂಘ, ಶಿವಸಂಚಾರ ನಾಟಕ ತಂಡ, ಗೆಳೆಯರ ಬಳಗ ಸಾದರಪಡಿಸುತ್ತಿದ್ದ ನಾಟಕಗಳ ಬಗ್ಗೆ ಜಿಲ್ಲಾ ಮಟ್ಟದ ಅನೇಕ ಪತ್ರಿಕೆಗಳಲ್ಲಿ ಅತ್ಯಂತ ವಸ್ತುನಿಷ್ಠವಾಗಿ ವಿಮರ್ಶಾತ್ಮಕ ಲೇಖನ ಗಳನ್ನು ಬರೆದಿದ್ದಾರೆ. ಅಜ್ಜಂಪುರದ ರಂಗಭೂಮಿಯ ಸಮಸ್ತ ಚಟುವಟಿಕೆಗಳ ಬಗ್ಗೆ ಪರಿಪೂರ್ಣವಾದ ಮಾಹಿತಿಗಳನ್ನು ದಾಖಲಿಸಿದ್ದಾರೆ.

**ಆರ್. ಪಂಚಾಕ್ಷರಪ್ಪ** (ಜ.1955)

ನರಸಿಂಹರಾಜಪುರದ 'ಸಪ್ತಶ್ರೀ' ಸಂಸ್ಥೆಯ ಆಧಾರ ಸ್ತಂಭಗಳಲ್ಲಿ ಒಬ್ಬರಾಗಿದ್ದ ಶ್ರೀಯುತರು ತ್ಯಾಗಿ, ವಿಷಜ್ವಾಲೆ, ಆಹುತಿ ಇತ್ಯಾದಿ ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ರಂಗಸಜ್ಜಿಕೆ, ಪರಿಣಾಮಕಾರಿ ಬೆಳಕು ಸಂಯೋಜನೆಯಲ್ಲಿ ವಿಶೇಷ ಅನುಭವವನ್ನು ಹೊಂದಿದವರಾಗಿದ್ದರು.

**ಜಗದೀಶ್‌ಮಲ್ನಾಡ್**

ಚಿಕ್ಕಮಗಳೂರಿನ ಬೆಳಲುಕೊಪ್ಪದ ಜಗದೀಶ್ ದಿ॥ ಶಂಕರ್‌ನಾಗ್‌ರವರ ಸಂಕೇತ್ ತಂಡದ ಎಲ್ಲಾ ನಾಟಕಗಳ ಮೇಲ್ವಿಚಾರಣೆ ಮತ್ತು ಸಂಘಟನೆಯನ್ನು ವ್ಯವಸ್ಥಿತವಾಗಿ ನಿರ್ವಹಿಸುತ್ತಿದ್ದರು. ರಂಗಶಂಕರದ ವ್ಯವಸ್ಥಾಪಕರಾಗಿರುವ ಜಗದೀಶ್‌ಮಲ್ನಾಡ್ ರವರು ಚಿತ್ರನಿರ್ಮಾಣ ಸಂಸ್ಥೆ, ಜಾಹೀರಾತು ಸಂಸ್ಥೆ ಮತ್ತು ಉಪಹಾರ ಗೃಹಗಳನ್ನು ನಡೆಸುತ್ತಿದ್ದಾರೆ.

**ರಮೇಶ್‌ಬೇಗಾರ್**

ರಮೇಶ್ ಬೇಗಾರ್ ಚಿಕ್ಕಮಗಳೂರು ಜಿಲ್ಲೆಯ ಚಿರಪರಿಚಿತ ರಂಗಭೂಮಿ ಕಲಾವಿದ ಮತ್ತು ಕಿರುತೆರೆ ನಿರ್ದೇಶಕರಾಗಿದ್ದಾರೆ. ಶಕ್ತಿದೇವತೆ ಶೃಂಗೇರಿ ಶಾರದೆಯ ಮಡಿಲಿನಲ್ಲಿರುವ ಶೃಂಗೇರಿಯಲ್ಲಿ ಸಾಂಸ್ಕೃತಿಕ ವಾತಾವರಣವನ್ನು ಮತ್ತು ರಂಗಭೂಮಿ ಬಗೆಗಿನ ಅಭಿರುಚಿಯನ್ನು ಜನಸಾಮಾನ್ಯರಲ್ಲಿ ಹುಟ್ಟುಹಾಕಿದವರಲ್ಲಿ ಪ್ರಮುಖರಾಗಿದ್ದಾರೆ. ಕಾಳಿಂಗನಾವಡ ಪ್ರತಿಷ್ಠಾನದ ಮೂಲಕ ಇವರೇ ರಚಿಸಿರುವ **'ದಿ ಡೆತ್', 'ಭಾಸನ ಕರ್ಣಭಾರ', 'ಸಂಗೊಳ್ಳಿ ರಾಯಣ್ಣ'** ಮುಂತಾದ ನಾಟಕಗಳನ್ನು ಬೇಗಾರ್ ಯಶಸ್ವಿಯಾಗಿ ನಿರ್ದೇಶಿಸಿದ್ದಾರೆ. ಇವರ ನಿರ್ದೇಶನದಲ್ಲಿ 25 ನಾಟಕಗಳು 200 ಪ್ರದರ್ಶನ ಕಂಡಿದ್ದು, ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಅನೇಕ ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ಜಿಲ್ಲಾ ರಾಜ್ಯೋತ್ಸವ, ಚಾಮುಂಡೇಶ್ವರಿ ಪ್ರಶಸ್ತಿ ಹಾಗೂ ಕತಾರಿನ ಕನ್ನಡ ಸಂಘದ ಪ್ರಶಸ್ತಿ ಕೂಡ ರಮೇಶ್ ಬೇಗಾರ್‌ರವರಿಗೆ ಸಂದಿದೆ. ಇವರು ಉತ್ತಮವಾದ ಮೈಮ್ ಆ್ಯಕ್ಟಿಂಗ್ ಕಲಾವಿದರಾಗಿದ್ದು, ಅನೇಕ ಬೀದಿ ನಾಟಕಗಳನ್ನು ಕೂಡಾ ನಿರ್ದೇಶಿಸಿದ್ದಾರೆ.

## ದಿನೇಶ್ ಪಟವರ್ಧನ್ (ಜ.1961)

ವೃತ್ತಿಯಲ್ಲಿ ಪತ್ರಕರ್ತರಾಗಿರುವ ಪಟವರ್ಧನ್ 1980ರ ದಶಕದಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ರಾಜ್ಯ ಹವ್ಯಾಸಿ ರಂಗಭೂಮಿ ಕಲಾವಿದರ ಸಮಾವೇಶದಲ್ಲಿ ಜಿಲ್ಲೆಯ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ರಂಗಶ್ರೀ ಸಂಸ್ಥೆಯ ಅನೇಕ ನಾಟಕಗಳಲ್ಲಿ ಅಭಿನಯಿಸಿರುವ ಕೀರ್ತಿ ಪಟವರ್ಧನ್‌ಗೆ ಸಲ್ಲುತ್ತದೆ. **'ಕತ್ತಲೆ ದಾರಿ ದೂರ'**, **'ಮಾರನಾಯ್ಕ'** ನಾಟಕಗಳಲ್ಲಿ ಹೃದಯಸ್ಪರ್ಶಿ ಅಭಿನಯವನ್ನು ನೀಡಿದ್ದಾರೆ. ಉದಯವಾಣಿ ಕನ್ನಡ ದೈನಿಕದಲ್ಲಿ ನಾಟಕ ಪ್ರದರ್ಶನಗಳ ಕುರಿತಂತೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸಿದ್ದಾರೆ.

## ಬಿ.ಎಲ್. ರವಿಕುಮಾರ್ (ಜ.1965)

ಶೃಂಗೇರಿಯವರಾದ ಶ್ರೀಯುತರು ಕಾಳಿಂಗ ನಾವಡ ಪ್ರತಿಷ್ಠಾನದ ಪ್ರಮುಖ ಸೂತ್ರಧಾರಿಗಳಲ್ಲಿ ಒಬ್ಬರು. **ಶಂಖವಾದ್ಯ, ಆಹುತಿ, ಹರಿದ್ರಕುಂಕುಮ, ಸುಳಿಯಲ್ಲಿ ಸಿಕ್ಕವನು, ಕಲೆಯ ಕೊಲೆ, ದುರಂತ, ಮೃತ್ಯು ಸಿಂಹಾಸನ, ರಕ್ತಾಕ್ಷಿ, ಸ್ಮಶಾನ ಕುರುಕ್ಷೇತ್ರ, ಗುಡುಗು ಹೇಳಿದೇನು, ಕರ್ಣಭಾರ (ಏಕಾಂತ), ಮಹಾರಥಿ ಕರ್ಣ, ಮಹಾಯುದ್ಧದ ನೆರಳಿನಲ್ಲಿ, ಸತ್ಯಹರಿಶ್ಚಂದ್ರ, ಸಂಗೊಳ್ಳಿ ರಾಯಣ್ಣ** ಹಲವಾರು ನಾಟಕಗಳಳಲಿ ಅಭಿನಯಿಸಿದ್ದಾರೆ. 2001 ರಲ್ಲಿ ಜಿಲ್ಲಾಡಳಿತ ನೀಡುವ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಕ.ಸಾ.ಪ. ಶತಮಾನೋತ್ಸವದಲ್ಲಿ ಸನ್ಮಾನ. ಕಾಳಿಂಗನಾವಡ ಪ್ರತಿಷ್ಠಾನ, ಶೃಂಗೇರಿ ನೀಡುವ ವರ್ಷದ ರಂಗ ಪುರಸ್ಕಾರ (2012), ಜಿಲ್ಲಾ ಕ.ಸಾ.ಪ. ಕನ್ನಡ ಭವನ ಉದ್ಘಾಟನಾ ಸಮಾರಂಭದಲ್ಲಿ ಸನ್ಮಾನ, ಶೃಂಗೇರಿ ಜಗದ್ಗುರುಗಳವರ ದಿವ್ಯ ಸಮ್ಮುಖದಲ್ಲಿ **ಸಂಗೊಳ್ಳಿ ರಾಯಣ್ಣ** ನಾಟಕ ಪ್ರದರ್ಶಿಸಿ ಅವರಿಂದ ಮೆಚ್ಚುಗೆ ಮತ್ತು ಸನ್ಮಾನಕ್ಕೆ ಪಾತ್ರರಾಗಿದ್ದಾರೆ.

## ಜಿ. ಪ್ರಕಾಶ್

ಶ್ರೀಯುತರು ತರೀಕೆರೆ ತಾಲ್ಲೂಕು ಅಜ್ಜಂಪುರದವರಾಗಿದ್ದು ಹವ್ಯಾಸಿ ನಾಟಕ ಕಲಾವಿದರಾಗಿದ್ದಾರೆ. ಕಲಾಸೇವಾ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. **ನರಕದಲ್ಲೂ ನಾರ, ಮದ್ಯದಂಗಡಿ, ಸ್ವಾಮಿಗಳ ಸ್ವಾಮಾರ, ಹುಚ್ಚನಾಗಿದ್ದು ಹೇಗೆ, ಅದ್ಭುತ ಕಳ್ಳ, ಜಂಗಮ ಅಲ್ಲಾ, ವೀರಬಾಹು, ಸಾಲಬಾಧೆ, ಇಮಾನ ಅಪಹರಣ, ಹುಟ್ಟು ಮೂಕ** ಇತ್ಯಾದಿ ನಾಟಕಗಳಲ್ಲಿ ಮನೋಜ್ಞ ಅಭಿನಯಕ್ಕಾಗಿ ಹೆಸರುವಾಸಿಯಾಗಿದ್ದಾರೆ.

## ಎ.ಬಿ. ಜಯರಾಮ್

ಚಿಕ್ಕಮಗಳೂರು ಜಿಲ್ಲೆಯ ರಂಗಭೂಮಿ ಮತ್ತು ಪ್ರಶಸ್ತಿ ವಿಜೇತ ಚಲನಚಿತ್ರಗಳ ಕಲಾವಿದರಾಗಿರುವ ಎ.ಬಿ. ಜಯರಾಮ್ ದಿ॥ ಸುಬ್ರಹ್ಮಣ್ಯ ಕಿಲ್ಲೇದಾರ್ ವಿರಚಿತ **'ಚಕ್ರವ್ಯೂಹ'** ಮತ್ತು **'ರಾಗಸೂಯ ಯಾಗ'** ನಾಟಕಗಳಲ್ಲಿ ಬಾಲನಟರಾಗಿ ರಂಗಭೂಮಿಗೆ ಪ್ರವೇಶಿಸಿದ ಇವರು ರಂಗಶ್ರೀ ಸಂಸ್ಥೆಯ ಹುಟ್ಟಿಗೆ ಕಾರಣಕರ್ತರಾದವರಲ್ಲಿ ಒಬ್ಬರು. ತಮ್ಮ ಇಂಜಿನಿಯರಿಂಗ್

ವ್ಯಾಸಂಗದ ಅವಧಿಯಲ್ಲಿ ಮೈಸೂರು ವಿಶ್ವವಿದ್ಯಾಲಯದ ಅಡಿಯಲ್ಲಿ ನಡೆದ ಉಳ್ಳಾಲ್ ಸ್ಮಾರಕ ನಾಟಕ ಸ್ಪರ್ಧೆಯಲ್ಲಿ ಪ್ರಶಸ್ತಿ ಪುರಸ್ಕೃತರಾಗಿದ್ದರು. **'ಅಪರಾಧಂಗಳ ಕ್ಷಮಿಸೋ', 'ಗೋಕರ್ಣದ ಗೌಡಶಾನಿ', 'ಬಾಕಿ ಇತಿಹಾಸ', 'ಏವಂ ಇಂದ್ರಜಿತ್', 'ಸದ್ದು ವಿಚಾರಣೆ ನಡೆಯುತ್ತಿದೆ', 'ಕತ್ತಲೆ ಬೆಳಕು'**, ಕೆ.ಎಸ್. ಭಗವಾನ್ ಅನುವಾದಿತ ಕೃತಿ **'ಜೂಲಿಯಸ್ ಸೀಜರ್'** ಮುಂತಾದ ಅನೇಕ ನಾಟಕಗಳಲ್ಲಿ ಅಭಿನಯಿಸಿ ಅನೇಕ ಪ್ರಾಯೋಗಿಕ ನಾಟಕಗಳನ್ನು ನಿರ್ದೇಶಿಸಿ ಜಿಲ್ಲೆಯ ಚಿರಪರಿಚಿತ ಕಲಾವಿದರಾಗಿದ್ದಾರೆ.

### ಬಿ.ಬಿ. ಅರ್ಪಿತ (ಜ.1992)

ಬಾಲ್ಯದ ದಿನಗಳಿಂದಲೂ ರಂಗಭೂಮಿಯಲ್ಲಿ ಆಸಕ್ತಿ ಮೂಡಿಸಿಕೊಂಡಿರುವ ಇವರು **ನಾರದ ವಿಜಯ, ಬಾಣಾಸುರ, ಯಯಾತಿ, ಹಸಿರುಳಿಸಿ ಉಸಿರಾಡಿ** ಮುಂತಾದ ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. **ಭಗತ್ ಸಿಂಗ್, ರಾಜಾ ಮಹಾರಾಜ, ಸತ್ತ ನಾಯಿ, ಅಂಧೇರ್ ನಗರಿ ಚೌಪಟ್** ರಾಜಾ ಮುಂತಾದ ನಾಟಕಗಳಲ್ಲಿ ನಿರ್ದೇಶಿಸಿರುತ್ತಾರೆ.

### ವೈಷ್ಣವಿ ಎಸ್. ರಾವ್ (ಜ.2004)

ಚಿಕ್ಕಮಗಳೂರು ಜಿಲ್ಲೆಯ ಅತ್ಯಂತ ಪ್ರತಿಭಾನ್ವಿತ ಬಾಲನಟಿಯಾಗಿ ಗುರುತಿಸಿಕೊಂಡಿರುವ ವೈಷ್ಣವಿ ಉಪನ್ಯಾಸಕ ಎಚ್.ಎಂ. ನಾಗರಾಜರಾವ್ ಹಾಗೂ ಶಿಕ್ಷಕಿ ರೇಖಾನಾಗರಾಜರಾವ್ ಸುಪುತ್ರಿ. ಚಂದ್ರಶೇಖರ ಕಂಬಾರರ **'ಮಹಾಮಾಯಿ'** ನಾಟಕದಲ್ಲಿ **ಜಿಂಕೆ, ಭೂತ,** ಹೀಗೆ ವಿವಿಧ ನಾಲ್ಕು ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸುವಾಗ ತನ್ನ 9ನೇ ವಯಸ್ಸಿನಲ್ಲಿಯೇ ರಂಗಾಸಕ್ತಿಯನ್ನು ಬೆಳೆಸಿಕೊಂಡು, 5ನೇ ತರಗತಿಯಲ್ಲಿರುವಾಗಲೇ **'ಊರಿನ ಮಕ್ಕಳು'** ಎನ್ನುವ ಕಿರುನಾಟಕ ಬರೆದು, ಪ್ರಕಟಿಸಿ, ಅದಕ್ಕೆ ಕನ್ನಡ ಸಾಹಿತ್ಯ ಪರಿಷತ್ ಕೇಂದ್ರ ಘಟಕದಿಂದ **'ಶಿಶುಸಂಗಮೇಶ ದತ್ತಿ'** ಪ್ರಶಸ್ತಿಗೆ ಭಾಜನಳಾಗಿದ್ದಾಳೆ. ಸ್ವಚ್ಛ ಭಾರತ್ ಅಭಿಯಾನಕ್ಕೆ ಪೂರಕವಾಗಿ **'ಅನನ್ಯ ಭಾರತ್'** ಎನ್ನುವ ಹೊಸ ನಾಟಕವನ್ನು ಬರೆದಿರುತ್ತಾಳೆ. ಜಿಲ್ಲೆಯಲ್ಲಿ ನಡೆದ ರಂಗ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವ ಈಕೆಗೆ ರಂಗಭೂಮಿ ನಟಿಯಾಗುವ ಕನಸು ಇದೆ.

### ರೇಖಾ ನಾಗರಾಜರಾವ್ (ಜ.1974)

ಬಾಲ್ಯದಿಂದಲೂ ಶಾಲಾ ನಾಟಕಗಳಲ್ಲಿ ಅಭಿನಯದಲ್ಲಿ ಕಾಳಜಿಯನ್ನು ಬೆಳೆಸಿಕೊಂಡ ಶ್ರೀಮತಿಯವರು ಆಗ ಮಾಡಿದ **'ಅತ್ತೆ'**, ಪಾತ್ರವೊಂದನ್ನೂ ಈಗಲೂ ನೆನಪಿಸಿಕೊಂಡು ಇವರಿಗೆ 'ಏನತ್ತೆ' ಎಂದು ತಮಾಷೆ ಮಾಡುವ ಹಿರಿಯರೂ ಇದ್ದಾರೆ. ಚಂದ್ರಶೇಖರ ಕಂಬಾರರ **'ಮಹಾಮಾಯಿ'** ನಾಟಕದಲ್ಲಿ ದೇವಿಯ ಪಾತ್ರದ ಜೊತೆಗೆ **'ಗಯ್ಯಾಳಿ ಸೊಸೆ'**ಯ ಪಾತ್ರವನ್ನೂ ನಿರ್ವಹಿಸಿ ಜನಮನ ಗೆದ್ದಿದ್ದಾರೆ. **'ಗಾದೆ ಮೂಲಕ ಸಮಸ್ಯೆ ಪರಿಹಾರ'** ಎನ್ನುವ ಹಾಸ್ಯ ನಾಟಕದಲ್ಲಿ ಅಜ್ಜಿಯಾಗಿ ತಲ್ಲೀನತೆ ಮೆರೆದಿದ್ದಾರೆ. ಮಿತ್ರವೃಂದ, ಕಲಾಸೇವಾ ಸಂಘ ಮುಂತಾದ ರಂಗ ತಂಡದಲ್ಲಿ ಸಕ್ರಿಯರಾಗಿದ್ದಾರೆ. ತಮ್ಮ **'ಕಲ್ಕಟ್ಟೆ ಪುಸ್ತಕದ ಮನೆ'**ಯ ಮೂಲಕ

ರಂಗಸಂಘಟನೆಯಲ್ಲೂ ಇವರು ಮುಂದಿದ್ದಾರೆ. **ಅಪಾಯದ ಘಂಟೆ, ಚಾರ್ಲ್ಸ್ ಡಾರ್ವಿನ್** ಎನ್ನುವ ಎರಡು ವೈಜ್ಞಾನಿಕ ನಾಟಕಗಳನ್ನು ನಿರ್ದೇಶಿಸಿ ಜಿಲ್ಲಾ ಮಟ್ಟದಲ್ಲಿ ಬಹುಮಾನಗಳನ್ನು ಪಡೆದಿದ್ದಾರೆ. ವೃತ್ತಿಯಲ್ಲಿ ರೇಖಾ ವಿಜ್ಞಾನ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

### ಮುಮ್ತಾಜ್ ಬೇಗಂ

ಕಳಸಾದ ಸಾಂಸ್ಕೃತಿ ರಂಗದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿರುವ ಮುಮ್ತಾಜ್ ಬೇಗಂ **ಅವಳ ಸುತ್ತ, ಶನಿಮಹಾತ್ಮೆ, ಶ್ರೀಕೃಷ್ಣ ಪಾರಿಜಾತ, ಕುಂಟಾ ಕುಂಟಾ ಕುರುವತ್ತಿ, ದ್ರೌಪದಿ, ಛಲ ತಂದ ಫಲ, 36 ಅಲ್ಲ 63,** ನಾರದ ವಿಜಯ ನಾಟಕಗಳಲ್ಲಿ ಅಭಿಯನಿಸಿ, **ಒಥೆಲೋ, ಲಚ್ಚಿ, ಕುರುಕ್ಷೇತ್ರ, ಕಪ್ಪು ಕಾಗೆಯ ಹಾಡು** ನಾಟಕಗಳನ್ನು ನಿರ್ದೇಶಿಸಿದ್ದಾರೆ. ದಿ.ಭಾಸ್ಕರನಲ್ಲಿತೀರ್ಥರ ನಾಟಕಗಳಲ್ಲಿ ಸಹ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುವ ಬೇಗಂ **ಪಂಜರ ಶಾಲೆ, ಕೃಷ್ಣಲೀಲೆ, ಕತ್ತಲೆ ರಾಜ್ಯ, ಕೆರೆಗೆಹಾರ** ನಾಟಕಗಳಿಗೆ ಹಿನ್ನೆಲೆ ಸಂಗೀತ ನೀಡಿದ್ದಾರೆ.

### ದಿ. ಭಾಸ್ಕರ ನೆಲ್ಲಿತೀರ್ಥ

ವಿಶೇಷವಾಗಿ ಸಮತದ ಭಾಸ್ಕರ ನೆಲ್ಲಿತೀರ್ಥ 1986 ರಿಂದಲೇ ಸಮುದಾಯದೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಂಡು ಆ ಮೂಲಕ ನಟನೆ, ನಿರ್ದೇಶನ, ರಂಗಸಜ್ಜಿಕೆ ಮತ್ತು ವಿನ್ಯಾಸದಲ್ಲಿ ಪರಿಣತಿಗಳಿಸಿದವರು. ಭಾಸ್ಕರ ನೆಲ್ಲಿತೀರ್ಥರವರು 2 ವರ್ಷಗಳ ಕಾಲ ಸಿ. ಬಸವಲಿಂಗಯ್ಯನವರಿಂದ 'ರಂಗಭೂಮಿ'ಯಲ್ಲಿ ತರಬೇತಿಯನ್ನು ಪಡೆದವರು. ಕುದುರೆಮುಖ ಗಣಿಗಾರಿಕೆಯಲ್ಲಿ ದುಡಿಯುತ್ತಿರುವ ಅನೇಕರನ್ನು ನಾಟಕದ ಆಕರ್ಷಣೆಗೆ ಸೆಳೆದವರು ಭಾಸ್ಕರ ನೆಲ್ಲಿತೀರ್ಥ. ಯಕ್ಷಗಾನದ ಮಟ್ಟುಗಳು, ಭೂತಾರಾಧನೆಯ ಕುಣಿತ ಮತ್ತು ಅರ್ಥವಿನ್ಯಾಸಗಳನ್ನು ತನ್ನ ನಿರ್ದೇಶನದ ನಾಟಕಗಳಲ್ಲಿ ಅಳವಡಿಸಿಕೊಂಡದ್ದು ಮತ್ತೊಂದು ವಿಶೇಷ. ಒಬ್ಬ ದಕ್ಷ ನಿರ್ದೇಶಕ ಮತ್ತು ಅವನ ಪರಿಣಾಮಕಾರಿ ನಿರ್ದೇಶನಕ್ಕೆ ಸವಾಲಾಗಿರುವ ಗಿರೀಶ್ ಕಾರ್ನಾಡರ **ನಾಗಮಂಡಲ, ಉತ್ಪಲದತ್ತರ ಸೂರ್ಯ ಶಿಕಾರಿ, ರಾವಿ ನದಿಯ ದಂಡೆಯಮೇಲೆ** ಇತ್ಯಾದಿ ನಾಟಕಗಳನ್ನು ಭಾಸ್ಕರನೆಲ್ಲಿತೀರ್ಥರು ನಿರ್ದೇಶಿಸಿದ್ದಾರೆ. **ಮಹಿಮಾಪುರ, ಕತ್ತಲೆ ರಾಜ್ಯ, ಕೆರೆಗೆ ಹಾರ, ಮಾರನಾಯಕನ ದುಷ್ಟಾಂತ, ಅಜೇಯ ಬಾಹುಬಲಿ, ಇಸ್ಪೀಟ್ ರಾಜ, ಪಂಜರಶಾಲೆ** ನಾಟಕಗಳು ಭಾಸ್ಕರ ನೆಲ್ಲಿತೀರ್ಥರಿಗೆ ಹೆಸರು ಮತ್ತು ಪ್ರಶಸ್ತಿಯನ್ನು ತಂದುಕೊಟ್ಟಿವೆ. ಕಾಡುಕುದುರೆ ತಂಡದ ರಾಜ್‌ಕುಮಾರ್ ಕುದುರೆಮುಖದ ಮತ್ತೊಬ್ಬ ಗಮನಾರ್ಹ ನಿರ್ದೇಶಕ.

### ನಂದಕುಮಾರ್

ಸರ್ಕಾರಿ ಉದ್ಯೋಗಿಯಾಗಿರುವ ನಂದಕುಮಾರ್ ಚಿಕ್ಕಮಗಳೂರಿನ ಕಲಾಸೇವಾ ಸಂಘದ ಪ್ರತಿಭಾನ್ವಿತ ಕಲಾವಿದರಲ್ಲಿ ಒಬ್ಬರು. ಇವರು ತಮ್ಮ ಬಿಡುವಿಲ್ಲದ ಕಾರ್ಯಭಾರದ ಒತ್ತಡದ ನಡುವೆಯೂ ಕಲಾಸೇವಾ ಸಂಘದ ಚಟುವಟಿಕೆಗಳಲ್ಲಿ ಸದಾ ಭಾಗಿಗಳಾಗುತ್ತಿದ್ದರು. ಇವರ ನಿರ್ದೇಶನದಲ್ಲಿ ಮೂಡಿ ಬಂದಿದ್ದ **'ಯಮಲೋಕದಲ್ಲಿ ಮಾನವ'** ನಾಟಕ ಇವರ ಕಲಾ ನೈಪುಣ್ಯತೆಗೆ ಸಾಕ್ಷಿಯಾಗಿದೆ.

## ಎಂ. ಯಶವಂತ್

ಚಿಕ್ಕಮಗಳೂರಿನ ಪ್ರಾಯೋಗಿಕ ರಂಗಭೂಮಿಗೆ ಹೊಸ ಆಯಾಮ ನೀಡಿದ್ದ ರಂಗಶ್ರೀಯ ಆಧಾರಸ್ತಂಭಗಳಲ್ಲಿ ಒಬ್ಬರಾಗಿದ್ದ ಎಂ.ಯಶವಂತ್ ಜಿಲ್ಲೆಯ ಪ್ರಮುಖ ರಂಗಕರ್ಮಿಯಾಗಿದ್ದಾರೆ. ಸದ್ದುಗದ್ದಲವಿಲ್ಲದೆ ಮೌನಿಯಾಗಿ ರಂಗ ಚಟುವಟಿಕೆಗಳ ನಡೆಸಿಕೊಂಡು ಬಂದ ಹಾಗೂ ಇಲ್ಲೊಂದು ವ್ಯವಸ್ಥಿತವಾದ ಕಲಾಮಂದಿರವಾಗಬೇಕೆಂದು ಬದುಕಿನ ಅನೇಕ ಸುಂದರ ಗಳಿಗೆಗಳಲ್ಲಿ ಹಗಲು ರಾತ್ರಿ ಕನಸು ಕಾಣುತ್ತಿದ್ದ ಯಶವಂತ್‌ರಿಗೆ 2000 ಸಾಲಿನ ರಾಜ್ಯ ನಾಟಕಅಕಾಡೆಮಿ ಪ್ರಶಸ್ತಿ ಲಭಿಸಿತು. ಬಾದಲ್ ಸರಕಾರರ ರಂಗ ತರಬೇತಿ ಶಿಬಿರದಲ್ಲಿ ಭಾಗವಹಿಸಿ, ಮಹಿಳೆಯರಿಗಾಗಿ ಅನೇಕ ನಾಟಕಗಳನ್ನು ನಿರ್ದೇಶಿಸಿದ್ದಾರೆ. **'ಮತದಾನ'**, **'ಮಾರಾನಾಯಕ'**, **'ಸಾಹೇಬರು ಬರುತ್ತಾರೆ'** ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಶ್ರೇಷ್ಠ ಬೆಳಕುತಜ್ಞರಾಗಿರುವ ಯಶವಂತರು ರಂಗಭೂಮಿಯ ಬಗ್ಗೆ ಅಪಾರವಾದ ಕಾಳಜಿಯನ್ನು ಹೊಂದಿದ್ದಾರೆ.

## ಚಿಕ್ಕಮಗಳೂರು ಜಿಲ್ಲೆಯ ಪ್ರಮುಖ ರಂಗಮಂದಿರಗಳು

1. ಗೌರಿಶಂಕರ ಸಭಾಂಗಣ – ಶೃಂಗೇರಿ
2. ಶ್ರೀ ರುದ್ರಪ್ಪಶೆಟ್ಟಿ ಸ್ಮಾರಕ ಬಯಲು ಮಂದಿರ – ಚೌಳಹಿರಿಯೂರು
3. ಗಣಪತಿ ಸಭಾಂಗಣ – ನ.ರಾ.ಪುರ
4. ಆರೂರು ಜಯಲಕ್ಷ್ಮಮ್ಮ ಕಲ್ಯಾಣ ಮಂಟಪ, ಟೌನ್‌ಹಾಲ್, ಕೊಪ್ಪ
5. ಜೇಸಿಸ್ ಭವನ, ಅಡ್ಯಂತಾಯ ರಂಗಮಂದಿರ, ಮೂಡಿಗೆರೆ
6. ದುರ್ಗಾ ಮಂಟಪ, ಕಳಸ, ಮೂಡಿಗೆರೆ ತಾ.
7. ಕುವೆಂಪು ಕಲಾಮಂದಿರ, ಎಂ.ಎಲ್.ವಿ. ರೋಟರಿ ಸಭಾಂಗಣ, ಡಾ. ಬಿ.ಆರ್. ಅಂಬೇಡ್ಕರ್ ಭವನ, ಚಿಕ್ಕಮಗಳೂರು
8. ಸಂಪತ್ ಭವನ– ಕುದುರೆಮುಖ, ಮೂಡಿಗೆರೆ.
9. ಕಲಾಶ್ರೀ ರಂಗಮಂದಿರ, ಕೈಲಾಸಂ ಕಲಾಕ್ಷೇತ್ರ, ಅಜ್ಜಂಪುರ, ತರೀಕೆರೆ.

## ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾಗಿದ್ದವರು

1. ಎಂ.ಜೆ. ದೀಪಕ್
2. ಶ್ರೀಮತಿ ಕಲ್ಪನಾನಾಗನಾಥ್

## ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು

1. ಡಾ|| ಬಿ.ವಿ.ರಾಜಾರಾಮ್ – 1992
2. ಗೊ.ರು.ಚನ್ನಬಸಪ್ಪ – 1993
3. ದಿ|| ಕೃಷ್ಣೋಜಿರಾವ್ ಚೌವ್ಹಾಣ್ – 1995
4. ದಿ|| ಸಿ.ಪಿ.ಪರಮೇಶ್ವರಪ್ಪ – 1996
5. ತರೀಕೆರೆ ತಿಮ್ಮಣ್ಣ – 1997
6. ವಾಲ್ಟರ್ ಡಿಸೋಜ – 1997
7. ಎಂ. ಯಶವಂತ್ – 2000
8. ಅಜ್ಜಂಪುರ ಕೃಷ್ಣಮೂರ್ತಿ – 2005

## ಅಕಾಡೆಮಿಯ ಸುವರ್ಣ ಕರ್ನಾಟಕ ಗೌರವ ಪುರಸ್ಕೃತರು

1. ಎ.ಸಿ. ಮಹಾವೀರ್ ಜೈನ್ – 2006
2. ಎಂ.ಬಿ. ಶಿವಪ್ಪ – 2006
3. ಶೃಂಗೇರಿ ರಾಮಣ್ಣ –2010

## ಅಕಾಡೆಮಿಯ ಸುವರ್ಣ ಸಂಭ್ರಮ ರಂಗ ಪ್ರಶಸ್ತಿ ಪುರಸ್ಕೃತರು

1. ಎ.ಸಿ.ಚಂದ್ರಪ್ಪ – 2011
2. ಶ್ರೀಮತಿ ಜಯಲಕ್ಷ್ಮಿ – 2012–13 (ಸಂಘಟನೆ)

## ರಂಗ ತಂತ್ರಜ್ಞರು, ವಾದ್ಯಗಾರರು, ಮತ್ತು ನೇಪಥ್ಯದ ಕಲಾವಿದರು

| | | |
|---|---|---|
| 1. | ಬಿಸಲೇಹಳ್ಳಿ ಸೋಮಶೇಖರ್ ಬಿ.ಹೆಚ್. | – 9480587919 |
| 2. | ಬೀಕನಹಳ್ಳಿ ಬಸವರಾಜ್ | – 9845282908 |
| 3. | ಶಿವಪ್ರಸಾದ್ ಹೆಚ್.ಆರ್. | – 9964426476 |
| 4. | ಜಾರ್ಜ್ ಚಕ್ರವರ್ತಿ | – 8970511358 |
| 5. | ಎಂ.ವೈ. ಮಹಂತೇಶ್ | – 8970608060 |
| 6. | ಕೀಬೋರ್ಡ್ ನಾಗಭೂಷಣ್ | – 9448200988 |
| 7. | ಈಶ್ವರಾಚಾರ್, ಹಿರೇಮಗಳೂರು | – 9844009469 |
| 8. | ಅಶೋಕಶಾಸ್ತ್ರಿಗಳು, ಇಂದಾವರ | – 9845279122 |
| 9. | ಚಂದ್ರಣ್ಣ, ಸಿರಬಡಿಗೆ | – 9449315957 |
| 10. | ಎ.ಸಿ.ಮಹಾವೀರ್‌ಜೈನ್ | – 9449651723 |
| 11. | ಮಲ್ಲಿಗೆ ಸುಧೀರ್ | – 9844233905 |
| 12. | ಎಂ.ಎಸ್. ಸುಧೀರ್ | – 9448244332 |
| 13. | ಸಿ.ಬಿ. ವಿಶ್ವನಾಥ | – 9243983334 |
| 14. | ಎಂ.ಕೆ.ಶ್ರೀನಿಧಿ ಕೊಪ್ಪ | – |
| 15. | ಆರದವಳ್ಳಿ ಲೋಕೇಶ | – 9740559830 |
| 16. | ಅಭಿಷೇಕ್ | – 9945426287 |
| 18. | ಚಾಮುಂಡೇಶ್ವರಿ ವೀರಗಾಸೆ ತಂಡ, ಬೀಕನಹಳ್ಳಿ, ಚಿಕ್ಕಮಗಳೂರು | – 9845282908 |
| 19. | ಮುಮ್ತಾಜ್ ಬೇಗಂ | – 9449213914ಸ |
| 20. | ಜ್ಯೋತಿ, ನವರಸ ತಂಡ, ಚಿಕ್ಕಮಗಳೂರು | |
| 21. | ವೀರಗಾಸೆ ತಂಡ(ರುದ್ರೇಶ), ರಾಮದೇವರಹಳ್ಳಿ – 9481568125 | |

## ವಸ್ತ್ರಾಲಂಕಾರ ಸರಬರಾಜುದಾರರು

1. ಚನ್ನಬಸವೇಶ್ವರ ಡ್ರಾಮ ಸೀನರಿ, ದೇವನೂರು, ಕಡೂರು ತಾ.
9632449255, 08262-229553 (ಬಿ.ಬಿ.ಬಾಬು)
2. ರಾಜಣ್ಣ ಬೀಕನಹಳ್ಳಿ, ಚಿಕ್ಕಮಗಳೂರು ತಾ.
3. ಆರದವಳ್ಳಿ ಲೋಕೇಶ, ಚಿಕ್ಕಮಗಳೂರು ತಾ.

## ಚಿಕ್ಕಮಗಳೂರು ಜಿಲ್ಲೆಯ ನಾಟಕ – ಕೃತಿಗಳ ಲೇಖಕರು

1. ಯಮನ ಸೋಲು – ಡಾ. ಕುವೆಂಪು
2. ಜಲಗಾರ – ಡಾ. ಕುವೆಂಪು
3. ಬಿರುಗಾಳಿ – ಡಾ. ಕುವೆಂಪು
4. ಮಹಾರಾತ್ರಿ – ಡಾ. ಕುವೆಂಪು
5. ಸ್ಮಶಾನ ಕುರುಕ್ಷೇತ್ರಂ – ಡಾ. ಕುವೆಂಪು
6. ವಾಲ್ಮೀಕಿಯ ಭಾಗ್ಯ – ಡಾ. ಕುವೆಂಪು
7. ರಕ್ತಾಕ್ಷಿ – ಡಾ. ಕುವೆಂಪು
8. ಶೂದ್ರ ತಪಸ್ವಿ – ಡಾ. ಕುವೆಂಪು
9. ಬೆರಳ್‌ಗೆ ಕೊರಳ್ – ಡಾ. ಕುವೆಂಪು
10. ಬಲಿದಾನ – ಡಾ. ಕುವೆಂಪು
11. ಚಂದ್ರಹಾಸ – ಡಾ. ಕುವೆಂಪು
12. ನನ್ನ ಗೋಪಾಲ – ಡಾ. ಕುವೆಂಪು
13. ಮೋಡಣ್ಣ ತಮ್ಮ – ಡಾ. ಕುವೆಂಪು
14. ಕಾನಿನ – ಡಾ. ಕುವೆಂಪು

## (ಅಜ್ಜಂಪುರ ಸೂರಿಯವರ ಬಾನುಲಿ ನಾಟಕಗಳು)

15. ಕೊನೆಯಾಸೆ – ದಿ. ಅಜ್ಜಂಪುರ ಜಿ.ಸೂರಿ
16. ಕುಳ್ಳರು – ದಿ. ಅಜ್ಜಂಪುರ ಜಿ.ಸೂರಿ
17. ಬೋನಿಗೆ ಬಿದ್ದ ಹುಲಿ – ದಿ. ಅಜ್ಜಂಪುರ ಜಿ.ಸೂರಿ
18. ಸುಮಂಗಲಿಯರು – ದಿ. ಅಜ್ಜಂಪುರ ಜಿ.ಸೂರಿ
19. ಪ್ರೇತಗಳು – ದಿ. ಅಜ್ಜಂಪುರ ಜಿ.ಸೂರಿ
20. ಮರಗಡುಕ – ದಿ. ಅಜ್ಜಂಪುರ ಜಿ.ಸೂರಿ
21. ಧನ್ಯಾಭಿಕ್ಷು – ದಿ. ಅಜ್ಜಂಪುರ ಜಿ.ಸೂರಿ
22. ಒಂದೇ ಜನ ಒಂದೇ ಮನ – ದಿ. ಅಜ್ಜಂಪುರ ಜಿ.ಸೂರಿ


# ಸೂರಿಯವರ ರಂಗನಾಟಕಗಳು

| | | | |
|---|---|---|---|
| 23. | ಪರಿವರ್ತನೆ | – | ದಿ. ಅಜ್ಜಂಪುರ ಜಿ.ಸೂರಿ |
| 24. | ಅಂತರ | – | ದಿ. ಅಜ್ಜಂಪುರ ಜಿ.ಸೂರಿ |
| 25. | ಯಮಳ ಪ್ರಶ್ನೆ | – | ದಿ. ಪೂರ್ಣಚಂದ್ರತೇಜಸ್ವಿ |
| 26. | ತಾಟಕಿ | – | ರವೀಶ್ ಕ್ಯಾತನಬೀಡು |
| 27. | ದಂಡಗೊಂಡವರು | – | ರವೀಶ್ ಕ್ಯಾತನಬೀಡು |
| 28. | ಗುರು ನಿರ್ವಾಣಸ್ವಾಮಿ | – | ದಿ. ಕಾಶಿವಿಶ್ವನಾಥ ಶೆಟ್ಟಿ |
| 29 | ಅಮರ ಯೋಗಿ | – | ದಿ. ಕಾಶಿವಿಶ್ವನಾಥ ಶೆಟ್ಟಿ |
| 30. | ಸಂಬಂಧಗಳು | – | ಎಂ. ಯಶವಂತ |
| 31. | ಪರಿವರ್ತನೆ | – | ಎಂ. ಯಶವಂತ |
| 32. | ಯಾರ ತಪ್ಪು | – | ಎಂ. ಯಶವಂತ |
| 33. | ಕ್ಷಕಿರಣ | – | ಎಂ. ಯಶವಂತ |
| 34. | ಸಮಾಧಿ ಒಂದು ಕಲ್ಲು | – | ಕೆ.ಎಂ. ರೇವಣ್ಣ |
| 35 | ಅಕ್ಕ ನಾಗಮ್ಮ | – | ಕೆ.ಎಂ. ರೇವಣ್ಣ |
| 36. | ಬಾನಾಮತಿ | – | ಕೆ.ಎಂ. ರೇವಣ್ಣ |
| 37. | ಛಿದ್ರ | – | ದಿ. ಹೊಸ್ಕಾನ್ ಸೀನೋಜಿರಾವ್ |
| 38. | ನಡೆಮುಂದೆ | – | ದಿ. ಹೊಸ್ಕಾನ್ ಸೀನೋಜಿರಾವ್ |
| 39. | ಚಂದ್ರಪರಾಭವ | – | ಶ್ರೀಮತಿ ಬಿ.ಟಿ. ಲಲಿತಾನಾಯ್ಕ (ಬಾನುಲಿ ನಾಟಕ) |
| 40 | ಪ್ರವಾಸಿ | – | ದಿ. ತ.ಪು.. ವೆಂಕಟರಾಮ್ |
| 41. | ಮಹಾರತಿ ಭೀಷ್ಮ | – | ದಿ. ಅಜ್ಜಂಪುರ ವೆಂಕಟರಾಮ್ |
| 42 | ಮಧ್ಯಸ್ಥ | – | ದಿ. ಅಜ್ಜಂಪುರ ವೆಂಕಟರಾಮ್ |
| 43. | ಶ್ರೀರಾಮ ಪಟ್ಟಾಭಿಷೇಕ | – | ದಿ. ಅಜ್ಜಂಪುರ ವೆಂಕಟರಾಮ್ |
| 44. | ತಿರುಕರಾಜನ ಕನಸು | – | ಗುರುರಾಜತಂತ್ರಿ |
| 45. | ಪೆದ್ದುಗುಂಡ | – | ಗುರುರಾಜತಂತ್ರಿ |
| 46. | ದಾಹ | – | ಉಪೇಂದ್ರನಾಯ್ಕ |
| 47. | ಬೊಕ್ಕತಲೆಯ ನರ್ತಕಿ | – | ಸುಮತೀಂದ್ರ ನಾಡಿಗ್ |
| 48. | ಹನ್ನೊಂದು ಹಂಸಗಳು | – | ಸುಮತೀಂದ್ರ ನಾಡಿಗ್ |
| 49. | ಬೆಳ್ಳಕ್ಕಿ ಹಿಂಡು ಬೆದರ್ಯಾವೋ | – | ಗೊ.ರು. ಚನ್ನಬಸಪ್ಪ |
| 50. | ಸಾಕ್ಷಿ ಕಲ್ಲು | – | ಗೊ.ರು. ಚನ್ನಬಸಪ್ಪ |
| 51. | ಅಯ್ಯನ ಕೆರೆ | – | ಗೊ.ರು. ಚನ್ನಬಸಪ್ಪ |


| | | | |
|---|---|---|---|
| 52. | ಗಾಳಿ ಬೀಸಿತು | – | ಗೌ.ರು. ಓಂಕಾರಯ್ಯ |
| 53. | ಪ್ರತಿಫಲ | – | ಬಿ. ರವಿಕುಮಾರ್ |
| 54. | ಮಾದಕ ವಸ್ತು | – | ಬಿ. ರವಿಕುಮಾರ್ |
| 55. | ಚಟ್ಟ | – | ಬಿ. ರವಿಕುಮಾರ್ |
| 56. | ನಂಬಿಕೆಗಳು (ಬಾನುಲಿ ನಾಟಕ) | – | ಬಿ.ಎನ್. ಜ್ವಾಲನಪ್ಪ |
| 57. | ಕ್ಷಣದ ಸ್ವರ್ಗ ಬಾಳಿಗೆ ಹಗ್ಗ | – | ಬಿ.ಎನ್. ಜ್ವಾಲನಪ್ಪ |
| 58. | ಭಿನ್ನಹಕ್ಕೆ ಬಾಯಿಲ್ಲ | – | ಬಿ.ಜಿ. ನಾರಾಯಣಪ್ರಸಾದ್ |
| 59. | ಬಾಳ ಬಂಧನ | – | ದಾಸರಥಿ ದೀಕ್ಷಿತ್ |
| 60. | ಮಾವನ ಮನೆ | – | ದಾಸರಥಿ ದೀಕ್ಷಿತ್ |
| 61. | ಅಳಿಯ ದೇವರು | – | ದಾಸರಥಿ ದೀಕ್ಷಿತ್ |
| 62. | ಅಜ್ಜಿ ಆಸ್ತಿ | – | ದಾಸರಥಿ ದೀಕ್ಷಿತ್ |
| 63. | ಪ್ರೇತ ಸಂಹಾರ | – | ದಾಸರಥಿ ದೀಕ್ಷಿತ್ |
| 64. | ವೈದ್ಯನ ವಿವಾಹ | – | ದಾಸರಥಿ ದೀಕ್ಷಿತ್ |
| 65. | ಪಯೋನಿಧಿ | – | ಲಕ್ಷ್ಮೀದೇವಿ ಕಡಿದಾಳ್‌ಮಂಜಪ್ಪ |
| 66. | ಪುಣ್ಯಾಭಿಸಾರ | – | ಲಕ್ಷ್ಮೀದೇವಿ ಕಡಿದಾಳ್‌ಮಂಜಪ್ಪ |
| 67. | ಪ್ರಾಯಶ್ಚಿತ | – | ಈ.ಎಸ್. ಅಂಬ್ಲರ್ |
| 68. | ಸಮರ್ಪಣೆ | – | ಬಿ.ವೈ. ಬಾಂಡೋಳ್ಕರ್ ದೇವೋಜಿರಾವ್ |
| 69. | ರಾಜಕೀಯ | – | ಬ್ಯಾಗಡೆಹಳ್ಳಿ ಬಸವರಾಜ್ |
| 70. | ರಾಮಾಯಣ | – | ಬ್ಯಾಗಡೆಹಳ್ಳಿ ಬಸವರಾಜ್ |
| 71. | ಅಭಯ ನೀಡಿದ ಅಯ್ಯಪ್ಪ | – | ಬ್ಯಾಗಡೆಹಳ್ಳಿ ಬಸವರಾಜ್ |
| 72. | ಕರುಳಿನ ಸಂಬಂಧ | – | ಬ್ಯಾಗಡೆಹಳ್ಳಿ ಬಸವರಾಜ್ |
| 73. | ಪ್ರೇಮಿಗಳ ಫಲಿತಾಂಶ | – | ಬ್ಯಾಗಡೆಹಳ್ಳಿ ಬಸವರಾಜ್ |
| 74. | ನಾನು ಕಲ್ತಿದ್ರೆ ಚೆನ್ನಾಗಿತ್ತು | – | ಎಂ.ಎಸ್. ಕಲ್ಲಪ್ಪ |
| 75. | ಭವತಿ ಭಿಕ್ಷಾಂದೇಹಿ | – | ಎಂ.ಎಸ್. ಕಲ್ಲಪ್ಪ |
| 76. | ಬೆಂಗ್ಳೂರು ಬಣ್ಣ ಬಂದು ನೋಡ್ರಣ್ಣ | – | ಎಂ.ಎಸ್. ಕಲ್ಲಪ್ಪ |
| 77. | ಯುವಶಕ್ತಿ | – | ಡಿ.ಪಿ. ರಾಜಪ್ಪ |
| 78. | ದಿಬ್ಬಣ | – | ಡಿ.ಪಿ. ರಾಜಪ್ಪ |
| 78. | ಮದಾಲಸ ಚರಿತ್ರೆ | – | ಎಸ್. ಸತ್ಯನಾರಾಯಣಶೆಟ್ಟಿ |
| 80. | ವಾಸವಿ ವಿಜಯ | – | ಎಸ್. ಸತ್ಯನಾರಾಯಣಶೆಟ್ಟಿ |
| 81. | ವಾಸವಿ ಕನ್ನಿಕಾಪರಮೇಶ್ವರಿ | – | ಎಸ್. ಸತ್ಯನಾರಾಯಣಶೆಟ್ಟಿ |

| | | | |
|---|---|---|---|
| 82. | ಮಹಾತ್ಮ ಬಸವೇಶ್ವರ | – | ಎಸ್. ಸತ್ಯನಾರಾಯಣಶೆಟ್ಟಿ |
| 83. | ಸತ್ತನಾಯಿ | – | ಹುಲಿಕೆರೆ ಪುಲಕೇಶಿ |
| 84. | ಕುಡಿ ಬ್ಯಾಡ್ರೀ | – | ಹುಲಿಕೆರೆ ಪುಲಕೇಶಿ |
| 85. | ಸತ್ಯಕ್ಕೆ ದಾರಿ | – | ಹುಲಿಕೆರೆ ಪುಲಕೇಶಿ |
| 86. | ಅಲ್ಲಾ ಮಹಾ ಪ್ರಭು | – | ಹುಲಿಕೆರೆ ಪುಲಕೇಶಿ |
| 87. | ಭಾಗ್ಯ ಬಂತು ಬುದ್ಧಿ ಹೋಯ್ತು | – | ಹುಲಿಕೆರೆ ಪುಲಕೇಶಿ |
| 88. | ಅತ್ತೆ ಅಪುನಾತಿ ಸೊಸೆ ಸುಪುನಾತಿ | – | ಹುಲಿಕೆರೆ ಪುಲಕೇಶಿ |
| 89. | ಮುಖವಾಡದವರು | – | ಎ.ಸಿ.ಮಹಾವೀರ ಜೈನ್ |
| 90. | ಚಕ್ರವ್ಯೂಹ | – | ಟಿ.ಎಸ್.ಕಿಲ್ಲೇದಾರ್ |
| 91. | ಹಗರಣ | – | ಬಿಸಲೇಹಳ್ಳಿ ಸೋಮಶೇಖರ್ |
| 92. | ಆಸ್ತಿ ಪಾಲು | – | ಬಿಸಲೇಹಳ್ಳಿ ಸೋಮಶೇಖರ್ |
| 93. | ಮೀಡಿಯಾ | – | ಡಾ॥ ಕೆ.ಮರಳಸಿದ್ದಪ್ಪ |
| 94. | ದಿ ಡೆತ್ | – | ರಮೇಶ್ ಬೇಗಾರ್ |


# ಚಿಕ್ಕಮಗಳೂರು ಜಿಲ್ಲೆಯ ಕಲಾವಿದರು ಮತ್ತು ತಂತ್ರಜ್ಞರು



ದಿ|| ಸಿ.ಪಿ.ಪರಮೇಶ್ವರಪ್ಪ



ದಿ|| ಕೃಷ್ಣೋಜಿರಾವ್ ಚೌವ್ಹಾಣ್



ದಿ. ನಿರ್ಮಲಕುಮಾರ ಶಾಸ್ತ್ರಿ



ದಿ|| ಎಂ.ಎಸ್. ರಾಮಣ್ಣ



ದಿ|| ರವಿ




ದಿ|| ಚಿ.ನಾ. ನಾಗರಾಜ್




ಅಂಡಾನಪ್ಪ




ಎ.ಸಿ. ಮಹಾವೀರಜೈನ್



ಎ.ಎಸ್. ಕೃಷ್ಣಮೂರ್ತಿ




ಎ.ಸಿ.ಚಂದ್ರಪ್ಪ




ಎ.ಪಿ.ನಾಗರಾಜಶೆಟ್ಟಿ




ಬಿ.ಎನ್. ಜ್ವಾಲನಪ್ಪ




ಡಿ.ಎಂ. ಮಂಜುನಾಥಸ್ವಾಮಿ



ರವೀಶ್ ಕ್ಯಾತನಬೀಡು




ಕೆ.ಎನ್. ನವನೀತ



ಯೋವನ್‌ಜಾನ್




ಜಗದೀಶ ಆರ್.




ಕೃಷ್ಣೇಗೌಡ




ವಿನೀತ್‌ಕುಮಾರ್ ಎಂ.




ಎಂ.ಪಿ. ಜಯರಾಮ್




ಬಿಸಲೇಹಳ್ಳಿ ಸೋಮಶೇಖರ್




ಹುಲಿಕೆರೆ ಪುಲಕೇಶಿ
(ಮುಳ್ಳಪ್ಪಶೆಟ್ಟಿ)



ಬೀಕನಹಳ್ಳಿ ಬಸವರಾಜು




ಎಂ.ವೈ. ಮಹಂತೇಶ್




ಬಿ.ಎ. ಲೋಕೇಶ್




ಬಿ.ಆರ್. ಶ್ರೀನಿವಾಸಮೂರ್ತಿ




ಸೈಯದ್ ಷಹಾಬುದ್ದೀನ್



ಜಾರ್ಜ್ ಚಕ್ರವರ್ತಿ




ಗೋಪಿ



ಹೆಚ್.ಎಂ.ನಾಗರಾಜರಾವ್




ಎಂ.ಬಿ. ಶಿವಪ್ಪ



ರಾಮದಾಸಪ್ರಭು



ಬಿ. ರವಿಕುಮಾರ್




ಟಿ.ಆರ್. ನಾಗರಾಜ್




ರಮೇಶ್ ಬಂಗಾರ್



ವಿಶ್ವಕರ್ಮ ಆಚಾರ್ಯ




ವೈ. ಪುಟ್ಟಸ್ವಾಮಪ್ಪ



ಹೆಚ್.ಆರ್. ಶಿವಪ್ರಸಾದ್



ಶೃಂಗೇರಿ ಸುಬ್ಬಣ್ಣ




ಪಿ. ರಾಜೇಶ್




ಪಿ.ಸಿ. ಮ್ಯಾಥ್ಯು




ಸುರೇಶ್ ದೀಕ್ಷಿತ್




ಕೆ.ವೆಂಕಟೇಶ್



ಕೆ.ಎ. ಶ್ರೀನಿವಾಸ್




ಕೆ.ಚಂದ್ರಶೇಖರ




ಎಸ್. ಆಲೇಶ್




ಸದಾನಂದಶೆಟ್ಟಿ



ವೇಲಾಯುಧನ್



ಅಪೂರ್ವ




ಪಂಚಾಕ್ಷರಪ್ಪ ಆರ್.




ಜಗದೀಶ್ ಮಲ್ನಾಡ್




ರಮೇಶ್‌ಬೇಗಾರ್




ದಿನೇಶ್‌ಪಟವರ್ಧನ್



ಬಿ.ಎಲ್.ರವಿಕುಮಾರ್




ಜಿ. ಪ್ರಕಾಶ್



ಎ.ಬಿ.ಜಯರಾಮ್



ಎಂ. ಯಶವಂತ್



ಬಿ.ಬಿ. ಅರ್ಪಿತ



ವೈಷ್ಣವಿ ಎನ್.ರಾವ್



ರೇಖಾ ನಾಗರಾಜರಾವ್



ಮುಮ್ತಾಜ್ ಬೇಗಂ




ಸಪ್ತಶ್ರೀ ಹವ್ಯಾಸಿ ರಂಗ ಪ್ರದರ್ಶಿಸಿದ ಪತ್ರೆ ಸಂಗಪ್ಪನ ಕೊಲೆ ನಾಟಕ ಪ್ರದರ್ಶನ.



ಚಿಕ್ಕಮಗಳೂರು ಕಲಾಸೇವಾ ಸಂಘ, ಒಂಟಿಮನೆ ರಹಸ್ಯ



ಕಲಾಸೇವಾ–ಮಿತ್ರವೃಂದ, ಚಿಕ್ಕಮಗಳೂರು ; ಮಹಾಮಾಹಿ



ಚಿಕ್ಕಮಗಳೂರಿನ ನವರಸ ಕಲಾವಿದರಿಂದ – ಪ್ರಾಯಶ್ಚಿತ ನಾಟಕ.



ಕಲಾಸೇವಾ ಸಂಘ, ಚಿಕ್ಕಮಗಳೂರು – ಬಾಣಾಸುರ ನಾಟಕ ಪ್ರದರ್ಶನ.



ಕಲಾಸೇವಾ ಸಂಘ, ಚಿಕ್ಕಮಗಳೂರು – ಕರ್ಣಪರ್ವಂ ನಾಟಕ ಪ್ರದರ್ಶನ.



ರಮಿಕಲಾವಿದರು – ಏಕಲವ್ಯ



ಕಲಾಸೇವಾ ಸಂಘ, ಅಜ್ಜಂಪುರ – ಸೆಜುವಾನ್ ನಗರದ ಸಾದ್ವಿ



ರಮಿ ಕಲಾವಿದರು – ಇಮಾನ ಅಪಹರಣ



ಕಲಾ ಸೇವಾ ಸಂಘ, ಚಿಕ್ಕಮಗಳೂರು – ಮಹಾರಾತ್ರಿ




ನವರಸ ಕಲಾವಿದರು, ಚಿಕ್ಕಮಗಳೂರು– ಹೆಣ್ಣು ಕೊಟ್ಟ ಮಾವ, ಕಣ್ಣು ಕೊಟ್ಟ ದೇವರು




ಕಲಾಸೇವಾ ಸಂಘ, ಚಿಕ್ಕಮಗಳೂರು – ಅಳಿಯದೇವರು



ನವರಸ, ಚಿಕ್ಕಮಗಳೂರು –
ಬದುಕು



ನವರಸ, ಚಿಕ್ಕಮಗಳೂರು –
ಓಟಿನ ಏಟು




ಕ್ಯಾತನಬೀಡು ಪ್ರತಿಷ್ಠಾನ, ಚಿಕ್ಕಮಗಳೂರು– ಧನ್ವಂತರಿ ಚಿಕಿತ್ಸೆ



ಕ್ಯಾತನಬೀಡು ಪ್ರತಿಷ್ಠಾನ, ಚಿಕ್ಕಮಗಳೂರು– ಧನ್ವಂತರಿ ಚಿಕಿತ್ಸೆ




ಕಲಾಸೇವಾ ಸಂಘ, ಅಜ್ಜಂಪುರ – ಮಹಾರತಿ ಭೀಷ್ಮ



ಕ್ಯಾತನಬೀಡು ಪ್ರತಿಷ್ಠಾನ, ಚಿಕ್ಕಮಗಳೂರು– ದೇವರ ದಾಸಿಮಯ್ಯ



ಸಚೇತನ ಯುವಕ ಸಂಘ, ಮೂಡಿಗೆರೆ – "ರೋಮಿಯೋ ಲವ್ಸ್ ಅನಾರ್ಕಲಿ"




ಚಿಕ್ಕಮಗಳೂರಿನಿಂದ ಪ್ರಕಟವಾಗುತ್ತಿದ್ದ 'ರಂಗವೇಷ' ದ್ವೈಮಾಸಿಕ ಕೈಬರಹದ ಪತ್ರಿಕೆ



ಕುವೆಂಪು ಕಲಾಮಂದಿರ, ಚಿಕ್ಕಮಗಳೂರು.



ಡಾ॥ ಬಿ.ಆರ್. ಅಂಬೇಡ್ಕರ್ ಭವನ, ಚಿಕ್ಕಮಗಳೂರು.



ಎಂ.ಎಲ್.ವಿ. ರೋಟರಿ ಸಭಾಂಗಣ, ಚಿಕ್ಕಮಗಳೂರು.



ಕಲಾಶ್ರೀ ರಂಗಮಂದಿರ, ಅಜ್ಜಂಪುರ



ಕೈಲಾಸಂ ಕಲಾಕ್ಷೇತ್ರ, ಅಜ್ಜಂಪುರ.

ಆಕರ ಗ್ರಂಥಗಳು :


೧. ತರಳಬಾಳು ಹುಣ್ಣಿಮೆ ಸ್ಮರಣ ಸಂಚಿಕೆ

೨. ಮೂಡಿಗೆರೆ ತಾಲ್ಲೂಕು ಕುದುರೆಮುಖದಲ್ಲಿ ನಡೆದ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧ

೩. ರಂಗವೇಷ ಪತ್ರಿಕೆ

೪. ರಂಗತೋರಣ

೫. ಸೂತ್ರಧಾರ ಮತ್ತು ಈ ಮಾಸ ನಾಟಕ ಪತ್ರಿಕೆಯ ಸಂಚಿಕೆಗಳು